ಒಂದು ಕ್ರಿಯೇಷನ್ ಆಫ್ ಲೀಗಲ್ ಸೆಲ್, ಇನ್ನೊಂದು ಸೆಸ್ ವಿಚಾರ. ಅವರ ಪ್ರಕಾರ, it is not a tax. ಆದರೆ taxation includes cess also. ಎಂಬುದು ನಮ್ಮ ಅಭಿಪ್ರಾಯ. ಎಷ್ಟು ಹಣ ಬರುತ್ತದೆ ಎಂಬುದನ್ನು ಯಾರೂ ಕೂಡ ಹೇಳುವುದಕ್ಕಾಗುವುದಿಲ್ಲ. ಈಗ ನೀವು ಸಪ್ಲೈ ಮಾಡಿರುವ ಫೈನಾನ್ಷಿಯಲ್ ಮೆಮೋರ್‍ಯಾಂಡಂ ಏನು ಹೇಳುತ್ತದೆ ? ಇದರಲ್ಲಿ ಸೆಸ್ ವಿಚಾರದಲ್ಲಿ ಏನೊಂದು ಮಾತನ್ನೂ ಕೂಡ ತಾವು ಹೇಳಿಲ್ಲ. ಈಗ ಇದರಿಂದ ಪ್ರಪಂಚ ಏನೂ ಮುಳುಗಿ ಹೋಗುವುದಿಲ್ಲ. ಆದ್ದರಿಂದ ನಮ್ಮ ಅನಿಸಿಕೆ, ಇದನ್ನು ವಾಪಸ್ ತೆಗೆದುಕೊಳ್ಳಿ. ಫೈನಾನ್ಷಿಯಲ್ ಮೆಮೋರ್‍ಯಾಂಡಮ್‍ನ್ನು ಬಿಲ್ ಪಾಸ್ ಮಾಡುವಾಗ, ಅಥವಾ ಕನ್‌ಸಿಡರೇಷನ್ ಮಾಡುವಾಗ, ಸರ್ಕ್ಯುಲೇಟ್ ಮಾಡುವುದಲ್ಲ. ಈಗ ಕಾಲ ಇನ್ನೂ ಮಿಂಚಿಲ್ಲ. ಇದನ್ನೆಲ್ಲಾ ತಯಾರು ಮಾಡಿಕೊಂಡು ಸದನದ ಮುಂದೆ ಇಡಿ. ತಮ್ಮ ಕಾಲದಲ್ಲಿ ಇಂಥಾದ್ದು ಆಗಬಾರದು. ಮಾನ್ಯ ಸಭಾಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ವಾಪಸ್ ತೆಗೆದುಕೊಂಡು ಲೀಗಲ್ ಸೆಲ್ ಮತ್ತು ಸೆಸ್ ವಿಚಾರದಲ್ಲಿ ಫೈನಾನ್ಷಿಯಲ್ ಮೆಮೊರ್‍ಯಾಂಡಂ ಅಟ್ಯಾಚ್ ಮಾಡಿ ಸದನದ ಮುಂದೆ ಇಡಿ.

MR. SPEAKER.—I will keep my ruling reserved. ಬೇರೆ ಬಿಲ್ ತೆಗೆದುಕೊಳ್ಳೋಣ.

೧೯೮೬ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಕ್ಟ್ ಹಲವಾರು ಸಲ ತಿದ್ದುಪಡಿಯಾಗಿದೆ. ಹಿಂದೆ ಆದ ತಿದ್ದುಪಡಿ ಸಮಯದಿಂದ, ಈ ವರ್ಷ ಕಳೆದ ಕಾರಣ, ಹಣಕಾಸು ಖರ್ಚು ಮಾಡತಕ್ಕಂಥ ವಿಚಾರದಲ್ಲಿ ಹೆಚ್ಚಿನ ಅಧಿಕಾರವನ್ನು ಕೊಡತಕ್ಕ ಒಂದು ತಿದ್ದುಪಡಿಯನ್ನು ಇದರಲ್ಲಿ ಸೂಚಿಸಿದ್ದೇವೆ. ಇದನ್ನು ಸೆಕ್ಷನ್ ೧೧ರಲ್ಲಿ ತೋರಿಸಿದ್ದೇವೆ. ಆಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬೆಂಗಳಳೂರು ನಗರದ ಕಮಿಷನರ್ ಅವರನ್ನು ಎಕ್ಸ್‌ಅಫಿಷಿಯೋ ಸದಸ್ಯರನ್ನಾಗಿ ಮಾಡಬೇಕೆಂದು ಸೂಚನೆ ಇದೆ. ಹೆಲ್ತ್ ಡಿಪಾರ್ಟ್‌ಮೆಂಟ್ ಅಧಿಕಾರಿ ಬದಲು ಬೆಂಗಳೂರು ಕಾರ್ಪೊರೇಷನ್ ಕಮೀಷನರವರನ್ನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆಂದು ಸೂಚಿಸಿದೆ. ಈಗಿರತಕ್ಕಂಥ ಬಿ.ಡಿ.ಎ. ಆಕ್ಟ್ ಪ್ರಕಾರ ಇವರು ಯಾವ ವಿಧವಾದ ಉಸ್ತುವಾರಿ ನೋಡಿಕೊಳ್ಳತಕ್ಕ ಅಧಿಕಾರ ಇರಲಿಲ್ಲ. ಆದ್ದರಿಂದ ಒಂದೊಂದು ಸಲ ಅವರು ಮಾಡತಕ್ಕಂಥ ನಿರ್ಣಯಗಳು ಕಾನೂನಿಗೆ ವಿರುದ್ಧವಾಗಿದ್ದರೂ ಅವುಗಳನ್ನು ಜಾರಿಗೆ ತರತಕ್ಕ ಪ್ರಸಂಗಗಳು ಬರುತ್ತವೆ. ಈ ದಿಸೆಯಲ್ಲಿ ಹೈಕೋರ್ಟ್ ತೀರ್ಮಾನಗಳು ಆಗಿರುತ್ತವೆ ಅಥವಾ ಬೇರೆ ಸಮಯದಲ್ಲಿ ಆಗುತ್ತವೆ. ಇನ್ನು ಮುಂದೆ ಈ ತಿದ್ದುಪಡಿ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿರ್ಣಯ ಮಾಡತಕ್ಕ ಎಲ್ಲಾ ನಿರ್ಣಯಗಳನ್ನೂ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಇದರಲ್ಲಿ ಸೂಚನೆ ಮಾಡಿದ್ದೇವೆ. ಆಮೇಲೆ ಕೊನೆಯದು "ಕಾಫೀಸ್ ಆಫ್ ರೆಸಲ್ಯೂಷನ್" ಕೂಡ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಸೂಚನೆ ಮಾಡಿದ್ದೇವೆ. ಮಿಕ್ಕವು ಇದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳು ಮುಖ್ಯವಾದ ವಿಷಯಗಳು ಇಷ್ಟು. ಕಾಲಗತಿಯ ಹಿನ್ನೆಲೆಯಲ್ಲಿ ಮತ್ತು ಅನುಭವದ ಹಿನ್ನೆಲೆಯಲ್ಲಿ ಈ ತಿದ್ದುಪಡಿಗಳನ್ನು ಯೋಚನೆ ಮಾಡಿದ್ದೇವೆ. ಮಾನ್ಯಸಭೆ ಇದಕ್ಕೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಮಂಡಿಸುವುದಕ್ಕಿಂತ ಮುಂಚಿತವಾಗಿ, ಅವರಿಗೆ ಏನೇನು Explanatory statement ಹೇಳಿದ್ದಾರೆ, ಅದನ್ನೇ ಪುನರುಚ್ಚಾರ ಮಾಡಿದ್ದಾರೆ, ಇಂತಹ ತಿದ್ದುಪಡಿಗಳನ್ನು ತರುವುದಕ್ಕೆ ಏನೇನು ಕಾರಣಗಳು ಇದ್ದವು ಎಂಬುದನ್ನು ವಿವರವಾಗಿ ಹೇಳಿದ್ದರೆ ನಮಗೂ ಸಹಾಯವಾಗುತ್ತಿತ್ತು, ಮತ್ತು ಜನಗಳಿಗೂ ಸಹಾಯವಾಗುತ್ತಿತ್ತು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ತಿದ್ದುಪಡಿ ತಂದಿರತಕ್ಕಂಥಾದ್ದು ಮತ್ತು ಇದರ ಹಿನ್ನೆಲೆಯನ್ನು ನಾನು ಹೇಳುತ್ತೇನೆ. ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏನಿದೆ, ಈ ಸಂಸ್ಥೆ ಬಹಳ ದಿವಸಗಳಿಂದ ಇದೆ. ನಾನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿ ಆಗಿದ್ದಾಗ ಇದರ ಬಗ್ಗೆ ಬಹಳ ತೀವ್ರವಾಗಿರತಕ್ಕಂಥ ವಿಚಾರ ಮಾಡಿ, ಇಲ್ಲಿರತಕ್ಕಂಥಾದ್ದನ್ನು ಸರಿ ಮಾಡುವುದಕ್ಕೆ ಆಗಿನಿಂದ ಪ್ರಯತ್ನ ಮಾಡಿದೆ. ಆದರೆ ಅದು ಸರಿಯಾಗಲಿಲ್ಲ. ಸರಿಯಾಗಲಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ತೀವ್ರವಾಗಿ ನಾನು ಅದಕ್ಕೆ ಗಮನ ಕೊಡಲಿಲ್ಲ. ಹಾಗೇ ಉಳಿದುಕೊಂಡು ಬಂದಿದೆ. ಹಲವಾರು ವರ್ಷಗಳಿಂದ ಬಿ.ಡಿ.ಎ. ನಲ್ಲಿ ಏನೊಂದು ವ್ಯವಹಾರ ನಡೆದಿದೆ, ಏನು ಆಸ್ತಿಪಾಸ್ತಿಗಳು ಇದ್ದಾವೆ ಅವು ಯಾವುದಕ್ಕೂ ಲೆಕ್ಕ ಇಲ್ಲ. ಅದನ್ನು ಇದುವರೆಗೆ ಇಟ್ಟಿಲ್ಲ. ಲೆಕ್ಕಪತ್ರಗಳನ್ನು ಆಡಿಟ್ ಮಾಡಿರುತ್ತಾರೋ ಇಲ್ಲವೋ, ತನಿಖೆ ಮಾಡಿರುತ್ತಾರೋ ಇಲ್ಲವೋ ಎಂದು ಕೇಳಿದರೆ ಇದುವರೆಗೂ ತನಿಕೆಯಾಗಿಲ್ಲ. ೧೯೭೭ನೇ ಇಸವಿಯಿಂದಲೂ ಆಡಿಟ್ ಆಗಿಲ್ಲ. ಲೆಕ್ಕಪತ್ರಗಳ ತನಿಖೆಯಾಗಿಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಚೇರ್ಮನ್ ಆಗಿದ್ದೆ. ಆಗ ನಾನು ಸ್ವತಃ ನಮ್ಮ ಸಮಿತಿಯವರ ಜೊತೆಗೆ ಅಲ್ಲಿಗೆ ಭೇಟಿ ಕೊಟ್ಟಾಗ, ವಿವರ ಕೇಳಿದರೆ, ಪ್ರತಿಯಾಗಿ ಅದಕ್ಕೆ ಉತ್ತರವೇ ಇಲ್ಲ. ಬಂದ ಆದಾಯಕ್ಕೆ ಲೆಕ್ಕ ಇಲ್ಲ, ಖರ್ಚು ಮಾಡಿದ್ದಕ್ಕೆ ಲೆಕ್ಕ ಇಲ್ಲ. ಲೆಕ್ಕ ಇಟ್ಟುಕೊಂಡಿರತಕ್ಕಂಥಾದ್ದು ಕೈಗೇ ಸಿಗುವುದಿಲ್ಲ. ಇದುವರೆಗೆ ಸಿಕ್ಕಿಲ್ಲ. ಪುಸ್ತಕ ಇಲ್ಲ, ರೆಕಾರ್ಡ್ಸ್ ಇಲ್ಲ, ಯಾರಿಗೂ ಅದು ಸಿಕ್ಕಿಲ್ಲ. ಇಂತಹ ಒಂದು ಅವ್ಯವಸ್ಥೆ ಸರಕಾರದ ಕೆಳಗೆ ನೇರವಾಗಿ ನಡೆದಿದೆ. ಇಲ್ಲಿ ಕುಳಿತು ಕಣ್ಣಿನಿಂದ ನೋಡಿದರೆ ಬಿ.ಡಿ.ಎ. ಸಿಗುತ್ತದೆ. ನಾವು ಇಲ್ಲಿ ಇದ್ದೇವೆ. ಸರಕಾರ ಇದುವರೆಗೆ ಏತಕ್ಕೆ ಇದರ ಬಗ್ಗೆ ಗಮನಕೊಟ್ಟು ನೋಡಲಿಲ್ಲ ಎಂದು ಪ್ರಶ್ನೆ ಹಾಕಿದರೆ ನನಗೂ ಆಶ್ಚರ್ಯವಾಗುತ್ತದೆ. ಆಶ್ಚರ್ಯ ಏತಕ್ಕಾಗುತ್ತದೆ ಎಂದರೆ. ಇದರ ಹಿನ್ನೆಲೆಯಲ್ಲಿ ಹಿತಾಸಕ್ತಿಗಳು ಇವೆ. ಅದು ಸರಕಾರದಿಂದ ಆಗಬಹುದು, ಅಲ್ಲಿರತಕ್ಕಂಥ ಅಧಿಕಾರಿಗಳಿಂದಾಗಬಹುದು. ಅವರ ಒಪ್ಪಂದ ಒಡಂಬಡಿಕೆ ಮತ್ತು ಅವರ ವ್ಯವಹಾರಗಳು ಸಂಶಯಾಸ್ಪದವಾಗಿರತಕ್ಕಂಥಾವು. ಬಿ.ಡಿ.ಎ.ಗೆ ಕೋಟ್ಯಾಂತರ ರೂಪಾಯಿಗಳ ಆದಾಯ ಇದೆ. ಈ ಕೋಟ್ಯಾಂತರ ರೂಪಾಯಿಗಳ ಆದಾಯವನ್ನು ನಿಯಂತ್ರಿಸತಕ್ಕವರು ಯಾರು ? ಅದರ ಕಮೀಷನರ್ ಆಗಿರಬೇಕೇ, ಛೇರ್ಮನ್ ಆಗಿರಬೇಕೇ, ಅಲ್ಲಿರತಕ್ಕಂಥ ಅಧಿಕಾರಿಗಳಾಗಿರಬೇಕೆ ? ಹೋಗಲಿ, ಇವರು ಯಾರೂ ಮಾಡದೇ ಹೋದರೂ, ಯಾವ ಒಂದು ಏಜೆನ್ಸಿ, ಯಾರ ಮುಖಾಂತರ ಇದನ್ನು ಹತೋಟಿಗೆ ತರಬೇಕೆಂಬ ಯೋಚನೆ ಮಾಡಬೇಕು. ಇದನ್ನು ನೋಡಿದರೆ ಇದು ಹತೋಟಿಗೆ ಬರುವುದಿಲ್ಲ. ಇದುವರೆಗೂ ಬಂದಿಲ್ಲ. ಮತ್ತೆ ನಾವು ಇದರ ಬಗ್ಗೆ ಬಹಳ ಗಲಾಟೆ ಮಾಡಿದ್ದೇವೆ. ಹೋದಸಾರಿ ಚುನಾವಣೆಯಲ್ಲಿ ಗೆದ್ದ ಮೇಲೆ ಅಂದರೆ ೧೯೮೩ ರಲ್ಲಿ ಹೊಸದಾಗಿ ನೀವು ಬಂದಾಗ ನಾನು ಇಲ್ಲಿ ಇರಲಿಲ್ಲ. ಆಗ ಇದ್ದಂಥ ಮಾನ್ಯ ಸದಸ್ಯರುಗಳು ದೊಡ್ಡದಾಗಿ ಗಲಾಟೆ ಮಾಡಿದರು. ಆಗ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡಿದರು ಎಂದರೆ, ಈ ಬಿ.ಡಿ.ಎ. ವ್ಯವಹಾರಗಳ ಬಗ್ಗೆ ನಾನು ವೈಟ್ ಪೇಪರ್ ತರುತ್ತೇನೆ ಎಂದು ಹೇಳಿದರು. ಇದರ ಬಗ್ಗೆ ಯಾವ ಯಾವ ಹಿನ್ನೆಲೆಯಲ್ಲಿ ಇರತಕ್ಕಂಥ ಎಷ್ಟೆಷ್ಟು ಅವ್ಯವಹಾರ ಮಾಡಿದ್ದಾರೆ ಎಷ್ಟು ಸೈಟುಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ, ಎಷ್ಟು ದುರುಪಯೋಗ ಮಾಡಿದ್ದಾರೆ, ಎಷ್ಟು ಡಿನೋಟಿಫಿಕೇಷನ್ ಮಾಡಿದ್ದಾರೆ, ಎಷ್ಟು ರಿಕವ್ವೆ ಮಾಡಿರುತ್ತಾರೆ, ಯಾರು ಮಾಡಿದ್ದಾರೆ, ಏತಕ್ಕೆ ಮಾಡಿದ್ದಾರೆ, ಎಂಬುದರ ಬಗ್ಗೆ ಬಹಳ ಗಲಾಟೆ ಆದಮೇಲೆ, ಮಾನ್ಯ ಮುಖ್ಯಮಂತ್ರಿಗಳು ವೈಟ್ ಪೇಪರ್ ತರುತ್ತೇನೆಂದು ಹೇಳಿದರು. ಈಗ ವೈಟ್ ಪೇಪರ್ ತಂದಿದ್ದಾರೆ. ಈ ವೈಟ್ ಪೇಪರನ್ನು ನಾವು ಕೂಲಂಕುಷವಾಗಿ ಪರಿಶೀಲನೆ ಮಾಡಿದರೆ.

' The style of functioning of B.D.A. was criticised vehemently in both the Houses of the Legislature and at this juncture the Chief Minister made a statment on the

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

> floor of the House that a White Paper will be presented on B.D.A, in the House.

Then, in page 2 of the White Paper they have said about Maintenance of Accounts,

> Maintenance of Accounts:

The maintenance of accounts in the B.D.A. has been extremely unsatisfactory. The B.D.A. has not maintained such basic accounts as the Income and Expenditure account and the balance sheet. Even a Demand--Collection-Balance (DCB) statement of property tax has not been prepared.

According to Section 47 of the B.D.A. Act, the accounts of the Authority shall be audited annually by an auditor appointed by the Government. Government has entrusted the audit to the Comptroller and Auditor General of India by an order dated 29-9-1981. ಇದು ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಛೇರ್ಮನ್ ಆಗಿದ್ದಾಗ ಶಿಫಾರಸ್ಸು ಮಾಡಿದ ಮೇಲೆ ಸರಕಾರ ಒಪ್ಪಿ ಇದನ್ನು ಎನ್‌ಟ್ರಸ್ಟ್ ಮಾಡಿದರು.

> 'The Accontant General has observed that the B.D.A. has prepared only a monthly receipts and payments account. In the absence of income and expenditure account and balance sheet, the true state of affairs of the Authority cannot be ascertained'.

ಮಾನ್ಯ ಅಧ್ಯಕ್ಷರೇ, ಇಂತಹ ಒಂದು ಪರಿಸ್ಥಿತಿ ಈ ಬಿ.ಡಿ.ಎ.ನಲ್ಲಿ ನಿರಾತಂಕವಾಗಿ ನಡೆದು ಕೊಂಡು ಬಂದಿದೆ. ಮಂತ್‌ಲಿ ಇನ್‌ಕಂಮ್, ಎಕ್ಸ್‌ಪೆಂಡೀಚರ್ ಮಾಡದೇ ಇರತಕ್ಕಂಥ ಸಂಸ್ಥೆ ಇದು. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡತಕ್ಕ ಸಂಸ್ಥೆ ಬಿ.ಡಿ.ಎ. ಮಾತ್ರ. ಇದರ ವ್ಯವಹಾರ ಅಕೌಟೆಂಟ್ ಜನರಲ್ ಅವರ ಕೈಗೇ ಸಿಗಲಿಲ್ಲ. ಯಾವ ಪುಸ್ತಕ ಕೂಡಾ ಅಲ್ಲಿ ಇಲ್ಲ. ಇದಕ್ಕೆ ಯಾರು ಯಾರು ಕಾರಣರಾಗಿದ್ದಾರೆ ಅಂತಹವರನ್ನು ಗಲ್ಲಿಗೆ ಹಾಕಬೇಕು. ಇಲ್ಲ ಜೈಲಿಗೆ ಕಳುಹಿಸಬೇಕು. ಆದರೆ ಒಬ್ಬರ ಮೇಲೂ ಇವರು ಕೇಸನ್ನು ಹಾಕಿಲ್ಲ. ಅವರ ಮೇಲೆ ಬ್ರೀಚ್ ಆಫ್ ಟ್ರಸ್ಟ್ ಕೇಸ್ ಆಗಲಿ, ಮಿಸ್ ಅಪ್ರೊಪ್ರಿಯೇಷನ್ ಕೇಸ್ ಆಗಲೀ ಹಾಕಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರ ಹತ್ತಿರ ನಾನು ಏನು ಹೇಳುತ್ತಿದ್ದೇನೆ ಅದಕ್ಕೆ ಒಡಂಬಡಿಕೆ ಉಂಟು. ಏತಕ್ಕೆಂದರೆ ಅವರು ನಿಷ್ಠಾವಂತರು ಇದ್ದಾರೆ. ಅವರಲ್ಲಿ ಉಳಿದುದೆಲ್ಲವನ್ನೂ ಬಿಟ್ಟರೆ, ಒಂದು ಮಾತ್ರ ಹೇಳಬಹುದು, ಅವರು ನಿಷ್ಠಾವಂತರಿದ್ದಾರೆ, ಧರ್ಮಿಷ್ಟರಿದ್ದಾರೆ. ಇಷ್ಟು ನಾನು ಬಹಿರಂಗವಾಗಿ ಹೇಳುತ್ತೇನೆ. ನಾನೂ ಅವರೂ ಜಗಳ ಆಡುತ್ತೇವೆ, ಅದು ಬೇರೆ ವಿಷಯ. ಈ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯ ಏನೂ ಇಲ್ಲ. ಈ ಬಿ.ಡಿ.ಎ. ನಲ್ಲಿ ಇರತಕ್ಕಂಥ ಜನ ಏನಿದ್ದಾರೆ, ಅವರು ಕೋಟ್ಯಾಂತರ ರೂಪಾಯಿ ಗಳನ್ನು ಮಾಡಿಕೊಂಡು ಹೋಗಿದ್ದಾರೆ. ಅದರಲ್ಲೂ ಈ ನಾನ್ ಅಫಿಷಿಯಲ್ ಛೇರ್ಮೆನ್‌ಗಳು ಬಂದರು ಅದರಲ್ಲೂ ಒಬ್ಬರು ಕೆ. ಕೆ. ಮೂರ್ತಿ ಎಂದು ಬಂದರು,

ಅಧ್ಯಕ್ಷರು.—ನೀವು ಸೀನಿಯರ್ ಪಾರ್ಲಿಮೆಂಟೇರಿಯನ್ ಇದ್ದೀರಿ, ಅವರ ಹೆಸರು ಏತಕ್ಕೆ ತೆಗೆದುಕೊಳ್ಳುತ್ತೀರಿ. ಈ ಸಭೆಯಲ್ಲಿ ಇದ್ದವರ ಹೆಸರು ಹೇಳಿ, ಈ ಸಭೆಯಲ್ಲಿ ಇಲ್ಲದವರ ಹೆಸರು ಹೇಳಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ರಿಪೋರ್ಟ್‌ನಲ್ಲಿ ಅವರ ಹೆಸರು ಇದೆ.

ಅಧ್ಯಕ್ಷರು.—ಪುಸ್ತಕದಲ್ಲಿ ಇರಬಹುದು, ಆದರೆ ತಾವು ಹೆಸರು ಹೇಳಬಾರದು ಮಾಜಿ ಅಧ್ಯಕ್ಷರು ಎಂದು ಬೇಕಾದರೆ ಹೇಳಿ. ನೀವು ಹಳೇ ಪಾರ್ಲಿಮೆಂಟೇರಿಯನ್ ನಿಮಗೆ ನಾವು ಹೇಳಿಕೊಡ ಬೇಕೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ವೈಟ್ ಪೇಪರ್‌ನಲ್ಲಿ ನೋಡಿ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅವರು ಏನಾದರೂ ತಪ್ಪು ಹಾಗೂ ಲೋಪದೋಷಗಳನ್ನು ಮಾಡಿದ್ದರೆ ಅದನ್ನು ಎತ್ತಿತೋರಿಸಿ. ಮಾಜಿ ಅಧ್ಯಕ್ಷರು ಎಂದು ಹೇಳಿ, ಹೆಸರು ತೆಗೆದುಕೊಳ್ಳಬೇಡಿ. You are a senior Parliamentarian. You know the rules......

ಶ್ರೀ ಎ. ಲಕ್ಷ್ಮೀಸಾಗರ್.—ಹೆಸರು ರಿಪೋರ್ಟಿನಲ್ಲಿ ಇದ್ದರೆ ಓದದೇ ಇರುವುದಕ್ಕೆ ಆಗುವುದಿಲ್ಲ, ಅಲ್ಲಿ ಇದ್ದರೆ ಓದಬಹುದು, ಅಲ್ಲಿ ಹೇಳದಿರುವ ಹೆಸರನ್ನು ಹೇಳಿದರೆ ತಪ್ಪಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಕೆ. ಕೆ. ಮೂರ್ತಿ ಎನ್ನುವವರು......

ಅಧ್ಯಕ್ಷರು.—ಹೆಸರು ತೆಗೆದುಕೊಳ್ಳಬೇಡಿ......

ಶ್ರೀ ವೇದಾಂತ ಹೆಮ್ಮಿಗೆ.—ಕೆ. ಕೆ. ಮೂರ್ತಿ ಯಾರ ಪ್ರಾಡಕ್ಟ್ ?

ಅಧ್ಯಕ್ಷರು.—ರೂಲ್ಸ್ ಆಫ್ ಪ್ರೊಸೀಜರ್‌ಗೆ ತಿದ್ದುಪಡಿ ಆಗಿಲ್ಲ. ಆದುದರಿಂದ ಹೆಸರು ತೆಗೆದುಕೊಳ್ಳಬೇಡಿ. ತಿದ್ದುಪಡಿ ಆದಮೇಲೆ ಬೇಕಾದರೆ ಹೆಸರು ತೆಗೆದುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಕೆ. ಕೆ. ಮೂರ್ತಿಯವರ ಹೆಸರು ತೆಗೆದುಕೊಳ್ಳಬೇಡಿ ಎಂದು ಹೇಳಿದಿರಿ. ಈ ರಿಪೋರ್ಟ್‌ನಲ್ಲಿರುವುದನ್ನು ಓದಿಬಿಟ್ಟರೆ ಸರಿಹೋಗುತ್ತದೆ ಅಲ್ಲವೇ ? white paper an the Bangalore Development Authority ಇದರಲ್ಲಿ table 4 denotification an land being acquired by B. D. A. during 1981-82, 83--page 11ನ್ನು ಓದಿದರೆ ಗೊತ್ತಾಗುತ್ತದೆ. ಆಗ ಚೇರ್ಮನ್ ಆಗಿದ್ದವರ ಹೆಸರನ್ನು ಈಗ ಹೇಳಲೇಬೇಕಾಗುತ್ತದೆ. ಅವರೇ ಶ್ರೀಮಾನ್ ಕೆ. ಕೆ. ಮೂರ್ತಿಯವರು. ಇವರು "ವಯ್ಯಾಲಿಕಾವಲ್ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿ" ಎಂದು ಫಾರಂ ಮಾಡಿ ಸುಮಾರು ೧೮೨ ಎಕರೆ ೨೪ ಗುಂಟೆ ಜಮೀನನ್ನು ಡೀ-ನೋಟಿಫೈ ಮಾಡಿದ್ದಾರೆ. ಇದೇ ರೀತಿ ಇನ್ನೂ ಹಲವಾರು ಕಡೆ ಜಮೀನುಗಳನ್ನು ಅಕ್ವೈಯರ್ ಮಾಡಿಕೊಂಡು ಕೊನೆಗೆ ಡೀ-ನೋಟಿಫೈ ಮಾಡಿದ್ದಾರೆ. ಬಿ.ಡಿ.ಎ. ನವರು ಜಮೀನುಗಳನ್ನು ಅಕ್ವೈಯರ್ ಮಾಡಿಕೊಂಡು ಸೈಟುಗಳನ್ನು ಮಾಡಿ ಯಾರು ಯಾರು ಅರ್ಹರಿದ್ದಾರೋ ಅಂತಹವರಿಗೆ ಸೈಟುಗಳನ್ನು ಅಲಾಟ್ ಮಾಡಬೇಕು. ಬಡವರಿಗೂ ಸೈಟುಗಳನ್ನು ಬಿ.ಡಿ.ಎ. ಮೂಲಕ ಕೊಡಬೇಕಾಗುತ್ತದೆ. ಆದರೆ ಇವರು ಆ ಕೆಲಸವನ್ನು ಮಾಡದೇ ಜಮೀನುಗಳ ವ್ಯವಹಾರ ಮಾಡಿದ್ದಾರೆ. ಮೊದಲು ಜಮೀನುಗಳನ್ನು ಖರೀದಿ ಮಾಡುವುದು, ಸೈಟುಗಳನ್ನು ಫಾರಂ ಮಾಡುತ್ತೇವೆಂದು ಜನಗಳಿಂದ ಹಣ ವಸೂಲು ಮಾಡುವುದು. ಆಮೇಲೆ ಆ ಜಮೀನಿನಲ್ಲಿ ರೋಡು ಮಾಡುವುದಿಲ್ಲ, ಸೈಟುಗಳನ್ನು ಮಾಡುವುದಿಲ್ಲ. ಹೀಗೆ ಹಲವಾರು ವರ್ಷಗಳಾದ ನಂತರ ಡೀ-ನೋಟಿಫಿಕೇಷನ್ ಮಾಡಿ ಪುನಃ ಮೊದಲಿದ್ದ ಮಾಲೀಕರಿಗೆ ಜಮೀನನ್ನು ಮಾರಿಬಿಡುವುದು. ಕೆಲವು ಜನರು ಇಂತಹ ಡೀ-ನೋಟಿಫೈಡ್ ಆದ ಜಮೀನಿನಲ್ಲೂ ಮನೆಗಳನ್ನು ಕಟ್ಟಿಕೊಂಡರು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

It is called open connivance by the BDA authority for allowing construction of houses on the lands acquired by the BDA. ಸೈಟುಗಳನ್ನು ಮಾಡುವುದನ್ನು ಬೇಕಾಗಿಯೇ ಡಿಲೇ ಮಾಡುತ್ತಾರೆ. ಡಿಲೇ ಯಾರು ಮಾಡುತ್ತಾರೆ ಎಂದರೆ, ಬಿ.ಡಿ.ಎ.ನಲ್ಲಿ ಅಕ್ವಿಸಿಷನ್ ಆಫೀಸರ್‌ಗಳು ಇದ್ದಾರೆ, ಅವರು ಈ ಡಿಲೇ ಮಾಡುತ್ತಾರೆ. ಬಿ.ಡಿ.ಎ. ನಲ್ಲಿ ನಡೆಯುವ ಮರ್ಮವನ್ನು ತಿಳಿದುಕೊಳ್ಳಬೇಕಾದರೆ ಬಹಳ ಕಷ್ಟ. ಮಾನ್ಯ ಲಕ್ಷ್ಮೀಸಾಗರ್‌ರವರು ನಾನು ಹೇಳುವುದನ್ನು ಸ್ವಲ್ಪ ಕಿವಿಗೊಟ್ಟು ಕೇಳಬೇಕು. ಈ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ಗಳೇ ಲಕ್ಷಾಂತರ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ. ಇವರು ಜಮೀನುಗಳನ್ನು ಮೊದಲು ಅಕ್ವೈರ್ ಮಾಡಿಕೊಳ್ಳುವುದು, ನಂತರ ಅಲ್ಲಿ ಸೈಟುಗಳನ್ನು ಮಾಡುವ ಹಾಗಿಲ್ಲ, ರೋಡುಗಳನ್ನು ಮಾಡುವ ಹಾಗಿಲ್ಲ ಹಾಗೇ ಬಿಟ್ಟು ಬಿಡುವುದು. ಈ ಜಾಗದಲ್ಲಿ ಯಾರು ಬೇಕಾದರೂ ಮನೆ ಕಟ್ಟಿಕೊಳ್ಳಬಹುದು, ಯಾರು ಬೇಕಾದರೂ ಅಕ್ಯುಪೈ ಮಾಡಿಕೊಳ್ಳಬಹುದು. ಕೊನೆಗೆ ಮೊದಲು ಕೊಂಡು ಕೊಂಡ ಮಾಲೀಕರಿಗೆ ಆ ಜಮೀನನ್ನು ವಾಪಸ್ಸು ಬರೆದುಬಿಡುವುದು. ಇವರು ಯಾರ ಹತೋಟಿಗೂ ಒಳಪಟ್ಟಿಲ್ಲ. ಇಂತಿಂಥ ಅವ್ಯವಹಾರಗಳು ನಡೆದು ಲಕ್ಷಾನುಗಟ್ಟಲೇ, ಕೋಟ್ಯಾನುಗಟ್ಟಲೇ ಹಣವನ್ನು ಸಂಪಾದನೆ

ಮಾಡಿದ್ದಾರೆ. ಇಂತಹ ಜನಗಳನ್ನು ನಾವು ಏನು ಮಾಡಬೇಕೆಂದು ಕೇಳುತ್ತಿದ್ದೇನೆ. ಯಾರೇ ಆಗಲೀ, ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಮಾಡಬೇಕೆಂದು ತಾನೇ ಕಾನೂನು ಮಾಡಿರುವುದು. ಪಬ್ಲಿಕ್ ಪ್ರಾಪರ್ಟಿಯನ್ನು ಜವಾಬ್ದಾರಿ ಸ್ಥಾನದಲ್ಲಿದ್ದು ಈ ಜನಗಳಿಗೂ ಮತ್ತು ಸರ್ಕಾರಕ್ಕೆ ಮೋಸ ಮಾಡ ತಕ್ಕಂಥ ಜನಗಳಿಗೆ ನಾವು ಹಾಗೆಯೇ ಕೈ ಬಿಟ್ಟರೆ ಅವರು ಸಮಾಜದಲ್ಲಿ ದೊಡ್ಡ ಮನುಷ್ಯರಂತೆ ಬಾಳುತ್ತಿರುತ್ತಾರೆ. ಸುಮಾರು ೨೪೪ ಸೈಟುಗಳನ್ನು ಯಾರಿಗೂ ಕೇಳದ ಹಾಗೆ, ಬಿ.ಡಿ.ಎ. ಅಥಾರಿಟಿಗೂ ಹೇಳದ ಹಾಗೆ ಅವರು ಇಷ್ಟ ಬಂದವರಿಗೆ ಅಲಾಟ್ ಮಾಡಿದ್ದಾರೆ. ಇವರು ಒಂದೊಂದು ಸೈಟಿಗೂ ಒಂದೊಂದು ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿಕೊಂಡಿದ್ದಾರೆ. ಈ ಹಣದಲ್ಲಿ ಯಾರು ಯಾರಿಗೆ ಭಾಗ ಕೊಟ್ಟರು ಎಂಬ ಮಾತು ಬೇರೆ ವಿಚಾರ. ಇಂಥ ಒಬ್ಬ ಮನುಷ್ಯನನ್ನು ಚೇರ್ಮನ್ ಮಾಡಿ, ಇಂಥ ಚೇರ್ಮನ್ ಮಾಡಿರುವ ಅವ್ಯವಹಾರದ ಬಗ್ಗೆ ಅಸೆಂಬ್ಲಿಯಲ್ಲಿ ಸದಸ್ಯರು ಗಲಾಟೆ ಮಾಡಿದರೂ ಕೂಡ ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ನಿಶ್ಶಕ್ತರಾಗಿದ್ದೀರಿ. ಇದು ಸರಿಯಲ್ಲ. ಈ ಸಭೆಗೆ ಗೌರವ ಇದ್ದರೆ, ಈ ರಿಪೋರ್ಟ್‌ನಲ್ಲಿ ಏನು ಇದೆ, ಈ ರಿಪೋರ್ಟ್‌ನಲ್ಲಿ ಯಾರು ಯಾರು ತಪ್ಪು ಮಾಡಿದ್ದರೆಂದು ಇದೆಯೋ ಅವರ ಮೇಲೆ ನೀವು ಶಿಕ್ಷೆ ಮಾಡಬೇಕು. ನೀವು ಅವರುಗಳ ಮೇಲೆ ಶಿಕ್ಷೆ ಮಾಡದೇ ಹೋದರೆ ಜನಗಳಿಗೆ ನಿಮ್ಮ ಸರ್ಕಾರದ ಮೇಲೆ ಯಾವ ರೀತಿ ನಂಬಿಕೆ ಬರುತ್ತದೆ? ನೀವು ವಾಗ್ದಾನ ಮಾಡಿದ ಹಾಗೆ ಎಲ್ಲಿ ಅಪರಾಧಗಳು ನಡೆಯುತ್ತವೆಯೋ ಅಲ್ಲಿ ಕಣ್ಣಿನಲ್ಲಿ ಕಣ್ಣು ಇಟ್ಟು ಕೆಲಸ ಮಾಡದೇ ಹೋದರೆ ಜನಗಳಲ್ಲಿ ನಿಮ್ಮ ಮೇಲೆ ನಂಬಿಕೆ ಬರುವುದಿಲ್ಲ. ಜವಾಬ್ದಾರಿ ಸ್ಥಾನದಲ್ಲಿ ಇದ್ದು ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾ ಯಾರ ಭಯ ಇಲ್ಲದೇ ಇರುವವರಿಗೆ ಶಿಕ್ಷೆ ಕೊಡಬೇಕು. ಮಾನ್ಯ ಲಕ್ಷ್ಮಿಸಾಗರ್‌ರವರಿಗೆ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಈಗ ಏನು ವೈಟ್ ಪೇಪರ್ ಕೊಟ್ಟಿದ್ದೀರಿ, ಆ ವೈಟ್ ಪೇಪರ್ ಮೇಲೆ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಯಾವ ಸೆಕ್ಷನ್ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಆ ಸೆಕ್ಷನ್‌ಗಳ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ೧೯೮೨ರಲ್ಲಿ ಯಾರು ಅಧ್ಯಕ್ಷರಾಗಿದ್ದರೋ ಅವರ ಹೆಂಡತಿಯ ತಂಗಿ ಶ್ರೀಮತಿ 'ವಸಂತ' ಅವರು ಒಂದು ಪತ್ರವನ್ನು ಬರೆದಿದ್ದಾರೆ. She writes a letter to the Chairman, BDA, Bangalore on 20-8-82, requesting for allotment of a stray site in Rajamahal Vilas Extension. Then, on the same letter, Sri K.K. Murthy, as the Chairman, passes orders on 10-12-1982, saying 'please allot today itself'. ಈ ಸೈಟನ್ನು, ಅವರ ಹೆಂಡತಿ ತಂಗಿಯಾದ ವಸಂತ ಅವರಿಗೆ ಅಲಾಟ್ ಮಾಡಿದ್ದಾರೆ. ಈ ವಿಷಯ ಬಿ.ಡಿ.ಎ. ಅಥಾರಿಟಿಯ ಮುಂದೆ ಏನೂ ಹೋಗಿಲ್ಲ. ಮಾನ್ಯ ಅಧ್ಯಕ್ಷರೇ ನಾನು ಓದಿರುವುದೆಲ್ಲಾ ಇದರಲ್ಲಿ ಪ್ರಿಂಟ್ ಆಗಿದೆ. ನಾನು ಬೇರೆ ಏನೂ ಹೇಳುತ್ತಿಲ್ಲ. ಆಮೇಲೆ ಬಾಂಬೆಯಿಂದ ಬಂದಿರತಕ್ಕ ಜನಗಳು ಏನು ಇದ್ದಾರೆ ಅಂಥವರಿಗೂ ಸೈಟುಗಳನ್ನು ಅಲಾಟ್ ಮಾಡಿದ್ದಾರೆ. ಜಗಮೋಹನ್‌ದಾಸ್ (ಹೆಚ್.ಎಸ್. ಸೋನಿ ವಾಲ) ಅವರು ಬಿ.ಡಿ.ಎ. ಚೇರ್ಮನ್ನರಿಗೆ ಈ ರೀತಿ ಪತ್ರ ಬರೆದಿದ್ದಾರೆ. He writes a letter on 6th June 1982 to the Chairman, BDA. which is as follows :

> "Sub : Request for allotment of a stray site in Rajamahal Vilas Extension Ist Stage.
>
> --
>
> I, therefore, request you to kindly allot me a stray site measuring 60'x90' in Rajamahal Vilas Extension Ist Stage."

Now, Mr. K.K. Murthy as the Chairman of the BDA on 6-12-1982 passes an order allotting a site measuring 60'x90 (Site No. 94) ಇಂಥ ವೈಖರಿ ಇರುವ ಚೇರ್ಮನ್ ಬಿ.ಡಿ.ಎ. ನಲ್ಲಿ ಇದ್ದರೆ ಹೇಗೆ ? ಪಬ್ಲಿಕ್ ಪರವಾಗಿ ಕೆಲಸ ಮಾಡಲೆಂದು ಇವರನ್ನು ಅಧಿಕಾರದಲ್ಲಿ ಬಿಟ್ಟರೆ, ಯಾರೋ ಒಬ್ಬ ಬಾಂಬೆಯಿಂದ ಸೈಟ್ ಬೇಕೆಂದು ಲೆಟರ್ ಬರೆದರೆ ಅವರಿಗೆ ಸೈಟನ್ನು ಅಲಾಟ್ ಮಾಡಿದ್ದಾರೆ. ಇವರಿಗೆ ಸೈಟ್ ಅಲಾಟ್ ಮಾಡಬೇಕಾದರೆ ಏನು ಸುಮ್ಮನೆ ಮಾಡಿದ್ದಾರೆಯೇ ? ಇದರಲ್ಲಿ ಸಾಕಷ್ಟು ದುಡ್ಡಿನ ವ್ಯವಹಾರ ನಡೆದೇ ಇದೆ. ಇಂಥ ಮನುಷ್ಯ ಇಂಥಿಂಥ ಕೆಲಸಗಳನ್ನು ಮಾಡಿದ್ದಾರೆ. ಆಮೇಲೆ One Mr. Mohan Lal P. Shaw

writes a letter for the grant of a site measuring 40'x60' in Bangalore City. Mr. K.K. Murthy as the Chairman of the BDA allots a site bearing No. 633(b) at Jayanagar 7th Block. ಈ ಸೈಟ್‌ಗಳ ಸ್ಯಾಂಕ್ಷನ್‌ಗೆ ಫೈಲ್‌ಗಳು ಬಿ.ಡಿ.ಎ. ಅಥಾರಿಟಿಯ ಮುಂದೆ ಹೋಗತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಈ ರೀತಿ ಹಲವಾರು ಕೆಲಸಗಳನ್ನು ಇವರು ಮಾಡಿದ್ದಾರೆ. ಅವರ ನೆಂಟರಿಗೆ, ಅವರ ಹೆಂಡತಿ ತಂಗಿಗೆ ಅವರಿಗೆ ಬೇಕಾದವರಿಗೆ ಸೈಟುಗಳನ್ನು ಹಂಚುವುದಕ್ಕೇನು ಅವರನ್ನು ಜವಾಬ್ದಾರಿ ಸ್ಥಾನದಲ್ಲಿ ಕೂಡಿಸಿರುವುದು ? ಇಂಥ ಅಯೋಗ್ಯರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಹೇಗೆ ? ಇಂಥ ಕ್ರಿಮಿನಲ್ ಕೆಲಸ ಮಾಡಿರುವವರು ಸ್ವತಂತ್ರ್ಯವಾಗಿ ತಿರುಗುವುದಕ್ಕೆ ಬಿಟ್ಟಿದ್ದಾರೆ. ಇಂತಿಂಥ ಕೃತ್ಯ ಮಾಡತಕ್ಕಂಥ ಜನರಿಗೆ ನೀವು ಸ್ವಾತಂತ್ರ್ಯ ಕೊಟ್ಟರೆ ಮುಂದೆ ಬರತಕ್ಕಂಥವರು ಹೆದರಿಕೆ ಇಲ್ಲದೇ ಇದೇ ರೀತಿಯಾಗಿ ಕೆಲಸ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ ನಾನು ಸ್ಪಷ್ಟವಾಗಿ ಮಂತ್ರಿಯವರಿಗೆ ಹೇಳುತ್ತಿದ್ದೇನೆ. ಯಾರು ಯಾರು ಇಂಥಿಂಥ ಅಯೋಗ್ಯ ಕೆಲಸಗಳನ್ನು ಮಾಡಿದ್ದಾರೆ, ಯಾರು ಯಾರು ಪಬ್ಲಿಕ್ ಪ್ರಾಪರ್ಟಿಯನ್ನು ತನ್ನ ಸ್ವಂತದ್ದಾಗಿ ಇಟ್ಟುಕೊಂಡು ಯಾವ ರೀತಿ ಹಣವನ್ನು ವಸೂಲು ಮಾಡಿಕೊಂಡಿ

೩–೦೦ ಪಿ. ಎಂ.

ದ್ದಾರೋ ಅವರು ಆಸ್ತಿಗಳನ್ನು ಮಾಡಿಕೊಂಡು ಮೆರೆಯುತ್ತಾ ಇದ್ದಾರೆ. ಅಂತಹವರ ಮೇಲೆ ತಾವುಗಳು ಕಣ್ಣಲ್ಲಿ ಕಣ್ಣು ಇಟ್ಟು, ಅಂತಹ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿನ ದಿನನಿತ್ಯದ ಕಾರ್ಯಕ್ರಮಗಳನ್ನು ಕಣ್ಣಿಟ್ಟು ನೋಡಿ, ಆವರುಗಳು ಸರಿಯಾಗಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆಯೇ ಇಲ್ಲವೇ ಎಂದು ನೋಡಬೇಕು. ಯಾವ ರೀತಿಯಲ್ಲಿ ದುರಹಂಕಾರದಿಂದ ಮೆರೆಯುತ್ತಾ ತಮ್ಮವರಿಗೆ ಮಾತ್ರ ಆಸ್ತಿಗಳನ್ನು ಕೊಟ್ಟು, ವಸೂಲಿ ಬಾಜಿ ಮಾಡುತ್ತಿದ್ದಾರೋ ಅದನ್ನು ಸೂಕ್ಷ್ಮವಾಗಿ ಅರಿತುಕೊಂಡು ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು. ಅವರು ಬೇನಾಮಿ ವ್ಯವಹಾರಗಳನ್ನು ಎಷ್ಟೋ ಮಾಡುತ್ತಾರೆ ? ಇಂತಹ ಸುಮಾರು ೭ ಸೈಟ್‌ಗಳನ್ನು ಅವರು ಇಟ್ಟುಕೊಂಡಿದ್ದಾರೆ. ಅವರ ಹೆಂಡತಿಯ ತಮ್ಮ, ಬ್ರದರ್–ಇನ್–ಲಾ, ಅವರ ಹೆಸರನ್ನೂ ಹೇಳುತ್ತೇನೆ, ರೂಪ್‌ಕುಮಾರ್ ಎಂದು. ಅವರಿಗೆ ಮನೆಯೂ ಇದೆ, ಸೈಟ್ ಕೂಡ ಇದೆ, ಅವರು B.W.S.S.B. ಬೋರ್ಡ್‌ನಲ್ಲಿ ಕೆಲಸವನ್ನೂ ಕೂಡ ಮಾಡುತ್ತಿದ್ದಾರೆ, ಅಂತಹವರಿಗೆ ರಾಜ್‌ಮಹಲ್ ಎಕ್ಸ್‌ಟೆನ್‌ಶನ್‌ನಲ್ಲಿ ಸೈಟ್‌ನ್ನು ಕೊಟ್ಟಿದ್ದಾರೆ. ಹೀಗೆ ಅವ್ಯವಹಾರವನ್ನು ಮಾಡುವವರಿಗೆ ಹೆದರಿಕೆ ಇಲ್ಲದೇ ಹೋದರೆ, ಸರಕಾರದವರು ನಾವು ಇದ್ದು ಏನು ಪ್ರಯೋಜನ ? ಇಂತಹ ವಿಷಯಗಳಲ್ಲಿ ಜನ ಸಾಮಾನ್ಯರ ರಕ್ಷಣೆಯನ್ನು ನೀವು ಹೇಗೆ ಮಾಡುತ್ತೀರಿ? ಸಾವಿರಾರು ಜನರು ಸೈಟ್‌ಗೋಸ್ಕರ ಸಾಲಾಗಿ ನಿಂತಿದ್ದಾರೆ. ಹಿಂದೆ ಬಿ. ಟಿ. ಸೋಮಣ್ಣನವರ ಕಾಲದಲ್ಲಿ ಬಡವರಿಗೆ ಸೈಟ್‌ಗಳನ್ನು ಕೊಡುತ್ತೇವೆ ಎಂದು ಅರ್ಜಿಗಳನ್ನು ಕರೆದರು. ೨೦ ಸಾವಿರ ಅರ್ಜಿಗಳು ಬಂದುವು. ಅಕ್ವೈರ್ ಮಾಡಿದ ಜಮೀನಿನಲ್ಲಿ ೨,೦೦೦ ಸೈಟ್‌ಗಳನ್ನು ಮಾತ್ರ ಮಾಡಿದ್ದಾರೆ. ಎಲ್ಲಾ ರಿಕನ್ವೆ ಮತ್ತು ಡಿನೋಟಿಫಿಕೇಶನ್ ಮಾಡುವುದು, ಮತ್ತು ಪ್ರೈವೇಟ್ ಪಾರ್ಟಿಯವರೊಂದಿಗೆ ವ್ಯವಹಾರ ಮಾಡುವುದು. ಇಂತಹ ಒಂದು ಪರಿಸ್ಥಿತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಒಂದು ವೇಳೆ ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್ ರವರು ದಿಟ್ಟ ಹೆಜ್ಜೆಯನ್ನು ಇಂತಹವರ ತಲೆಯ ಮೇಲೆ ಇಟ್ಟು ಸೂಕ್ತ ಕ್ರಮವನ್ನು ತೆಗೆದುಕೊಂಡರೆ, ನಾನು ಸಂತೋಷ ಪಡುವಷ್ಟು ಬೇರೆ ಯಾರೂ ಪಟ್ಟುಕೊಳ್ಳಲಿಕ್ಕಿಲ್ಲ ಎಂದು ಹೇಳಬಯಸುತ್ತೇನೆ, ಬಡವರೆಲ್ಲರೂ ತಮಗೆ ಸೈಟ್‌ಗಳು ಬೇಕೆಂದು ಹೇಳುತ್ತಾ ಇದ್ದಾರೆ. ನಾವು ಕೊಡುತ್ತೇವೆ ಎಂದು ಹೇಳುತ್ತಾ ಇದ್ದೇವೆ. ಆದರೆ ಅವರ ಆಸೆಯನ್ನು ನೆರವೇರಿಸಲು, ಅವರುಗಳಿಗೆ ಸೈಟ್‌ಗಳನ್ನು ಕೊಡಲು ನಮ್ಮಿಂದ ಆಗಲಿಲ್ಲ. ಕಾರಣ ಏನೆಂದರೆ, ಬೆಂಗಳೂರಿನಲ್ಲಿ ಇವೊತ್ತು ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಸುಮಾರು ೩೦೦–೩೫೦ ರಷ್ಟು ಹುಟ್ಟಿಕೊಂಡಿದ್ದಾವೆ. ಇವರಿಗೆ ದಲ್ಲಾಳಿಗಳು ಇದ್ದಾರೆ, ಅವರು ಕೋ–ಆಪರೇಟೀವ್ ಸೊಸೈಟಿಗಳನ್ನು ಬೇರೆಯವರ ಹೆಸರಿನಲ್ಲಿ ಮಾಡಿ ತಾವೇ ಹಣ ಕೊಟ್ಟು, ಅನಂತರ ಅವುಗಳನ್ನು ಮಾರಿ ಕೋಟ್ಯಾಧೀಶ್ವರರಾಗಿದ್ದಾರೆ. ಬೆಂಗಳೂರು ನಗರದಲ್ಲಿ ಯಾವ ಜನಗಳಿಗೆ ಕಾಂಗ್ರೆಸ್ ಸರಕಾರ ಇದ್ದಾಗಲೂ ಪ್ರೋತ್ಸಾಹ ಇತ್ತೋ ಅದೇ ಜನಗಳಿಗೆ ಜನತಾ ಸರಕಾರದ ಅಧಿಕಾರದಲ್ಲಿಯೂ ಪ್ರೋತ್ಸಾಹ ದೊರಕಿದೆ. ಅವರಲ್ಲಿ ಪ್ರಮುಖರು ಎಂದರೆ, ಸಿ. ವಿ. ಎಲ್. ಶಾಸ್ತ್ರಿ ಮತ್ತು ಕೃಷ್ಣಭಟ್ ಎಂದು ಇದ್ದಾರೆ. ಇವರ ಹೆಸರು ಎಲ್ಲರಿಗೂ ಗೊತ್ತಿದೆ. ಈ ವ್ಯಕ್ತಿಗಳೇ ಬಿ.ಡಿ.ಎ. ಆಗಿ ಬಿಟ್ಟಿದ್ದಾರೆ. These two fellows run parrelel BDAs, Is there no restriction ? Is there no prevention of these acts and attempts by unscrupulous people?

Are you going to grant permission for private parties ? Is that the only act of the Government ? How many societies are permitted by the Government ? Why are you permitting ? Why are you keeping BDA in Bangalore and also permitting side by side these house building co-operative societies ? ಚೀನಾದ ಫಿಲಾಸಫರ್ ಕನ್‌ಪ್ಯೂಶೀಯಸ್ ಒಂದು ಮಾತನ್ನು ಹೇಳಿದ್ದಾನೆ. ಮಾನ್ಯ ಸದಸ್ಯರುಗಳು ಗಮನಕೊಟ್ಟರೆ, ಅದನ್ನು ಹೇಳುತ್ತೇನೆ. "Don't keep a dog and yet bark yourself" ಇವೊತ್ತು ಬಿ.ಡಿ.ಎ. ಇರುವಾಗ ನೀವುಗಳು ಮತ್ತೆ ಹೌಸಿಂಗ್ ಸೊಸೈಟಿಗಳಿಗೆ ನಿವೇಶನಗಳನ್ನು ಮಾಡುವುದಕ್ಕೆ ಅವಕಾಶವಮಾಡಿಕೊಟ್ಟರೆ, ಯಾರ್ಯಾರು ಹೌಸಿಂಗ್ ಸೊಸೈಟಿಯವರು ಇದ್ದಾರೆ. ಅವರಿಗೆ ಕೊಟ್ಟ ಜಮೀನಿನಲ್ಲಿ ಅವರು ನಿವೇಶನಗಳನ್ನು ಸೂಕ್ತ ರೀತಿಯಿಂದ ಹಂಚಿಕೆ ಮಾಡಿದ್ದಾರೋ ಇಲ್ಲವೋ ಅಥವಾ ಇನ್ನಾವುದೇ ನಿಯಮಗಳ ಬಗ್ಗೆಯಾಗಲೀ ಬಿ.ಡಿ.ಎ. ನವರು ನಿಗಾವಹಿಸಿ ಪರಿಶೀಲಿಸು ವುದಿಲ್ಲ, ಏಕೆಂದರೆ ಇವರೆ ಅದರಲ್ಲಿ ಸೇರಿರುತ್ತಾರೆ ಹೀಗಾಗಿ ಅವ್ಯವ್ಯವಹಾರಗಳು ನಡೆಯುವುದಕ್ಕೆ ದಾರಿಯಾಗಿದೆ. ಆದುದರಿಂದ ನಾನು ತಮ್ಮಲ್ಲಿ ಅಗ್ರಹ ಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ತಮಗೆ ಸಾರ್ವಜನಿಕರ ಬಗ್ಗೆ ಕಳಕಳಿ ಇದ್ದರೆ, ಸಾರ್ವಜನಿಕರ ಹಿತರಕ್ಷಣೆ ಮಾಡಬೇಕೆಂಬ ಮನಸ್ಸು ತಮಗೆ ಇದ್ದರೆ, ಸಾರ್ವಜನಿಕ ಜೀವನದಲ್ಲಿ ಒಂದು ರೀತಿಯ ಸತ್ಯಸಾಧತೆಯನ್ನು ಕಾಪಾಡಿಕೊಂಡು ಬರಬೇಕೆಂದು ತಾವು ಇಚ್ಛಿಸುವುದಾದರೆ, ಅಲ್ಲಿರುವ ದುರಾಡಳಿತ ಮತ್ತು ಲಂಚಕೋರತನವನ್ನು ನಿರ್ಮೂಲನೆ ಮಾಡಬೇಕೆಂದು ನಿಮಗೆ ಮನಸಿದ್ದರೆ, ಅಲ್ಲಿ ಯಾರ್ಯಾರು ಕಮಿಶನರ್ ಆಗಿದ್ದಾರೆ, ಚೇರ್ ಮನ್ ಅಗಿದ್ದರು, ಯಾರ್ಯಾರು ದುರ್ವ್ಯವಹಾರವನ್ನು ಮಾಡಿದ್ದಾರೆ. ಅಂತಹವರ ಮೇಲೆಸೂಕ್ತ ಕ್ರಮಗಳನ್ನು ತಾವುಗಳು ತೆಗೆದುಕೊಂಡರೆ ನಾನಂತೂ ತುಂಬಾ ಸಂತೋಷ ಪಡುತ್ತೇನೆ, ಹಾಗೆಯೇ ಜನಗಳು ಸಹಾ ತುಂಬಾ ಸಂತೋಷ ಪಡುತ್ತಾರೆ,

ಶ್ರೀ ಹೆಚ್. ಟಿ. ಕೃಷ್ಣಪ್ಪ.—ತಾವುಗಳು ಮಂತ್ರಿಗಳಾಗಿದ್ದಾಗ ಎಷ್ಟು ಜನ ಶಾಸಕರಿಗೆ ಸಹಾಯ ಮಾಡಿದ್ದೀರಿ ?

ಶ್ರೀ ಬಸವಲಿಂಗಪ್ಪ.—ನಾನು ಸಹಾಯ ಮಾಡಿದ್ದೇನೆ. ಧರ್ಮ ಬುದ್ಧಿಯಿಂದ ಅಂತಹವರಿಗೆ ಕೊಟ್ಟಿದ್ದೇನೆ. ಸಂತೋಷದಿಂದ ಅವರಿಗೆ ಸಹಾಯ ಮಾಡಿದ್ದೇನೆ. ಅತ್ಮಸಾಕ್ಷಿಯಾಗಿ ಕೊಟ್ಟಿದ್ದೇನೆ. ಮಾನ್ಯ ದೇವೇಗೌಡರವರಿಗೆ, ಮಾನ್ಯ ಲಕ್ಕಪ್ಪನವರಿಗೆ ಸೈಟ್ ಕೊಟ್ಟಿದ್ದೇನೆ, ಹೀಗೆ ಕೆಲವರಿಗೆ ಸಹಾಯ ಮಾಡಿದ್ದೇನೆ, ನಿಮಗೂ ಕೊಟ್ಟಿಲ್ಲವೇ, ಕೊಟ್ಟಿರಲಿಕ್ಕಿಲ್ಲ.......

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಮಗೆ ಯಾರೂ ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಕೂಡ ಕೇಳಿದ್ದಿದ್ದರೆ 'ಇಲ್ಲ' ಎಂದು ಹೇಳುತ್ತಿರಲಿಲ್ಲ. ನಾವು ಹೀಗೆ ಧರ್ಮಬುದ್ಧಿಯಿಂದ ಸಹಾಯ ಮಾಡುವುದು ಬೇರೆ ಆಗುತ್ತದೆ. ಆದರೆ ಲಂಚಗುಳಿತನದ ಮೂಲಕ, ಅವ್ಯವಹಾರಗಳನ್ನು ಮಾಡುವುದು ಬೇಡ ಎಂದು ನಾನು ಹೇಳುತ್ತಿರುವುದು.

ಶ್ರೀ ಆರ್. ಎಲ್. ಜಾಲಪ್ಪ.—ದಯವಿಟ್ಟು ಒಂದು ನಿಮಿಷ ನನಗೆಅವಕಾಶ ಕೊಡಬೇಕು. ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ತಿಳಿದಿದ್ದೇನೆ ಅಲ್ಲಿಯೂ. ಕೂಡ ಗೃಹನಿರ್ಮಾಣ ಸಹಕಾರ ಸಂಘಗಳು ಇವೆ. ಹಾಗೆಯೇ ಎಲ್ಲಾ ಕಡೆಗಳಲ್ಲಿಯೂ ಇವುಗಳು ಇವೆ ನಮ್ಮಲ್ಲಿಯೂ ಇವೆ. ಮಾನ್ಯರು ಹೇಳಿದ ಹಾಗೆ ಅಂತಹ ಸೊಸೈಟಿಗಳಲ್ಲಿ ಅನ್ಯಾಯ, ಅವ್ಯವಹಾರ ಗಳು ಆಗುತ್ತಾ ಇವೆ. ನಾಯಿಕೊಡೆ ಹುಟ್ಟಿಕೊಂಡ ಹಾಗೆ ಈ ಸಂಘಗಳು ಹುಟ್ಟಿಕೊಂಡಿದ್ದವು. ನಮ್ಮ ವಶಿಯಿಂದ ಲೇಔಟ್ ಬೇಗನೆ ಮಾಡಲಿಕ್ಕೆ ಆಗುವುದಿಲ್ಲವಾದ ಕಾರಣದಿಂದಲೋ ಏನೋ ಇವುಗಳು ಅಸ್ತಿತ್ವದಲ್ಲಿವೆ ನಮ್ಮ ಕಾಲದಲ್ಲಿ ಒಂದೆರಡು ಸೊಸೈಟಿಗಳಿಗೆ ಮಾತ್ರ ರಿಜಿಸ್ಟರ್ ಮಾಡಿದ್ದೇವೆ ಮೊದಲಿನಿಂದಲೂ ಈ ಕಮಿಟ್‌ಮೆಂಟ್ ಆಗಿದೆ. ಕೆಲವು ಸಹಕಾರ ಸಂಘಗಳು ಇವೆ, ಎಂಪ್ಲಾಯಿಸ್ ಕೋ-ಆಪರೇಟೀವ್ ಸೊಸೈಟಿಗಳು ಇವೆ, ಇದನ್ನೆಲ್ಲಾ ಯೋಚನೆ ಮಾಡಿ ತ್ರಿಸದಸ್ಯ ಸಮಿತಿ ಯೊಂದನ್ನು ನಾವು ಮಾಡಿದ್ದೇವೆ. ಅವರ ಮುಂದೆ, ಈ ಸಹಕಾರ ಸಂಘಗಳು ಮೆಂಬರ್‌ಗಳು ಅಫಿಡವಿಟ್ ಫೈಲ್ ಮಾಡಬೇಕು ಏಕೆಂದರೆ ಯಾರಿಗೆ ಸೈಟ್ ಇಲ್ಲ, ಅವರಿಗೆ ಸಿಗದೆ, ಸೈಟ್ ಉಳ್ಳ ವರಿಗೆ ಮಾತ್ರ ಪುನಃ ಸಿಗುವ ಸಂಭವ ಇರುವ ಕಾರಣ ಅವರು ಸೈಟ್ ಹೊಂದಿಲ್ಲದ ಬಗ್ಗೆ ಪ್ರಮಾಣೀಕರಿಸ ಬೇಕು, ಹಾಗೂ ಸಂಘಗಳ ಲೆಕ್ಕವನ್ನು ಪರಿಶೀಲನೆ ಮಾಡಬೇಕು, ಇದೆಲ್ಲಾ ಅದ ಮೇಲೆ ಅವರಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಜಮೀನು ಕೊಡಬೇಕು, ಅಷ್ಟಕ್ಕೇ ರೆಕಮೆಂಡ್

ಮೊಡಬೇಕೆಂದು ಸರಕಾರಿ ಆಜ್ಞೆ ಮಾಡಿದೆ ಅದರ ಪ್ರಕಾರ ಮಾಡುತ್ತಾ ಇದ್ದೇವೆ. ಯಾವ ಸಹಕಾರ ಸಂಘಗಳು ರಿಜಿಸ್ಟರ್ಡ್ ಆಗಿವೆ. ಅಂತಹವುಗಳಿಗೆ ಪ್ರತಿಯೊಂದಕ್ಕೆ ೨೦ ಎಕರೆಗಳಷ್ಟು ಮಾತ್ರ ಜಾಗ ಕೊಡಬೇಕೆಂದು, ಅವನ್ನು ಬಿ.ಡಿ.ಎ. ಅಪ್ರೂವಲ್ ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇವರು ಉರಿಯುತ್ತಿರುವಂತಹ ಬೆಂಕಿಗೆ ತುಪ್ಪವನ್ನು ಹಾಕು ತ್ತಿದ್ದಾರೆ. ಅಭಿವೃದ್ಧಿ ಪ್ರಾಧಿಕಾರವನ್ನು ಇಟ್ಟುಕೊಂಡು, ೩೫೦ ಸಹಕಾರ ಸಂಘಗಳಿಗೆ ಪರ್ಮಿಷನ್ ಕೊಡುವುದು ಸಾಧುವಾದು ದಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಬಸವಲಿಂಗಪ್ಪನವರು ಹಿಂದೆ ಮಂತ್ರಿ ಮಂಡಳದಲ್ಲಿ ಒಳ್ಳೆಯ ಹುದ್ದೆಗಳಲ್ಲಿ ೮ ವರ್ಷಗಳ ಕಾಲ ಇದ್ದವರು ಅವರು ಇಂತಹ ಯಾವ ಕ್ರಮವನ್ನೂ ಮಾಡ ಲಿಲ್ಲ. ಈಗ ತಮ್ಮ ಅಸಮಾಧಾನವನ್ನು ವ್ಯಕ್ತಮಾಡಿದ್ದಾರೆ. ಅವರು ರೆವಿನ್ಯೂ ಮಂತ್ರಿಗಳೂ ಆಗಿದ್ದರು. ಆಗಲೇ ಇಷ್ಟೆಲ್ಲಾ ಮಾಡಿ ಬಿಟ್ಟಿದ್ದರೆ, ಈ ಸಹಕಾರ ಸಂಘಗಳನ್ನು ನಿಲ್ಲಿಸಿ ಬಿಟ್ಟಿದ್ದರೆ, ಹೀಗೆಲ್ಲಾ ಆಗುತ್ತಿರಲಿಲ್ಲ. ಆದರೆ ನಾವು ಎಲ್ಲವನ್ನೂ ರಿಜಿಸ್ಟರ್ಡ್ ಮಾಡಲಿಲ್ಲ, ಒಂದೆರಡನ್ನು ಮಾತ್ರ ನಮ್ಮ ಕಾಲದಲ್ಲಿ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮುನ್ಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಯಾಗಿದ್ದೆ, ರೆವಿನ್ಯೂ ಮಂತ್ರಿಯಾಗಿದ್ದೆ, ಎಂದೆಲ್ಲಾ ಹೇಳಿದ್ದಾರೆ, ಅದು ನಿಜ. ಆದರೆ ನಾನು ಆ ಸ್ಥಾನದಲ್ಲಿದ್ದಾಗ ಬಹಳ ಒತ್ತಾಯದಿಂದ ಎಚ್.ಎ.ಎಲ್ ಮತ್ತು ಐ.ಟಿ.ಐ. ಸಹಕಾರ ಸಂಘಗಳಿಗೆ ಮಾತ್ರ ಮಾನ್ಯತೆ ಕೊಟ್ಟಿದ್ದೆ. ಮುಂದೆ ಎಷ್ಟು ಅರ್ಜಿಗಳು ಬಂದರೂ ಅವುಗಳನ್ನು ತಿರಸ್ಕಾರ ಮಾಡಿದ್ದೆ. ಆದರೆ ನೀವುಗಳು ಬಂದಮೇಲೆ ೧೯೭೨–೭೩ ರಿಂದ ೧೯೭೮ರ ಕಾಲದಲ್ಲಿ ಹೌಸಿಂಗ್ ಸೊಸೈಟಿಯವರು ಬಹಳ ಸುಖಿಯಾಗಿದ್ದಾರೆ. ಮಧ್ಯಸ್ತಿಗೆಗಾರರು ಸುಖಿಯಾಗಿದ್ದಾರೆ. ಅಧಿಕಾರದಲ್ಲಿ ಇರುವಂತಹವರೂ ಕೂಡ ಬಹಳ ಸುಖಿಯಾಗಿ ಇದ್ದಾರೆ. ನಾನು ಹೇಳುವುದೇನೆಂದರೆ, ಯಾರು ತಪ್ಪು ಮಾಡುತ್ತಾರೆ ಅಂತಹವರನ್ನು ಜೈಲಿಗೆ ಕಳುಹಿಸಬೇಕು. ಸೂಕ್ತ ಕ್ರಮವನ್ನು ತಪ್ಪಿತಸ್ಥರ ಮೇಲೆ ತೆಗೆದುಕೊಳ್ಳ ಬೇಕು.

ಸ್ವಾಮಿ, ಈಗ ಜಮೀನನ್ನು ಬಿ.ಡಿ.ಎ.ನವರು ಏನು ಅಕ್ವೈರ್ ಮಾಡುತ್ತಾರೆ ಅಕ್ವೈರ್ ಮಾಡಿದ ಮೇಲೆ ಅದನ್ನು ಸೈಟು ಮಾಡುವುದಕ್ಕೆ ತಡ ಮಾಡುತ್ತಾರೆ. ಇವರು ಎಲ್ಲೆಲ್ಲಿ ಜಮೀನನ್ನು ಅಕ್ವೈರ್ ಮಾಡಿದರು ಅದನ್ನು ನೋಡಿ ಬೇರೆ ಜಮೀನ್ದಾರರು ತಮ್ಮ ಜಮೀನನ್ನು ಮಾರುವುದಕ್ಕೆ ಪ್ರಯತ್ನ ಮಾಡಿದರು. ಅದಕ್ಕೆ ತಾವೇನೂ ಪ್ರತಿಬಂಧಕ ಹಾಕಿಲ್ಲ. ಇದರಿಂದ ಬಿ.ಡಿ.ಎ. ಅಧಿಕಾರಿ ಗಳಿಗೆ ಕುಮ್ಮಕ್ಕು ಕೊಟ್ಟ ಹಾಗಾಯಿತು. ಮಾಲೀಕರು ದುಡ್ಡು ಮಾಡಿಕೊಳ್ಳುವ ಹಾಗೆ ಮಾಡಿ ಅವರಿಗೆ ಇವರು ಶಾಮೀಲಾಗಿದ್ದಾರೆ. ಬಿ.ಡಿ.ಎ.ನವರು ಜಮೀನನ್ನು ಅಕ್ವೈರ್ ಮಾಡಿಕೊಂಡಿ ದ್ದಾರೆ, ಅಲ್ಲಿ ೨೨ ಸಾವಿರ ಮನೆಗಳು ಇದ್ದಾವೆ. ಈವೊತ್ತು ಅದು ಉಳಿಯುತ್ತದೆಯೋ ಎನ್ನುವ ಪ್ರಶ್ನೆ ಬರುತ್ತದೆ. ಒಡೆಯಬೇಕು ಎಂದರೆ ಜಾಗ್ರತೆ ಒಡೆಯಿರಿ. ಜಾಗ್ರತೆ ಒಡೆಯಬೇಕು, ಜಾಗ್ರತೆ ಈ ಕೆಲಸ ಮಾಡಿರಿ. ಆ ರೀತಿ ಒಡೆಯುವುದಾದರೆ ಜಾಗ್ರತೆ ಒಡೆಯಿರಿ?

ಶ್ರೀ ಆರ್.ಎಲ್. ಜಾಲಪ್ಪ.—ನೀವು ಒಡೆಯಿರಿ ಎಂದು ಹೇಳುತ್ತೀರಿ, ಒಡೆಯುವುದಕ್ಕೆ ಹೋದರೆ ಶ್ರೀಮಾನ್ ಕೃಷ್ಣನ್‌ರವರು ಒಡಯಬೇಡಿ ಎಂದು ಮುಂದಾಳತ್ವ ವಹಿಸಿಕೊಂಡು ಬಾವುಟ ಎತ್ತಿಕೊಂಡು ಬರುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಏನು ಸ್ವಾಮಿ, ಇದು ಇವರು ಕೆಡವಲಿ ಎಂದು ಹೇಳುತ್ತಾರೆ ಅವರು ಕೆಡವಬೇಡಿ ಎಂದು ಹೇಳುತ್ತಾರೆ. ನಾವೇನು ಮಾಡುವುದು?

ಶ್ರೀ ಬಿ. ಬಸವಲಿಂಗಪ್ಪ.—ನೀವು ಒಡೆಯಿರಿ, ಅವರು ಒಡೆಯಬೇಡಿ ಎಂದು ಹೇಳಲಿ. ಈಗ ನೀವು ಅಧಿಕಾರದಲ್ಲಿದ್ದೀರಿ. ೧೯೭೨ರಿಂದಲೂ ನೀವು ಅಧಿಕಾರದಲ್ಲಿದ್ದೀರಿ. ಇದಕ್ಕೆಲ್ಲಾ ತಾವು ಏತಕ್ಕೆ ಅವಕಾಶ ಮಾಡಿಕೊಟ್ಟಿರಿ? ಈ ಬಗ್ಗೆ ಅತಿ ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು. ನೀವು ಜನಗಳಿಗೆ ಏನು ವಾಗ್ದಾನ ಮಾಡಿದ್ದೀರಿ ಅದನ್ನು ಒಳ್ಳೆಯ ದಾರಿಯಲ್ಲಿ ತರುವ ವ್ಯವಸ್ಥೆ ಮಾಡ ಬೇಕಾಗಿತ್ತು. ಈಗ ಇದರ ಬಗ್ಗೆ ಸರ್ಕಾರಕ್ಕೆ ಇನ್ನೂ ಹೆಚ್ಚು ಪವರ್ಸ್ ಬೇಕು ಎಂದು ತಿದ್ದುಪಡಿ ತಂದಿದ್ದೀರಿ. ಹಿಂದೆ ಕಮೀಷನರಿಗೆ ಅಂದರೆ ಬಿ.ಡಿ.ಎ.ಗೆ ಇಂತಿಷ್ಟು ಹಣ ಎಂದು ಹೇಳಿದ್ದೀರಿ. ಅದರಂತೆ ಬಿ.ಡಿ.ಎ.ಗೆ ೫ ಲಕ್ಷ ಇತ್ತು ಛೇರ್ಮನ್‌ಗೆ ೫ ಲಕ್ಷ ಅಂತ ಇತ್ತು ಎಂದು ಹೇಳಿದ್ದೀರಿ. ಹಿಂದೆ ನೀವು ಏನೇನು ಕೆಲಸ ಮಾಡಿದ್ದೀರೋ, ಯಾರು ಚೇರ್ಮನ್ ಆಗಿ ಇದ್ದರೋ ಅವರು ಏನು

ಮಾಡಿದರೋ ಅದು ಒಂದೂ ನನಗೆ ಗೊತ್ತಿಲ್ಲ. ಮೊದಲು ೫ ಲಕ್ಷ ರೂಪಾಯಿಗಳ ವ್ಯವಹಾರದ್ದು ಈಗ ೧೦ ಕೋಟಿ ರೂಪಾಯಿನ ವ್ಯವಹಾರಕ್ಕೆ ನಾವು ಮಂಜೂರಾತಿ ಕೊಡತಕ್ಕಂಥಾದ್ದು ಸರಿಯೇ? ಇವೊತ್ತು ಲಕ್ಷ್ಮೀ ಕನ್‌ಸ್ಟ್ರಕ್ಷನ್ ಹೇಗಾಯಿತು? ಅದನ್ನು ಯಾವ ರೀತಿ ಮಾಡಿದರು? ಕಮೀಷನರು ಛೇರ್ಮನ್‌ರಾಗಿರತಕ್ಕಂಥವರು ಇವೊತ್ತಿನ ದಿವಸ ೧೦ ಕೋಟಿ ರೂಪಾಯಿಗಳ ಕಾಂಟ್ರಾಕ್ಟ್ ವ್ಯವಹಾರವನ್ನು ಒಪ್ಪಿ ನಂತರ ಅದನ್ನು ರ್‍ಯಾಟಿಫೈ ಮಾಡುವುದಕ್ಕೆ ಸರ್ಕಾರಕ್ಕೆ ಕಳುಹಿಸಿಲ್ಲವೇ? ಅದನ್ನು ಸರ್ಕಾರದವರು ರ್‍ಯಾಟಿಫೈ ಮಾಡಿಲ್ಲವೇ? ಯಾರಾದರೂ ಆಗಲಿ ತಪ್ಪು ಮಾಡಿದಾಗ ಅದನ್ನು ರ್‍ಯಾಟಿಫೈ ಮಾಡಲೇಬೇಕಾಗುತ್ತದೆ. ಆದರೆ ೧೦ ಕೋಟಿ ರೂಪಾಯಿಗಳ ವ್ಯವಹಾರವನ್ನು ಒಪ್ಪತಕ್ಕಂಥ ಸಾಮರ್ಥ್ಯ ಆ ಅಧಿಕಾರಿಗೆ ಇದ್ದರೆ ಆ ದೇಶ ಉಳಿಯುತ್ತದೆಯೇ? ಈ ೧೦ ಕೋಟಿ ರೂಪಾಯಿಗಳ ವ್ಯವಹಾರದ ಬಗ್ಗೆ, ಲಕ್ಷ್ಮಿ ಕನ್‌ಸ್ಟ್ರಕ್ಷನ್ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ಈ ಅವ್ಯವಹಾರ ಮಾಡಬೇಕು ಎಂದು ಮನಸ್ಸಿಗೆ ಬಂದಾಗ ಅಧಿಕಾರದಲ್ಲಿರತಕ್ಕಂಥ ಅಧಿಕಾರಿ ಯಾವುದಕ್ಕಾದರೂ ಮನಸ್ಸು ಮಾಡಿದರೆ ಅವನಿಗೆ ಕಾನೂನು ಬೇಕಾಗಿಲ್ಲ, ಯಾವ ನಿಯಮವೂ ಬೇಕಾಗಿಲ್ಲ. ಇದಕ್ಕೆ ಭಂಡ ಧೈರ್ಯ ಎಂದು ಹೇಳುತ್ತಾರೆ. ಭಂಡ ಧೈರ್ಯ ಮಾಡುವುದು. ಅದು ವ್ಯವಹಾರಿಕವಾಗಿಯೇ ಇರಲಿ. ಅವ್ಯವಹಾರಿಕವಾಗಿಯೇ ಇರಲಿ ಆತನು ನಾನು ಆ ಗೋಜಿಗೆ ಹೋಗುವುದಿಲ್ಲ. ೫ ಲಕ್ಷ ಇರತಕ್ಕಂಥ ಅಧಿಕಾರವನ್ನು ಹೊಂದಿರತಕ್ಕ ಅಧಿಕಾರಿಗೆ ೧೦ ಕೋಟಿ ರೂಪಾಯಿವರೆಗೆ ಅಧಿಕಾರ ಕೊಟ್ಟರೆ, ಆ ಅಧಿಕಾರಿ ಭಂಡ ಧೈರ್ಯದಿಂದ ಇಂತಹ ಕೆಲಸ ಮಾಡಿದರೆ ಅವನ ಮೇಲೆ ಯಾವ ಕ್ರಮವನ್ನೂ ನೀವು ತೆಗೆದುಕೊಳ್ಳುವುದಿಲ್ಲ. ಇದರಿಂದ ಅಂತಹವರಿಗೆ ಹೆದರಿಕೆ ಬರುವ ಹಾಗೆ ವರ್ತನೆಯನ್ನು ಏನೂ ನೀವು ಮಾಡಿಲ್ಲ. ಇದು ಸರಿಯೇ? ಆದುದರಿಂದ ಈ ಸದನದ ಸದಸ್ಯರು ಬಿ.ಡಿ.ಎ. ಬಗ್ಗೆ ಸಾಕಷ್ಟು ಗಮನಹರಿಸಬೇಕು ಎಂಬ ಬಗ್ಗೆ ನಾನು ಎರಡು ಮಾತುಗಳನ್ನಾಡುತ್ತೇನೆ. ಹಾಗೆಯೇ ಬೆಂಗಳೂರು ಕಾರ್ಪೊರೇಷನ್ನವರಿಗೆ ೧೦ ಲಕ್ಷ ಮಂಜೂರು ಮಾಡುವ ಹಾಗೆ ಅನುಮತಿ ಮಾಡಿದ್ದೀರಿ, ಹಾಗೆಯೇ ಹೌಸಿಂಗ್ ಬೋರ್ಡ್‌ನವರು ಒಂದು ಕೋಟಿ ರೂಪಾಯಿಗಳವರೆಗೂ ವ್ಯವಹಾರ ಮಾಡಬಹುದು, ಇನ್ನಾವುದಕ್ಕೆ ಏನೇನು ಮಾಡಿದ್ದೀರೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮೊತ್ತದ ಹಣವನ್ನು ಕಮೀಷನರಿಗೆ ಕೊಡುವುದು ಸರಿಯೇ ಎನ್ನುವುದು ನನ್ನ ಪ್ರಶ್ನೆ. ಯಾವ ಒಬ್ಬ ಅಧಿಕಾರಿಯನ್ನು ಕಮೀಷನರಾಗಿ ನೇಮಿಸುತ್ತೀರೋ ಅವನು ಯಾರೇ ಇರಲಿ ಅವನ ಬಗ್ಗೆ ನಾನು ಹೇಳುತ್ತಾ ಇಲ್ಲ, ಅಲ್ಲಿಗೆ ಯಾರನ್ನೇ ಪೋಸ್ಟ್ ಮಾಡಲಿ ಅದರ ಬಗ್ಗೆ ನಾನು ಹೇಳುತ್ತಾ ಇಲ್ಲ, ಆತನಿಗೆ ೨೦–೩೦ ಲಕ್ಷ ಇಷ್ಟು ಮೊತ್ತದ ಹಣಕ್ಕೆ ಆತನು ಒಪ್ಪಿಗೆ ಕೊಡುವುದು, ಇದಕ್ಕೆ ಬಿ.ಡಿ.ಎ. ಒಪ್ಪಿಗೆ ಬೇಕು ಎನ್ನುವುದು ಬೇಕಾಗಿಲ್ಲ ಎಂದರೆ ಇದು ಸರಿಯೇ ಎಂದು ನಾನು ಕೇಳುತ್ತೇನೆ, ಮೊದಲು ಒಂದು ಲಕ್ಷ ಇತ್ತು. ಇವೊತ್ತು ಅದನ್ನು ೨೦ ಲಕ್ಷಕ್ಕೆ ಏರಿಸಿದ್ದೀರಿ. ಇವೊತ್ತು ಒಬ್ಬ ಅಧಿಕಾರಿ ಬರುತ್ತಾನೆ ಎಂದು ಇಟ್ಟುಕೊಳ್ಳೋಣ. ಅವನಿಗೆ ಸಮಾಜದ ಹಿತರಕ್ಷಣೆ ಮಾಡುವುದಕ್ಕೆ ಮನಸ್ಸು ಇರುವುದಿಲ್ಲ, ಅವನು ಆಸ್ತಿ ಮಾಡಿಕೊಳ್ಳುವುದಕ್ಕೆ ಅಧಿಕಾರಕ್ಕೆ ಬರುತ್ತಾನೆ. ನಾವು ಇಂತಹ ಜನರನ್ನು ಬಹಳ ನೋಡಿದ್ದೇವೆ. ಕರ್ನಾಟಕದಲ್ಲಿರುವ ಎಷ್ಟೋ ಜನ ಅಧಿಕಾರಿಗಳು ಆಸ್ತಿ ಮಾಡಿಕೊಂಡಿದ್ದಾರೆ. ಪಿ.ಡಬ್ಲ್ಯು.ಡಿ.ನಲ್ಲಿರ ತಕ್ಕಂಥವರು, ಕಾರ್ಪೋರೇಷನ್‌ನಲ್ಲಿರತಕ್ಕಂಥ ಅಧಿಕಾರಿಗಳು, ಬಿ.ಡಿ.ಎ.ನಲ್ಲಿ ಕೆಲಸ ಮಾಡಿದವರು ದೊಡ್ಡ ದೊಡ್ಡ ಆಸ್ತಿಯನ್ನು ಮಾಡಿಕೊಂಡಿದ್ದಾರೆ. ಅವನಿಗೆ ಇಷ್ಟು ಮೊತ್ತದ ಹಣ ಮಂಜೂರಾತಿ ಕೊಡುವುದು ಸರಿಯೇ? ವಿವೇಚನೆ ಇಲ್ಲದೆ ಒಬ್ಬ ಅಧಿಕಾರಿ, ಇಂತಹ ಅಧಿಕಾರಕ್ಕೆ ಬಂದರೆ ನೀವು ಎಷ್ಟು ಹಣ ಕೊಟ್ಟರೂ ಅವನು ಸರಿಯಾಗಿ ಕೆಲಸವನ್ನು ನಿರ್ವಹಿಸದೇ ಹೋದರೆ ಏನು ಮಾಡುವುದು ? ಆದುದರಿಂದ ನಾನು ಹೇಳುವುದು ಅಂತಹವನ ಮೇಲೆ ಸರ್ಕಾರ ಒಂದು ಹತೋಟಿಯನ್ನು ಇಟ್ಟುಕೊಳ್ಳುವುದು ಬೇಡವೇ? ಅಂಥದ್ದರ ಬಗ್ಗೆ ಸರ್ಕಾರ ಒಂದು ಹತೋಟಿಯನ್ನು ಇಟ್ಟುಕೊಳ್ಳುವ ಪ್ರಶ್ನೆ ಬರುವುದಿಲ್ಲವೇ? ಈಗ ಬಂದಿರತಕ್ಕಂಥ ಅಧಿಕಾರಿಗಳು ಕಮೀಷನರೇ ಆಗಲಿ ಯಾರಾದರೂ ಆಗಲಿ ಅವರಿಗೆ ೫ ಲಕ್ಷಕ್ಕೆ ಬದಲು ೧೦ ಕೋಟಿ ರೂಪಾಯಿಗಳ ಒಪ್ಪಿಗೆಗೆ ಮಂಜೂರಾತಿ ಕೊಟ್ಟಿರುವ ಬಗ್ಗೆ ಅದನ್ನು ಸರ್ಕಾರದವರು ರ್‍ಯಾಟಿಫೈ ಮಾಡಬೇಕಾದ ಪ್ರಮೇಯ ಬಂತು. ಈ ರೀತಿಯಾಗಿ ೨೦ ಲಕ್ಷಕ್ಕೆ ೩೦ ಲಕ್ಷಕ್ಕೆ ಅವರು ಮಂಜೂರಾತಿ ಕೊಡುವ ಅಧಿಕಾರವನ್ನು ಕೊಡತಕ್ಕಂಥದ್ದನ್ನು ನಾನು ಒಪ್ಪುವುದಿಲ್ಲ. ಹಾಗಾದರೆ ಬಿ.ಡಿ.ಎ. ಏತಕ್ಕೆ ಇರಬೇಕು? ಇಂಥ ಅಧಿಕಾರವನ್ನು ಕಮೀಷನರಿಗೆ ಕೊಡುವುದು, ಇಷ್ಟು ಮೊತ್ತದ ಹಣವನ್ನು ಅವರ ವ್ಯಾಪ್ತಿಗೆ ಕೊಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ೫೦ ಲಕ್ಷ ರೂಪಾಯಿಗಳ ಅಷ್ಟು ಮೊತ್ತದ ಹಣವನ್ನು ಒಪ್ಪಿಗೆ ಕೊಡುವ ಹಾಗೆ ಬಿ.ಡಿ.ಎ. ಅಧಿಕಾರ ಕೊಟ್ಟಿದ್ದೀರಿ. ಹಾಗೆಯೇ ಇದರ ಮೇಲೆ ಸರ್ಕಾರದವರು ಒಂದು ಹತೋಟಿ ಇಟ್ಟುಕೊಳ್ಳದೇ ಹೋದರೆ ಆಗುವುದಿಲ್ಲ. ಅವರು ೨೦ ಲಕ್ಷ ಕೊಡಲಿ, ೩೦ ಲಕ್ಷ ಕೊಡಲಿ ಏನು ಮಾಡಬೇಕು ಎಂದರೆ subject to ratification whatever they do they must send

it to the Government for ratification and approval and if the government approves, then they could execute the work and they could go ahead. I have no objection for this, but I don't want post-mortem attempts to be made particularly when the officers commit impropriety and then going beyond the provision folow. ಈ ಬಗ್ಗೆ ಶ್ರೀಮಾನ್ ಎ. ಲಕ್ಷ್ಮೀಸಾಗರ್‌ರವರು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ನಾನು ಮಂತ್ರಿಯಾಗಿದ್ದಾಗ ಎಸ್.ಸಿ. ಮತ್ತು ಎಸ್.ಟಿ. ಯವರಿಗೆ ಬಡವರಿಗೆ ಈ ಬಗ್ಗೆ ಒಂದು ಹುಕುಂ ಮಾಡಿದ್ದೆ, ಒಂದು ರೂಲ್ಸ್ ಮಾಡಿದ್ದೆ. ಏನೆಂದರೆ ಅಂಥವರಿಗೆ ೨೦ ಪರ್ಸೆಂಟ್ ಸೈಟುಗಳನ್ನು ಕೊಡಬೇಕು, ಅಂದರೆ ನೂರು ಸೈಟುಗಳು ಮಾಡಿದರೆ ೨೦ ಸೈಟುಗಳನ್ನು ಆ ಬಡವರಿಗೆ ಕೊಡಬೇಕು ಎಂದು ನಿರ್ಧಿಷ್ಟವಾಗಿ ಮಾಡಿದ್ದೆ. ಅಷ್ಟೆ ಅಲ್ಲದೆ, ಅವರು ೬ ವರ್ಷಗಳಲ್ಲಿ ಅದರ ಹಣವನ್ನು ಸುಲಭ ಕಂತುಗಳಲ್ಲಿ ಕೊಡಬೇಕೆಂದು ಮಾಡಿದ್ದೆವು. ಈ ಒಂದು ರೂಲಿನಿಂದ ಎಲ್ಲಾ ಭಾಗದಲ್ಲೂ ಬಡವರು ಯಾರು ಇದ್ದಾರೆ, ನೌಕರರು ಯಾರು ಇದ್ದಾರೆ, ಅಂಥವರಿಗೆ ಸೈಟು ಸಿಕ್ಕಿದೆ ಎಂದು ಹೇಳುತ್ತೇನೆ. ಅಂಥವರು ೬ ವರ್ಷದಲ್ಲಿ ಕಂತುಗಳ ರೂಪವಾಗಿ ದುಡ್ಡು ಕೊಟ್ಟು ಸೈಟು ಸಿಕ್ಕುವಂಥ ಅವಕಾಶ ಏನು ಇತ್ತು ಅದನ್ನು ಈಗ ಕಿತ್ತು ಹಾಕಿದ್ದಾರೆ, ಇದಕ್ಕೆ ಕಾರಣ ಏನು? ಇದನ್ನು ನೋಡಿದರೆ ಈ ದೇಶದಲ್ಲಿ ನಿಮಗೆ ಬಡವರ ಮೇಲೆ ಅನುಕಂಪ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಏತಕ್ಕೆ ಇಂಥ ಒಂದು ರೂಲ್ಸನ್ನು ತಾವು ಕಿತ್ತು ಹಾಕಿದಿರಿ? ಶ್ರೀಮಾನ್ ಎ. ಲಕ್ಷ್ಮೀಸಾಗರ್‌ರವರು ಇದರ ಬಗ್ಗೆ ಏತಕ್ಕೆ ಮರೆತಿದ್ದಾರೋ ಗೊತ್ತಿಲ್ಲ. ಈಗಲಾದರೂ ಕೂಡ ಈ ವಿಚಾರದಲ್ಲಿ ಅವರು ಗಮನಹರಿಸಿ ಎಸ್.ಸಿ. ಎಸ್.ಟಿ.ಯವರಿಗೂ ಸೈಟುಗಳನ್ನು ಮೊದಲು ಯಾವ ರೀತಿ ಇತ್ತು ಆ ರೀತಿ ೬ ವರ್ಷಗಳ ಕಂತುಗಳಲ್ಲಿ ಹಣ ಕಟ್ಟುವ ಹಾಗೆ ಅವಕಾಶ ಮಾಡಿಕೊಡ ಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸ್ವಾಮಿ, ನಾನು ಜಾಸ್ತಿ ಹೊತ್ತು ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಮಂತ್ರಿಗಳು ಏನು ೨-೩ ವಿಷಯಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ ಆ ವಿಷಯಗಳ ಬಗ್ಗೆ, ಹಣದ ವ್ಯಾಪ್ತಿಯ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಕಮೀಷನರಿಗೆ ೨೦ ಲಕ್ಷದ ವರೆಗೆ ಅಧಿಕಾರ ಕೊಡತಕ್ಕಂಥಾದ್ದನ್ನು ಈ ಮಸೂದೆಯಲ್ಲಿ ಅಳವಡಿಸಿದ್ದಾರೆ, ಅಷ್ಟು ಕೊಡ ತಕ್ಕಂಥಾದ್ದು ಸರಿಯಲ್ಲ ಎಂದು ಹೇಳುತ್ತಾ ಇದ್ದೇನೆ. ಮತ್ತೆ ಅಲ್ಲಿ ಮಾಡಿದಂಥ ಎಲ್ಲಾ ರೆಸಲ್ಯೂಷನ್‌ಗಳನ್ನು ಸರ್ಕಾರಕ್ಕೆ ಕಳುಹಿಸಬೇಕು, ಅವರು ಯಾವುದನ್ನು ವಜಾಮಾಡಬೇಕೋ ಅದನ್ನು ಮಾಡುತ್ತಾರೆ ಯಾವುದನ್ನು ಒಪ್ಪುತ್ತಾರೋ ಅದನ್ನು ಒಪ್ಪುತ್ತಾರೆ ಎನ್ನುವುದು ಸರಿಯೋ ತಪ್ಪೋ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಯಾವುದು ಬಿ.ಡಿ.ಎ. ಕಾರ್ಯ ವ್ಯಾಪ್ತಿಗೆ ಒಳಪಟ್ಟಿದೆ ಅಂಥಾದ್ದನ್ನು ಅವರೇ ತೀರ್ಮಾನ ಮಾಡಲಿ. ರೂಲ್ಸ್ ಪ್ರಕಾರ ಯಾರು ಯಾರಿಗೆ ಏನೇನು ಕೊಡಬೇಕೋ ಅದು ಅವರ ವ್ಯಾಪ್ತಿಯಲ್ಲಿ ಬಂದರೆ ಮಾಡಲಿ. ಆ ಕಾರ್ಯವ್ಯಾಪ್ತಿ ಬಿಟ್ಟು, ಕಾನೂನು ಬಿಟ್ಟು ಯಾವ ನಿರ್ಣಯಗಳನ್ನು ಬಿಡಿಎ ನವರು ಮಾಡುತ್ತಾರೆ ಅಂತಹ ನಿರ್ಣಯ ಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಬಹಳ ಸೂಕ್ತ. ಅದರ ಬಗ್ಗೆ ಸರ್ಕಾರದವರು ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಇದ್ದೇನೆ. ಕೊನೆಯ ಮಾತು ನಾನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಯಾಗಿದ್ದಾಗ ಮಾಡಿದ ತಿದ್ದುಪಡಿಯನ್ನು ಹೇಳುತ್ತೇನೆ. ಹೌಸಿಂಗ್ ಬೋರ್ಡಿನಲ್ಲಿ ಸಾರ್ವಜನಿಕರಿಂದ ಕೆಲವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಿ, ಮತ್ತೆ ಬಿ.ಡಿ.ಎ. ನಲ್ಲಿ ಸಾರ್ವಜನಿಕರಿಂದ ಅಧ್ಯಕ್ಷರನ್ನು ಮಾಡುತ್ತೀರಿ. ಅವರು ಸ್ವೇಚ್ಛೆಯಾಗಿ ವರ್ತನೆ ಮಾಡತಕ್ಕಂಥ ಅವಕಾಶವಿತ್ತು. ಆ ಅವಕಾಶವನ್ನು ಕಿತ್ತುಹಾಕಿ ಕಮೀಷನರ್ ಆಗಿರತಕ್ಕವರಿಗೆ ಜಾಸ್ತಿ ಜವಾಬ್ದಾರಿ ಕೊಟ್ಟು ಮಾಡಬೇಕು ಎಂದು ತಿದ್ದುಪಡಿ ತಂದು ಮಾಡಿದ್ದೇನೆ. ಇದರಿಂದ ಏನಾಗುತ್ತದೆ ಎಂದರೆ, ಯಾರು ಕಮಿಷನರಾಗಿ ಕೆಲಸ ಮಾಡಲಿಕ್ಕೆ ಬರುತ್ತಾರೆ ಅವರಿಗೆ ಅಧಿಕಾರ ಜಾಸ್ತಿ ಇರುತ್ತದೆ, ಯಾರು ಅಧ್ಯಕ್ಷರಾಗಿರುತ್ತಾರೆ ಅವರಿಗೆ ಅಧಿಕಾರ ಇರುವುದಿಲ್ಲ. ಇವರು ಸುಮ್ಮನೆ ಮೀಟಿಂಗ್‌ನಲ್ಲಿ ಪ್ರಿಸೈಡ್ ಮಾಡಬೇಕಾಗುತ್ತದೆ, ಪ್ರಿಸೈಡ್ ಮಾಡುವಾಗ ಅಧ್ಯಕ್ಷರು ಕಮಿಷನರಿಗಿಂತ ದೊಡ್ಡವರು ಎಂದು ತಿಳಿದುಕೊಳ್ಳುವುದು ಸ್ವಾಭಾವಿಕ, ವಾಸ್ತವ. ಈ ರೀತಿ ತಿದ್ದುಪಡಿ ತಂದಿದ್ದು, ಇವೊತ್ತು ಜಾರಿಯಲ್ಲಿರತಕ್ಕಂಥ ನಿಯಮಗಳು ಏನಿವೆ ಅವುಗಳಿಂದ ಅಧ್ಯಕ್ಷರಿಗೂ ಕಮಿಷನರಿಗೂ ಒಂದು ಕಾನ್‌ಫ್ಲಿಕ್ಟ್, ಸಂಘರ್ಷ ಆಗತಕ್ಕಂಥ ಪ್ರಮೇಯ ಉಂಟು, ಅವಕಾಶ ಉಂಟು. ಅಂಥಾದ್ದು ಏನಾದರೂ ಇದ್ದರೆ ಅದನ್ನು ಸರಿಪಡಿಸಲಿಕ್ಕೆ ತಾವು ಎಲ್ಲಾ ಪ್ರಯತ್ನ ಮಾಡಿ. ಅದು ಆಗಬಾರದು. ಏಕೆಂದರೆ, ಅದು

ನ್ಯಾಯುವಾದುದಲ್ಲ. ಸಂಸ್ಥೆಯಲ್ಲಿ ಒಂದು ಕಾನೂನು ಇರುತ್ತದೆ, ಕಾನೂನು ಪ್ರಕಾರ ನಡೆಯುತ್ತಾರೆ. ಕೆಲವು ಅಧಿಕಾರಿಗಳು ಕಾನೂನು ಪ್ರಕಾರ ನಡೆಯಲಿಕ್ಕೆ ಪ್ರಯತ್ನ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಆಗ ಸಾರ್ವಜನಿಕರಿಂದ ಹೊಸದಾಗಿ ಬಂದಿರತಕ್ಕವರು ತಮ್ಮ ಅಧಿಕಾರವನ್ನು ಚಲಾಯಿಸಬೇಕು ಎಂದು ಪ್ರಯತ್ನ ಮಾಡಿದಾಗ, conflict of law may arise. Conflict of ideas based on law may arise. ಅದನ್ನು ಯಾವ ರೀತಿಯಾಗಿ ನಿವಾರಣೆ ಮಾಡಿಕೊಂಡು ಜನಗಳಿಗೆ ಸೇವೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ಯೋಚನೆ ಮಾಡಿ. ಅದನ್ನು ಇವತ್ತಾದರೂ ಅಳವಡಿಸಿಕೊಳ್ಳಿ, ಅಳವಡಿಸಿಕೊಂಡು ಮುಂದೆ ರೂಲ್ಸ್‌ಗಳನ್ನು ಮಾಡಿ ಬಿಡಿಎ ನವರು ಸರಿಯಾಗಿ ನ್ಯಾಯಬದ್ಧವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡಲಿಕ್ಕೆ ತಾವೆಲ್ಲರೂ ಆಸಕ್ತಿವಹಿಸಿ ನಿರ್ದೇಶನ ಕೊಡುತ್ತೀರಿ ಎಂದು ಹೇಳಿ, ಈಗ ಏನು ತಿದ್ದುಪಡಿಗಳನ್ನು ತಂದಿದ್ದೀರಿ, ಅದರ ಬಗ್ಗೆ ನನ್ನ ಅಭಿಪ್ರಾಯಗಳನ್ನು ಏನು ವ್ಯಕ್ತಪಡಿಸಿದ್ದೇನೆ ಅದಕ್ಕೆ ಒಳಪಟ್ಟು ನಾನು ಅದಕ್ಕೆ ಬೆಂಬಲ ಕೊಡುತ್ತೇನೆ.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ತಂದಿರುವ ತಿದ್ದುಪಡಿ ವಿಧೇಯಕವನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಾನು ನಿನ್ನೆಯ ದಿವಸ ಕಾರ್ಪೊರೇಷನ್‌ಗಳಿಗೆ ಸಂಬಂಧಪಟ್ಟಂಥ ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡಿದಾಗ ಒಂದು ಪ್ರಾಮಾಣಿಕವಾದಂಥ ಅನಿಸಿಕೆಯನ್ನು ವ್ಯಕ್ತಪಡಿಸಿದ್ದೆ. ಎಲ್ಲೆಲ್ಲಿ ಆಡಳಿತದ ಶಿಥಿಲವಾಗಿದೆ ಅದನ್ನು ಕಾನೂನಿನಿಂದ ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಕಾನೂನನ್ನು ಬೆಳೆಸುತ್ತಾ ಹೋದ ಹಾಗೆ, ಇರುವ ಕಾನೂನಿಗೆ ತಿದ್ದುಪಡಿಗಳ ಮೂಲಕ ಮತ್ತಷ್ಟು ಕಾನೂನುಗಳನ್ನು ಜೋಡಿಸುತ್ತಾ ಹೋದ ಹಾಗೆ ಆಡಳಿತ ಸುಧಾರಣೆಯಾಗುತ್ತದೆ ಎಂದು ನಂಬಿದ್ದರೆ ಅದಕ್ಕಿಂತ ದೊಡ್ಡದಾದಂಥ ಭ್ರಮೆ ಇನ್ನೊಂದಿಲ್ಲ. ಕಾನೂನು ಕಡಿಮೆ ಇರಬೇಕು, ಆಡಳಿತದ ಜವಾಬ್ದಾರಿ ದಕ್ಷತೆ ಹೆಚ್ಚಾಗಿರಬೇಕು. ಕಾನೂನು ಜಾಸ್ತಿ ಮಾಡಿದ ಮಾತ್ರಕ್ಕೆ ಆಡಳಿತ ತನ್ನಷ್ಟಕ್ಕೆ ತಾನೇ ಸರಿಹೋಗುವುದಿಲ್ಲ. ಇವತ್ತು ಬಹಳ ವಿಚಿತ್ರವಾದಂಥ ಒಂದು ಧೋರಣೆಯನ್ನು ಸರ್ಕಾರ ಅನುಸರಿಸುತ್ತಾ ಇರುವುದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಗುತ್ತಿದೆ. ಈಗಿರುವ ಎಲ್ಲಾ ಕಾನೂನುಗಳಿಗೂ ಕೂಡ ಒಂದಲ್ಲ ಒಂದು ತಿದ್ದುಪಡಿ, ಆ ತಿದ್ದುಪಡಿಯಲ್ಲಿ ಅಧಿಕಾರಿಗಳ ಅಧಿಕಾರವನ್ನು ಹೆಚ್ಚಿಸತಕ್ಕಂಥ ಒಂದು ಪ್ರವೃತ್ತಿ ಇದೆ. ಆದರೆ ಕಾನೂನು ಮೂಲಕವಾಗಿ ನೀವು ಅಧಿಕಾರವನ್ನು ಹೆಚ್ಚಿಸುತ್ತಾ ಇರುವಾಗ ಅದರಿಂದ ಅವರ ದಕ್ಷತೆಗೆ ಬಾಧಕವಾಗುತ್ತದೆಯೋ ಏನೋ ಎನ್ನುವುದನ್ನೂ ಕೂಡ ಸೂಕ್ಷ್ಮವಾಗಿ ವಿವೇಚನೆ ಮಾಡಬೇಕು. ಇವತ್ತು ಇದ್ದಕ್ಕಿದ್ದ ಹಾಗೆ ಎಸ್ಟಿಮೇಟ್ ಸಾಂಕ್ಷನ್ ಮಾಡತಕ್ಕ ಅಧಿಕಾರವನ್ನು, ಒಂದು ಲಕ್ಷ ಇದ್ದುದನ್ನು ೨-೩ ಲಕ್ಷ ಮಾಡಬಹುದು, ೪-೫ ಲಕ್ಷ ಮಾಡಬಹುದು. ಆದರೆ ಇದ್ದಕ್ಕಿದ್ದ ಹಾಗೆ ಒಂದು ಲಕ್ಷ ಇದ್ದುದನ್ನು ೧೦ ಲಕ್ಷಕ್ಕೆ, ೫ ಲಕ್ಷ ಇದ್ದುದನ್ನು ೫೦ ಲಕ್ಷಕ್ಕೆ ಏರಿಸತಕ್ಕಂಥ ಸಂದರ್ಭಗಳು ಏನಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ವಿವರಿಸಿದರೆ ಒಳ್ಳೆಯದು. ಇದರಿಂದ ಅಧಿಕಾರಿಗಳಿಗೆ ಉಪಕಾರ ಮಾಡುತ್ತಾರೋ, ಅಪಕಾರ ಮಾಡುತ್ತಾರೋ ಎನ್ನುವುದು ಅರ್ಥವಾಗುವುದಿಲ್ಲ. ಬೇಕಾದುದಕ್ಕಿಂತ ಜಾಸ್ತಿ ಅಧಿಕಾರವನ್ನು ಕೊಟ್ಟರೆ ಎಲ್ಲರಿಗೂ ಅಧಿಕಾರ ಚಲಾವಣೆ ಮಾಡುವ ಧೈರ್ಯವಿಲ್ಲ. ಅವರಿಗೆ ಅಧಿಕಾರ ಇದೆ, ಅದನ್ನು ಚಲಾವಣೆ ಮಾಡುವುದಕ್ಕೂ ಸಾಧ್ಯವಿಲ್ಲ, ಬಿಡುವುದಕ್ಕೂ ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದರ ಬದಲು ಯಾವಾಗಲೂ ವ್ಯಾಪಕವಾದಂತಹ ಆರ್ಥಿಕ ಅಂಶಗಳನ್ನು ಒಳಗೊಂಡಿರುವ ನಿರ್ಧಾರಗಳನ್ನು ಒಪ್ಪಿಕೊಳ್ಳತಕ್ಕಂಥಾದ್ದಕ್ಕೆ ಬಿಡಿಎ ನಲ್ಲಿರತಕ್ಕ ಜನಗಳು ಸೇರಿರತಕ್ಕ ಒಂದು ಹಣಕಾಸು ಸಮಿತಿಯನ್ನೇನಾದರೂ ಮಾಡಿ ಅದಕ್ಕೆ ಅವಕಾಶ ಕೊಡುವುದು ಯೋಗ್ಯವೇ ಹೊರತು ಒಬ್ಬೊಬ್ಬ ಅಧಿಕಾರಿ ತಲೆಗೆ ಇಷ್ಟಿಷ್ಟು ಅಧಿಕಾರವನ್ನು ಸುತ್ತಿದರೆ ತಲೆ ಭಾರಕ್ಕೆ ಕಾರಣವಾಗಬಹುದು, ನೋವಿಗೆ ಕಾರಣವಾಗಬಹುದೇ ಹೊರತು ಆಡಳಿತವನ್ನು ಸುಗಮಗೊಳಿಸುವುದಕ್ಕೆ ಖಂಡಿತವಾಗಿಯೂ ಕಾರಣವಾಗುವುದಿಲ್ಲ. ಎರಡನೆಯದಾಗಿ, ಯಾವುದಾದರೂ ಕಾನೂನು ಬಾಹಿರವಾದ ನಿರ್ಧಾರಗಳಿದ್ದರೆ ಅದನ್ನು ಅವರು ಕಾರ್ಯಗತಗೊಳಿಸದೇ ಇರತಕ್ಕಂಥ ಡಿಸ್ಕ್ರಿಷನ್ ಇಲ್ಲ ಎಂದು ಹೇಳಿದ್ದೀರಿ, ಇದನ್ನು ನೋಡಿ ಬಹಳ ಆಶ್ಚರ್ಯವಾಯಿತು. ನನಗೆ ಗೊತ್ತಿರುವ ಮಟ್ಟಿಗೆ, ಸರ್ಕಾರದ ಪ್ರತಿಯೊಬ್ಬ ಅಧಿಕಾರಿಗೂ ಕೂಡ ಕಾನೂನು ಬಾಹಿರವಾದಂಥ ಯಾವುದೇ ನಿರ್ಧಾರವನ್ನು ಕಾರ್ಯಗತ ಮಾಡದೇ ಇರತಕ್ಕಂಥ ಇನ್‌ಹರೆಂಟ್ ಪವರ್ಸ್ ಇದೆ. ಯಾವ ಸರ್ಕಾರಿ ಅಧಿಕಾರಿಯೂ ಕೂಡ ಕಾನೂನಿಗೆ ಬಾಹಿರ ಎಂದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದ ಸೂಚಿಸುತ್ತದೆ.

ಗೊತ್ತಾದಂಥ ನಿರ್ಣಯವನ್ನು ಕಾರ್ಯಗತ ಮಾಡಬೇಕಾದ ಅಗತ್ಯವಿಲ್ಲ. ಅದಕ್ಕೆ ಒಂದು ಕಾನೂನು ಮಾಡಿ ಎಂದು ಹೇಳುವುದು ಎಂದರೆ ಅರ್ಥ ಏನು ? ಈಗ ಬಿಡಿಎ ಕಮಿಷನರಿಗೆ ಕಾನೂನಿಗೆ ವಿರುದ್ಧವಾಗಿರುವುದನ್ನು ಕಾರ್ಯಗತ ಮಾಡದೇ ಇರುವ ಅಧಿಕಾರ ಇದೆ ಎಂದು ಹೇಳುವುದಕ್ಕೆ ಹೋದರೆ, ಹಾಗಾದರೆ ಯಾರ ಬಗ್ಗೆ ಈ ಮಾತು ಹೇಳಿಲ್ಲವೋ ಅವರೆಲ್ಲ ಕಾನೂನು ಇರಲಿ ಇಲ್ಲದಿರಲಿ ಅದನ್ನೆಲ್ಲಾ ಕಾರ್ಯಗತ ಮಾಡಬೇಕು ಎಂದು ಅರ್ಥವಾಗುವುದಿಲ್ಲವೇ ? ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ ನಮ್ಮಲ್ಲಿ ಹಲವಾರು ಕಾನೂನುಗಳಿವೆ, ಹಲವಾರು ಸಂಸ್ಥೆಗಳಿವೆ, ಬೋರ್ಡ್‌ಗಳಿವೆ, ಕಾರ್ಪೊರೇಷನ್‌ಗಳಿವೆ. ನೀವು ಇದನ್ನು ತಂದಮೇಲೆ ಎಲ್ಲಾ ಕಡೆಗಳಿಂದಲೂ ಕೂಡ ಅಧಿಕಾರಿಗಳು ಇಂಥಾದ್ದು ಅಮೆಂಡ್‌ಮೆಂಟ್ ನಮಗೂ ಬೇಕು ಎಂದು ತರುವುದಕ್ಕೆ ಹೋಗುತ್ತಾರೆ. ಕಾನೂನು ಇರಲಿ ಇಲ್ಲದಿರಲಿ ನಾವು ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ. ನೋಡಿ, ನಮ್ಮ ಕಾರ್ಪೊರೇಷನ್ ಆಕ್ಟ್‌ನಲ್ಲಿ ಕಾನೂನು ಬಾಹಿರವಾಗುವುದನ್ನು ಕಾರ್ಯಗತ ಮಾಡಬಾರದು ಎಂದು ಇದೆಯೋ, ಇಲ್ಲ ಅಂದಮೇಲೆ ಕಾರ್ಯಗತ ಮಾಡಿ ಎಂದು ಹೇಳುವುದಕ್ಕೆ ಅವಕಾಶವಾಗುತ್ತದೆಯೋ ಹೊರತು ಇದನ್ನು ಆಡಳಿತಾತ್ಮಕವಾಗಿ ಎದುರಿಸಬೇಕಾದ ಅವಶ್ಯಕತೆ ಇದೆ. ಕಮಿಷನರ್, ಬಿಡಿಎ ಮುಂದೆ ಸಬ್ಜೆಕ್ಟ್ ಬಂದಾಗ ಇದು ಕಾನೂನು ವಿರುದ್ಧವಾಗಿದೆ ಎಂದು ಹೇಳಿದಮೇಲೂ ಬಹುಮತದಿಂದ ನಿರ್ಣಯ ಮಾಡಿದರೆ ಅದನ್ನು ಸರ್ಕಾರಕ್ಕೆ ಕಳುಹಿಸಬೇಕು. ಸರ್ಕಾರ ತನ್ನ ರಿವಿಜನಲ್ ಪವರ್ಸ್ ಉಪಯೋಗಿಸಿ ಅಂತಹ ನಿರ್ಣಯಗಳನ್ನು ಹೊಡೆದು ಹಾಕಲಿ. ಅದನ್ನು ಬಿಟ್ಟು ಕಾನೂನು ಸಿದ್ಧಪಡಿಸಿ, ಕಾನೂನು ಬಾಹಿರವಾದದ್ದನ್ನು ಯಾವುದನ್ನೂ ಇವರು ಕಾರ್ಯಗತ ಮಾಡಬೇಕಾದ್ದಿಲ್ಲ, ಗವರ್ನಮೆಂಟಿಗೆ ಸಬ್ಮಿಟ್ ಮಾಡಿ, ಗವರ್ನಮೆಂಟ್ ಓಕೆ ಮಾಡಬಹುದು, ಅದರಿಂದ ಪರ್ಮಿಷನ್ ಬಂದರೆ ಮಾಡಬಹುದು......

೩–೩೦ ಪಿ. ಎಂ.

ಎಂದರೆ ಅದರ ಅರ್ಥ ಏನು ? ನಾಳೆ ಇನ್ನೊಂದು ಪ್ರಶ್ನೆ ಬರುತ್ತದೆ ಆಗ ಯಾವುದು ಕಾನೂನು ಬಾಹಿರ, ಯಾವುದು ಕಾನೂನು ಬಾಹಿರವಲ್ಲದ ನಿರ್ಣಯ ಎಂದು ಹೇಳುವವರು ಯಾರೂ ? ಇದನ್ನೆಲ್ಲಾ ಎಲ್ಲಿ ಡಿಫೈನ್ ಮಾಡುತ್ತೀರಿ. ಕಾನೂನು ಬಾಹೀರವೆಂದು ಹೇಳುವುದಕ್ಕೆ ಅಧಿಕಾರ ಎಲ್ಲಿದೆ?. The Commissioner is empower to dicide whether a particular resolution is in accordance with the law or not. ನೀವು ಅದನ್ನು ಹೇಳಲಿಲ್ಲ. ಅದಕ್ಕೇ ಒಂದು ಅಥಾರಿಟಿಯನ್ನು ಸೃಷ್ಟಿ ಮಾಡಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೇ ಒಬ್ಬ ಲೀಗಲ್ ಅಡ್ವೈಸರ್ ಅನ್ನು ಕಳುಹಿಸಿ ಅಗ ಅವನು ಕಾನೂನು ಬಾಹಿರವೇ ಇಲ್ಲವೇ ಎಂದು ನೋಡುತ್ತಾನೆ. ಇದರಿಂದ ಏನು ಪ್ರಯೋಜನ ಇದೆ. ಇದರಿಂದ ಏನು ಸಾರ್ಥಕತೆ ಇದೆ ? ನಾಲ್ಕು ವರ್ಷಕ್ಕೊ ಅಥವಾ ಐದು ವರ್ಷಕ್ಕೊ ಅಂತಹ ಸಂದರ್ಭ ಬರಬಹುದು. ಕಾನೂನು ಬದ್ಧವಾದ ಸಂಸ್ಥೆಗಳನ್ನು ತಾವು ಮುಖ್ಯವಾಗಿ ನಿರ್ವಾಣ ಮಾಡುತ್ತೀರಿ, ಆದರೆ ಆ ಸಂಸ್ಥೆಯ ನಿರ್ಣಯಗಳು ಕಾನೂನು ಬದ್ಧವಾಗಿ ಆಗುವ ರೀತಿಯಲ್ಲಿ ನೋಡಿಕೊಳ್ಳಬೇಕು. ಅದನ್ನು ಬಿಟ್ಟು ನೀವೇ ಕಾನೂನನ್ನು ಲೆಕ್ಕಕ್ಕೆ ಇಟ್ಟುಕೊಳ್ಳದೆ ವ್ಯವಹಾರ ಮಾಡುತ್ತೇವೆ ಎನ್ನುವ ಭಾವನೆಯನ್ನು ಇಟ್ಟುಕೊಂಡರೆ ಹೇಗೆ ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರದ್ದು ಮಾಡಬೇಕಾಗುತ್ತದೆ. ಕಾನೂನಿಗೆ ವಿರೋಧವಾಗಿ ಮಾಡಿದಾಗ ಹೀಗೆ ಮಾಡಬೇಕೆಂದು ಹೇಳುವುದಲ್ಲ, ಕಾನೂನು ವಿರೋಧವಾಗಿ ಕೆಲಸ ಮಾಡದೇ ಇದ್ದ ರೀತಿಯಲ್ಲಿ, ಆ ತರಹ ನಿರ್ಣಯಗಳು ಆಗದೆ ಇರುವ ರೀತಿಯಲ್ಲಿ ಏನು ಬಂದೋಬಸ್ತು ಬೇಕೋ ಅದನ್ನು ಮಾಡಿ. ಅದಕ್ಕೆ ಒಬ್ಬ ಲೀಗಲ್ ಮನುಷ್ಯ ಅಲ್ಲಿ ಸದಸ್ಯನಾಗಿ ಇರುವ ಹಾಗೆ ಮಾಡಿ. It is not against any law. ಯಾವುದೇ ನಿರ್ಣಯ ಅಲ್ಲಿ ಅಂಗೀಕಾರವಾಗಬೇಕಾದರೆ ಲೀಗಲ್ ಆಗಿ ಅವರು ಎಕ್ಸಾಮಿನ್ ಮಾಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅದರ ಬಗ್ಗೆ ತೀರ್ಮಾನ ಮಾಡುವ ರೀತಿಯಲ್ಲಿ ಮಾಡಬೇಕೇ ಹೊರತು ಆ ನಿರ್ಣಯಗಳು ಸರಕಾರಕ್ಕೆ ಬಂದರೆ ಸರಕಾರ ಆಲೋಚನೆ ಮಾಡಿ, ಬೇಕಾದರೆ ರದ್ದು ಮಾಡಬಹುದು, ಬೇಡದಿದ್ದರೆ ಪರ್ಮಿಷನ್ ಕೊಡಬಹುದು ಎನ್ನತಕ್ಕಂಥಾದ್ದು ಸರಿಯಾದ ಕ್ರಮ ಅಲ್ಲ. ನಾಳೆ ಈ ಪ್ರೆಸಿಡೆಂಟ್ ಅನ್ನು ಎಲ್ಲಾ ಕಾರ್ಪೋರೇಷನ್‌ಗಳಿಗೆ ಇದೇ ಕಾನೂನನ್ನು ಮಾಡಿ ಎಲ್ಲೆಲ್ಲಿ ಅಧಿಕೃತವಾಗಿ ಇಲ್ಲವೋ ಅಲ್ಲೆಲ್ಲಾ ಅಧಿಕಾರಿಗಳು ಕಾನೂನು ಇರಲಿ ಇಲ್ಲದಿರಲಿ ಅದನ್ನು ಮಾಡಲು ಸಾಧ್ಯವೇ ? ಉದಾಹರಣೆಗೆ ಹೇಳುವುದಾದರೆ, ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಯಾವುದೇ ಒಂದು ಕೇಸನ್ನು ಬಹುಮತದಿಂದ ಪಾಸ್ ಮಾಡಿದರೆ, ಅಸಿಸ್ಟೆಂಟ್ ಕಮಿಷನರ್ ರುಜು ಹಾಕಬೇಕು. ಕಾನೂನು ವಿರುದ್ಧವಾಗಿ ಬಹು ಮತದಿಂದ ಪಾಸ್ ಮಾಡಿದಾಗ ಅಸಿಸ್ಟೆಂಟ್ ಕಮಿಷನರ್‌ರವರು ಅದನ್ನು ಸರಕಾರಕ್ಕೆ ಕಳಿಸಬಹುದೆಂದು ಲ್ಯಾಂಡ್ ರಿಫಾರಂ್ಸ ಆಕ್ಟ್‌ನಲ್ಲಿ ಬರೆದಿದ್ದೀರಾ ? ಇದೇ ರೀತಿ ನಾಳೆ ಬೇಕಾದಷ್ಟು ವಿಷಯದಲ್ಲಿ

ಸಮಸ್ಯೆಗಳು ಹುಟ್ಟಬಹುದು. ಸರ್ಕಾರೀ ಅಧಿಕಾರಿಗೆ ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡತಕ್ಕಂತಹ ಅಧಿಕಾರವಿಲ್ಲವೇ ಇಲ್ಲ. ಯಾರೇ ಬಲಾತ್ಕಾರ ಮಾಡಲಿ ನಿರ್ಣಯದ ಮೂಲಕವೋ ಆಜ್ಞೆ ಮೂಲಕವೋ Even if a Minister passes illegal order, no official is duty bound to carry it out, he can say it is against the law. ಯಾರೂ ಅವನನ್ನು ಡಿಸ್‌ಮಿಸ್ ಮಾಡುವುದಕ್ಕೆ ಆಗುವುದಿಲ್ಲ. ಅದರಿಂದಾಗಿ It is already aninherent power with an officer to refuse impliment an order which is illegal. ಇದಕ್ಕೆ ಹೊಸದಾಗಿ ತಾವು ಕಾನೂನು ಮಾಡತಕ್ಕಂತಹ ಅಗತ್ಯವಿಲ್ಲ. ಕಾನೂನು ಮಾಡತಕ್ಕಂಥಾದ್ದು If he becomes a party to an illegal resolution then you have to sack him ಸಾಧುವೂ ಅಲ್ಲ, ಸರಿಯೂ ಅಲ್ಲ, ಅಂತಹ ಸಂದರ್ಭ ವಿದ್ದರೆ ಬೇರೆ ಪ್ರಶ್ನೆಯೇ ಇಲ್ಲ. ಅಥಾರಿಟಿ ಮಾಡುವ ಕೆಲಸ ಲೀಗಲ್ ಆಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕೇ ಹೊರತು, ಇಲ್ ಲೀಗಲ್ ಆಗಿ ಅಥಾರಿಟಿ ಕೆಲಸ ಮಾಡತಕ್ಕಂತಹ ವ್ಯವಸ್ಥೆಯನ್ನು ಮುಂದುವರಿಸಿ ಅನಂತರ ಸರ್ಕಾರ ಅದನ್ನೆಲ್ಲಾ ಸರಿಪಡಿಸತಕ್ಕಂಥಾದ್ದು ಸಾಧ್ಯವಿಲ್ಲ. ಎಲ್ಲಾ ಬಿ. ಡಿ. ಎ. ನಿರ್ಣಯಗಳು ಸರಕಾರಕ್ಕೆ ಬರಬೇಕೆಂದು ಬರೆದಿದ್ದೀರಿ. ಬಿ. ಡಿ. ಎ. ಗೆ ಏನು ಹೋಗಿದೆ ಅಲ್ಲಿ ಏನು ಆಗಿದೆ ಎಂದು ಅಲ್ಲಿ ಇರುವವರಿಗೇ ತಿಳಿಯುವುದಕ್ಕೆ ಆಗುವುದಿಲ್ಲ. ಒಂದೊಂದು ದಿವಸಕ್ಕೆ ಒಂದೊಂದು ನಿರ್ಣಯವಾಗಿದೆ. ಅಲ್ಲಿನ ಕಮಿಷನರ್‌ರವರಿಗೆ ಏನಾಗಿದೆ, ಏನು ಸರ್ಕಾರಕ್ಕೆ ಹೋಗಿದೆ ಎಂದು ಗೊತ್ತಾಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೇಳಿದರು, ಆದರ ಬಗ್ಗೆ ನಾನು ವಿವರಗಳಿಗೆ ಹೋಗುವುದಿಲ್ಲ. ನಾವು ರಚಿಸಿರುವ ಸಂಸ್ಥೆಗಳಲ್ಲಿ ಅತ್ಯಂತ ಅಧ್ವಾನವಾದ ಸಂಸ್ಥೆ ಎಂದರೆ ಅದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಅಲ್ಲಿ ಏನಾಗಿದೆ ಎಂದು ಅಲ್ಲಿದ್ದವರಿಗೇ ಗೊತ್ತಾಗುವುದಿಲ್ಲ, ಅರ್ಥವಾಗುವುದಿಲ್ಲ. ಇನ್ನು ಹೊರಗೆ ಇದ್ದಂತಹವರಿಗೆ ಗೊತ್ತೇ ಆಗುವುದಿಲ್ಲ. ಅಲ್ಲಿ ಬರೀ ಜನಜಂಗುಳಿಯಿರುತ್ತದೆ ಅಂತಹ ಪರಿಸ್ಥಿತಿಯಲ್ಲಿ ಈ ಸಂಸ್ಥೆ ಇದೆ. ಯಾವ ದಕ್ಷ ಅಧಿಕಾರಿಯನ್ನು ಅಲ್ಲಿಗೆ ಹಾಕಿದರೂ ಕೂಡ ೧೫-೨೦ ದಿವಸ ಕೆಲಸ ಮಾಡಿದ ಕೂಡಲೇ ಸಾಕು ಎಂದು ಟ್ರಾನ್ಸ್‌ಫರ್ ಕೇಳಬೇಕಾದ ಪ್ರಸಂಗ ಬರಬಹುದು. ಲಾಭ ಮಾಡಿಕೊಳ್ಳುವವರು ಅಲ್ಲೇ ಇರುವುದಕ್ಕೆ ಪ್ರಯತ್ನ ಪಡಬಹುದು. ಯಾವ ಫೈಲ್ ಎಲ್ಲಿ ಹೋಗುತ್ತದೆ, ಬರುತ್ತದೆ ಎಂದು ಅಲ್ಲಿರುವವರಿಗೇ ಗೊತ್ತಿರುವುದಿಲ್ಲ, ಮೂರನೆಯವರ ಕೈಯ್ಯಲ್ಲಿ ಫೋಟೋ ಸ್ಟ್ಯಾಟ್ ಕಾಪಿ ಇರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಒರಿಜಿನಲ್ ಫೈಲ್ ಇರುವುದಿಲ್ಲ, ಕೆಂಪೇಗೌಡ ಹುಟ್ಟುವುದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹುಟ್ಟಿದಿದ್ದರೆ, ಬೆಂಗಳೂರೇ ಹುಟ್ಟುತ್ತಲೇ ಇರಲಿಲ್ಲ. ಬೆಂಗಳೂರು ಹುಟ್ಟುವುದಕ್ಕೆ ಅವರು ಬಿಡುತ್ತಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿರಬೇಕಾದರೆ ಎಲ್ಲಾ ನಿರ್ಣಯಗಳು ಸರಕಾರಕ್ಕೆ ಬಂದರೆ ಸರಕಾರದಲ್ಲಿ ಅದನ್ನೆಲ್ಲಾ ಸ್ಕ್ರೂಟಿನೈಸ್ ಮಾಡುವುದಕ್ಕೆ ಒಂದು ಸೆಲ್ ತೆಗೆಯಬೇಕಾಗುತ್ತದೆ. ಯಾವಯಾವುದು ಬೇಕು ಯಾವ ಯಾವುದು ಬೇಡ ಯಾವ ಯಾವುದು ಸರಿ ಯಾವ ಯಾವುದು ತಪ್ಪು ಎಂದು ನಿರ್ಣಯ ಮಾಡುವವರು ಯಾರು ? ಬಿ. ಡಿ. ಎ. ಸ್ಪೆಷಲ್ ಡೈರಕ್ಟೋರೇಟ್ ಅನ್ನು ಮತ್ತೆ ತನ್ನಿ ಆ ನಿರ್ಣಯ ಕಾರ್ಯಗತ ವಾಗುವುದು ಯಾವಾಗ ಸರಕಾರಕ್ಕೆ ಬಂದು ಇಲ್ಲಿ ನಿರ್ಣಯವಾದ ಮೇಲೆ ಮತ್ತೆ ವಾಪಸ್ ಹೋಗಿ ಅದು ಕಾರ್ಯಗತವಾಗಬೇಕಾಗುತ್ತದೆ. ಹೀಗಾದರೆ ಈಗಿರುವಂತಹ ಸಮಸ್ಯೆಗಳು ಕೊಳೆಯುತ್ತವೆ, ಇನ್ನೂ ಹಲವಾರು ಸಮಸ್ಯೆಗಳು ಕೊಳೆತು ಹೋಗುತ್ತವೆ. ಇದರಿಂದ ಆದಷ್ಟು ಶೀಘ್ರವಾಗಿ ಯಾವುದೇ ಸಮಸ್ಯೆಯನ್ನು ಎದುರಿಸುವುದಕ್ಕೆ ಆಗುವುದಿಲ್ಲ, ಕೊಳಗೇರಿ ಸಮಸ್ಯೆಯನ್ನು ಎದುರಿಸುವುದಕ್ಕಾಗುವುದಿಲ್ಲ. ಸಂಪೂರ್ಣವಾಗಿ ಸಹಕಾರಿ ಸಂಘಗಳನ್ನು ರದ್ದು ಪಡಿಸುವುದಕ್ಕೆ ಏಕೆ ಆಗುವುದಿಲ್ಲವೆಂದರೆ ಜನರ ಒಂದು ವಸತಿ ಸಮಸ್ಯೆ ಎಷ್ಟು ವೇಗವಾಗಿ ಬೆಳೆಯುತ್ತದೆಯೋ ಅಷ್ಟೇ ವೇಗವಾದ ಹೆಜ್ಜೆಯನ್ನು ಬಿ. ಡಿ. ಎ. ಯ ದವರು ಹಾಕುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಬೇರೆ ಸಮಸ್ಯೆಗಳನ್ನು ಕೂಡ ಎದುರಿಸುವುದಕ್ಕೆ ಅವರಿಂದ ಸಾಧ್ಯವಾಗುತ್ತಿಲ್ಲ. ನಮ್ಮ ಬಿ. ಡಿ. ಎ. ನಲ್ಲಿ ನಿರ್ಣಯಗಳಾಗುವುದಕ್ಕೇ ವರ್ಷಗಟ್ಟಲೆ ಬೇಕು, ಇನ್ನು ಅಲ್ಲಿ ಆಗಿದ್ದೆಲ್ಲಾ ಸರಕಾರಕ್ಕೆ ಬಂದು, ಸರಕಾರದಿಂದ ಅದು ಮಂಜೂರಾತಿಯಾಗಿ ವಾಪಸ್ ಬಂದಮೇಲೆ, ಸಣ್ಣದಿರಲಿ, ಪುಟ್ಟದಿರಲಿ, ಪ್ರತಿಯೊಂದೂ ಸರಕಾರಕ್ಕೆ ಬಂದು ಹೋಗಿ ಬಿ. ಡಿ. ಎ. ಕೆಲಸಮಾಡುವಂತಾದರೆ, ಅದು ಏಕೆ ಇರಬೇಕು ಮಹಾಸ್ವಾಮಿ. ಸರಕಾರದ ಇಲಾಖೆಯೇ ಸಾಲದೇ ಅದು ಏಕೆ ಇರಬೇಕು? ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಯೇ ಸಾಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರದ್ದು ಪಡಿಸಿದರೆ ಒಳ್ಳೆಯದು. ಮಾನ್ಯ ಮೊಯಿಲಿಯವರು ಹೇಳಿದರು, ಮೊದಲಾದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಸುಧಾರಿಸಿಕೊಂಡರೆ ಸಾಕಿತ್ತು, ಈಗ ಅಲ್ಲಿಂದ ಸರಕಾರಕ್ಕೆ ಬಂದು ಪುನಃ ವಾಪಸ್ ಹೋಗುವುದರಿಂದ ಅವನು ಎರಡನ್ನೂ ಸುಧಾರಿಸ ಬೇಕಾಗುತ್ತದೆ ಮತ್ತು ಇಲ್ಲಿಂದ ಅಲ್ಲಿಗೆ ಹೋದ ಮೇಲೆ ಮತ್ತೆ ಅವನು

ಅಲ್ಲೀ ಸಥಾರಿಸಬೇಕಾಗುತ್ತದೆ. ಇದು ಸರಿಯಲ್ಲ, ಇದು ಖಂಡಿತವಾಗಿ ವಿವೇಕವಲ್ಲ, ಇದರಲ್ಲಿ ಯಾವುದೇ ತಾತ್ಪರ್ಯವಿಲ್ಲ. ಸುಮ್ಮನೆ ಯಾರು ಯಾರೋ ಹೇಳುತ್ತಾರೆ, ಮಕ್ಕಿಕಾಮಕ್ಕಿ ತರುತ್ತೀರಿ. ಈ ತಿದ್ದುಪಡಿಯಿಂದ ಯಾವ ಪ್ರಯೋಜನ ಕೂಡ ಆಗುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಈ ತಿದ್ದುಪಡಿಯನ್ನು ಕೈ ಬಿಟ್ಟು, ಬಿ. ಡಿ. ಎ. ಅನ್ನು ಯಾವ ಉದ್ದೇಶಕ್ಕೆ ನಿರ್ಮಾಣ ಮಾಡಿದ್ದೇವೆಯೋ ಆ ಉದ್ದೇಶಕ್ಕನುಸಾರವಾಗಿ ಬಿ. ಡಿ. ಎ. ಬಹಳ ಕ್ಷಿಪ್ರವಾದ ಗತಿಯಲ್ಲಿ ಕೆಲಸ ಮಾಡಿ, ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕಂತಹ ಸೂತ್ರಗಳನ್ನು ತನ್ನಿ. ಅದಕ್ಕೇನಾದರೂ ಕಾನೂನಿನ ಕೊರತೆ ಇದ್ದರೆ, ಆದಕ್ಕೆ ಕಾನೂನನ್ನು ತನ್ನಿ, ಆದಕ್ಕೆ ಮಂಜೂರಾತಿ ಕೊಡುವುದಕ್ಕೆ ನಾವೂ ಕೂಡ ಸಂತೋಷದಿಂದ ಸಹಕರಿಸುತ್ತೇವೆ. ಅದು ಬಿಟ್ಟು ಈಗ ಏನು ಅದ್ವಾನ ಇದೆಯೋ ಆ ಅದ್ವಾನವನ್ನು ಇನ್ನಷ್ಟು ಬೆಳೆಸುವುದಕ್ಕೆ ಅದನ್ನು ಇನ್ನಷ್ಟು ಗೋಜಲು ಮಾಡುವುದಕ್ಕೋಸ್ಕರವಾಗಿ, ಯಾವುದೇ ರೀತಿಯಾದ ಸರಳತೆಯನ್ನು ತರದೆ, ಇಂತಹ ಕಾನೂನುಗಳ ವಿಧಿಯನ್ನು ಪಾಲಿಸುತ್ತಾ ಹೋಗ ತಕ್ಕಂಥಾದ್ದರಲ್ಲಿ ಯಾವ ತಾತ್ಪರ್ಯವೂ ಕೂಡ ಇಲ್ಲ. ಇದರಿಂದಾಗಿ ಅನುಕೂಲವಾಗುವುದಕ್ಕಿಂತ ಹೆಚ್ಚಾಗಿ ಎಲ್ಲರಿಗೂ, ಸರಕಾರಕ್ಕೂ ತಲೆನೋವು. ಬಿ. ಡಿ. ಎ. ರೆಸಲ್ಯೂಷನ್ ಸರಕಾರಕ್ಕೆ ಬಂದರೆ, ಯಾರು ನೋಡುತ್ತಾರೆ ಅದು ಹೌದೋ ಅಲ್ಲವೋ ಎಂದು. ಯಾವನೋ ವಿಧಾನ ಸೌಧದಲ್ಲಿ ಕುಳಿತಿರುತ್ತಾನೆ, ಅವನಿಗೆ ಅಲ್ಲಿ ಏನು ಚರ್ಚೆಯಾಯಿತು, ಆ ನಿರ್ಣಯ ಏಕೆ ಆಯಿತು, ಅದನ್ನು ಏಕೆ ಮಾಡಿದರು, ಅದರ ಹಿನ್ನೆಲೆ ಏನೂ ಗೊತ್ತಿರುವುದಿಲ್ಲ. ಒಂದೊಂದು ನಿರ್ಣಯದ ಮೇಲೂ ಇಷ್ಟು ದೊಡ್ಡ ಕಡತವನ್ನು ಕಳಿಸಬೇಕಾದ ಪ್ರಸಂಗ ಬರಬಹುದು. ಅದನ್ನು ಸ್ಕ್ರೂಟನೈಸ್ ಮಾಡುವವರು ಯಾರು ? ಯಾವ ಲೆವೆಲ್ ಅಧಿಕಾರಿಗಳು ಇದನ್ನು ತೀರ್ಮಾನ ಮಾಡಬೇಕು ಇದು ಯಾವ ಲೆವೆಲ್ ನಲ್ಲಿ ತೀರ್ಮಾನವಾಗಬೇಕೆಂದರೆ, ಮಂತ್ರಿಗಳ ಲೆವೆಲ್‌ಗೇ ಹೋಗಬೇಕಾಗುತ್ತದೆ. ಅಲ್ಲಿಗೆ ಬಿ. ಡಿ. ಎ. ಸ್ಥಗಿತಗೊಳ್ಳುತ್ತದೆ. ಹಾಗೆ ಮಾಡುವುದರಿಂದ ಪ್ರಯೋಜನವಿಲ್ಲವೆಂದು ಹೇಳಿ ಈ ತಿದ್ದುಪಡಿ ವಿಧೇಯಕವನ್ನು ನಾನು ಪ್ರಬಲವಾಗಿ ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕವನ್ನು ನಾನೂ ಸಹ ವಿರೋಧಿಸಿ ಮಾತನಾಡುತ್ತೇನೆ. ಈಗಾಗಲೇ ಹಲವಾರು ಅಂಶಗಳನ್ನು ಇಬ್ಬರು ಮಾನ್ಯ ಸದಸ್ಯರು ಸಭೆಯ ಗಮನಕ್ಕೆ ತಂದಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಏತಕ್ಕೆ ಸ್ಥಾಪನೆ ಮಾಡಿದರು ಎಂಬುದನ್ನು ಹಾಗೂ ಅದು ಯಾವ ರೀತಿ ನಡೆದುಕೊಂಡು ಬಂದಿದೆ, ಅದರ ಚರಿತ್ರೆ ಏನು ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಯಾವ ಉದ್ದೇಶಕ್ಕಾಗಿ ಇದು ಸ್ಥಾಪನೆಯಾಯಿತೋ ಆ ಉದ್ದೇಶ ಸಫಲವಾಗಿಲ್ಲ ಎನ್ನುವುದನ್ನು ಈಗ ಹೇಳಲೇಬೇಕಾಗಿ ಬಂದಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅದನ್ನು ಸ್ಥಾಪನೆ ಮಾಡುವಾಗ ಮೊದಲನೆಯ ಬಾರಿಗೆ ಮಾನ್ಯ ದೇವರಾಜ್ ಅರಸರು ಇದನ್ನು ಮಂಡಿಸಿ ಮಾತನಾಡಿದ್ದಾರೆ.

" ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಬಿಲ್ ೧೯೭೬ನ್ನು ಮೂವ್ ಮಾಡುತ್ತಾ, ಈ ರೀತಿ ಮಾತನಾಡಿದ್ದಾರೆ. ಬೆಂಗಳೂರು ಮಹಾನಗರ ಒಂದು ಗೊತ್ತಾದ ನಿರ್ದಿಷ್ಟವಾದ ಮತ್ತು ಯೋಜಿತವಾದ ರೀತಿಯಲ್ಲಿ ಇನ್ನು ಮೇಲಾದರೂ ಹತೋಟಿಯಲ್ಲಿ ಬೆಳೆಯಬೇಕು ಮತ್ತು ಬೆಳೆಯುತ್ತಾ ಇರತಕ್ಕ ನಗರಕ್ಕೆ ಬೇಕಾದಂಥ ಸಕಲ ಸೌಕರ್ಯಗಳು ದೊರಕಬೇಕು ಎಂಬೆಲ್ಲಾ ದೃಷ್ಟಿಯಿಂದ, ವಿಧವಿಧವಾಗಿ, ಬೇರೆ ಬೇರೆ ಹೆಸರುಗಳಿಂದ ಕೂಡಿದ ಸಂಸ್ಥೆಗಳನ್ನು ಕ್ರೋಢೀಕರಿಸಿ ಈ ನಿಟ್ಟಿನಲ್ಲಿ ಒಂದೇ ಒಂದು ಸಂಸ್ಥೆ ಕೆಲಸ ಮಾಡುವುದು ಉಚಿತ ಎನ್ನುವ ಅಭಿಪ್ರಾಯ ಸರ್ಕಾರಕ್ಕಿದ್ದು ಈ ಮಸೂದೆಯನ್ನು ಮಾನ್ಯ ಸಭೆಯ ಒಪ್ಪಿಗೆಗಾಗಿ ತಂದಿದ್ದೇವೆ. ಇದರ ಅಗತ್ಯತೆಯನ್ನು ಮಾನ್ಯ ಸಭೆಯು ಒಪ್ಪುತ್ತದೆ ಎಂದು ನಾನು ಪೂರ್ವಭಾವಿಯಾಗಿಯೇ ನಂಬುತ್ತೇನೆ. ಬೆಂಗಳೂರು ಮಹಾನಗರದಲ್ಲಿ, ನಗರ ಸಭೆ ಒಂದು ಕಡೆ ಇದೆ, ನಗರಾಭಿವೃದ್ಧಿ ಮಂಡಲಿ ಒಂದು ಕಡೆ ಇದೆ ಗೃಹನಿರ್ಮಾಣ ಮಂಡಲಿ ಒಂದು ಕಡೆ ಇದೆ, ಏರಿಯಾ ಅಭಿವೃದ್ಧಿ ಮಂಡಲಿ ಒಂದು ಕಡೆ ಇದೆ ಮತ್ತು ಪ್ಲಾನಿಂಗ್ ಅಥಾರಿಟಿ ಹೀಗೆ ವಿಧವಿಧ ಸಂಸ್ಥೆಗಳು ಕೆಲಸ ಮಾಡಿಕೊಂಡು ಹೋಗುತ್ತಿದ್ದವು. ಹೀಗೆ ಬೇರೆ ಬೇರೆ ಸಂಸ್ಥೆಗಳನ್ನು ಸ್ಥಾಪನೆ ಮಾಡುವಾಗ, ಬೇರೆ ಬೇರೆ ಕಾನೂನುಗಳನ್ನು ಮಾಡಿ ಸ್ಥಾಪನೆ ಮಾಡಿದರು. ಈಗ ನಮಗೆ ಇದರಿಂದ ಆಗಬೇಕಾದಂಥ ಪ್ರಯೋಜನಗಳಿಗಿಂತ ಅಡಚಣೆಗಳೇ ಜಾಸ್ತಿಯಾಗುತ್ತಿವೆ. ಈ ಅಡಚಣೆಗಳು ಯಾವುವೆಂದರೆ, ಒಂದನೆಯದಾಗಿ, ಈ ನಾಲ್ಕಾರು ಸಂಸ್ಥೆಗಳು ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡುವುದು ಕಷ್ಟ. ಇದರಿಂದ ಏನಾಯಿತು ಎಂದರೆ,

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಒಂದೇ ಕೆಲಸವನ್ನು ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ಮಾಡುವಂಥ ಪರಿಸ್ಥಿತಿ ಉಂಟಾಯಿತು. ಮತ್ತು ಅಧಿಕಾರ ಕೂಡ ಕೇಂದ್ರೀಕೃತವಾಗಿ, ಆಯಾಯಾ ಸಂಸ್ಥೆಗಳವರು ಅವರಿಗಿರುವ ಅಧಿಕಾರವನ್ನು ಚಲಾಯಿಸತಕ್ಕ ಪರಿಸ್ಥಿತಿ ಬಂತು. ನಗರಾಭಿವೃದ್ಧಿ ಮಂಡಲಿಯವರು ನಿವೇಶನ ಹಂಚುವುದು, ಗೃಹ ನಿರ್ಮಾಣ ಮಂಡಲಿಯವರು ಮನೆ ಕಟ್ಟಿಸುವುದು, ಇನ್ನೊಬ್ಬರು ಇನ್ನೊಂದು ಮಾಡುವುದು ಹೀಗೆಲ್ಲಾ ಮಾಡುವುದಕ್ಕೆ ಹೋದಾಗ, ಅವರು ಹಾಕಿದಂಥ ಯೋಜನೆ ಇವರಿಗೆ ಹಿಡಿಸದಿರುವುದು, ಇವರು ಹಾಕಿದಂಥ ಯೋಜನೆ ಅವರಿಗೆ ಹಿಡಿಸದಿರುವುದು–ಹೀಗೆಲ್ಲಾ ಆಯಿತು. ಹೀಗೆಲ್ಲಾ ಇದ್ದುದರಿಂದ ಒಂದಲ್ಲ ಒಂದು ರೀತಿಯಲ್ಲಿ ತೀರಾ ಅವ್ಯವಸ್ಥಿತವಾಗಲ್ಲದಿದ್ದರೂ ವ್ಯವಸ್ಥಿತವಲ್ಲದ ರೀತಿಯಲ್ಲಿ ಬೆಂಗಳೂರು ನಗರ ಬೆಳೆಯುವುದಕ್ಕೆ ಬಹಳ ಮಟ್ಟಿಗೆ ಅವಕಾಶವಾಯಿತು. ಇತ್ತೀಚೆಗೆ ದೆಹಲಿಯಲ್ಲಿ ಕೂಡ ದೆಹಲಿ ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿ, ಆ ಸಂಸ್ಥೆಗೆ ನಗರಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು ನಿರ್ವಹಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಈ ರೀತಿ ಡೆಲ್ಲಿಯ ಬಗ್ಗೆ ಹೇಳಿ, ಇದನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ದೇವರಾಜ್‌ಅರಸ್ ರವರು ಕಂಡಂಥ ಕನಸು ಇದುವರೆಗೂ ನನಸಾಗಿಲ್ಲ. ಏನೂ ಆಗಿಲ್ಲ ಎಂದು ಹೇಳಿದರೆ ಮಾನ್ಯ ಸಾಗರ್ ರವರು ಕೋಪ ಮಾಡಿಕೊಳ್ಳಬಾರದು. ಸಂಸ್ಥೆಗಳು ಎಂದು ಮಾಡಿದಮೇಲೆ ಕೆಲಸ ಆಗುತ್ತದೆ. ಬೆಂಗಳೂರು ಜನತೆಗೆ ಪರಿಣಾಮಕಾರಿಯಾಗಿ ಬಿ.ಡಿ.ಎ. ಯಿಂದ ಸೌಕರ್ಯವಾಗಿದೆ ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಆಗಿದೆಯೋ ಎಂದು ಪ್ರಶ್ನೆ ಹಾಕಿಕೊಂಡರೆ ಉತ್ತರ ನಕಾರವಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ವೈಟ್ ಪೇಪರ್ ಬಗ್ಗೆ, ಕೆ.ಕೆ. ಮೂರ್ತಿಯವರ ಕಾಲದಲ್ಲಿ ಏನಾಯಿತು ಎನ್ನುವ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ವೈಯಕ್ತಿಕವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಅಲ್ಲಿ ಸಣ್ಣ ಸಣ್ಣ ವಿಷಯಗಳು ಸಹ ಇತ್ಯರ್ಥವಾಗದೇ ಇರುವುದು ನನಗೆ ಅನುಭವ ಆಗಿದೆ. ಅದರಲ್ಲೂ ಬಡವರಿಗೆ ಸಂಬಂಧಪಟ್ಟ ವಿಷಯಗಳು ಆದರೆ ತೀರಾ ಕಷ್ಟವಾಗುತ್ತದೆ. ನಾನು ಹಿಂದೆ ಹತ್ತು ತಿಂಗಳವರೆಗೆ ಒಂದು ಸಾರಿ ಅಲ್ಲಿ ಮೆಂಬರ್ ಆಗಿದ್ದೆ, ಇನ್ನೊಂದು ಸಾರಿ ಒಂದು ವರ್ಷದವರೆಗೆ ಮೆಂಬರ್ ಆಗಿದ್ದೆ. ಆ ಸಂದರ್ಭದಲ್ಲಿ ನಾನು ನೋಡಿದ್ದು ಏನೆಂದರೆ, ಪ್ರಭಾವಶಾಲಿ ವ್ಯಕ್ತಿಗಳು, ಹಣವಂತರು, ಬಿ.ಡಿ.ಎ. ನಲ್ಲಿ ಸುಸೂತ್ರವಾಗಿ ಕೆಲಸ ಮಾಡಿಸಿಕೊಂಡು ಹೋಗುತ್ತಿದ್ದರು ಈಗಲೂ ಸಹ ಅದೇ ಪರಿಸ್ಥಿತಿ ಇದೆ. ಆದೇ ಒಬ್ಬ ಬಡವ ಒಂದು ನಿವೇಶನದ ಬಗ್ಗೆ ಬಿ.ಡಿ.ಎ. ನಲ್ಲಿ ರೀ ಕನ್ವೆ, ಅಥವಾ ರೀ ಅಲಾಟ್‌ಮೆಂಟ್ ಮಾಡಿಕೊಡಿ ಎಂದು ಕೇಳಿಕೊಂಡರೆ, ಅದು ವರ್ಷವಾದರೂ ನೆನೆಗುದಿಯಲ್ಲೇ ಬಿದ್ದಿರುತ್ತದೆ. ರೆವಿನ್ಯೂ ನಿವೇಶದಾರರ ಪ್ರಶ್ನೆ ಬಹಳ ಮುಖ್ಯವಾದಂಥ ಪ್ರಶ್ನೆ. ನನ್ನ ಹತ್ತಿರ ಅನೇಕ ಇಂಥ ಕೇಸುಗಳು ಇವೆ. ಇವೊತ್ತು ಬೆಂಗಳೂರು ಸುತ್ತಮುತ್ತ ಹರಡಿಕೊಂಡಿದ್ದಾರೆ. ಯಾರೋ ಹೆಸರಿನಿಂದ ಕೊಂಡುಕೊಳ್ಳುತ್ತಾರೆ, ಲೇಔಟ್ ಎಂದು ಮಾಡುತ್ತಾರೆ, ಅದಕ್ಕೆ ಹಣ ತೆಗೆದುಕೊಂಡು ಬಿಡುತ್ತಾರೆ, ಅದಕ್ಕೆ ಬಿ.ಡಿ.ಎ. ಸಾಂಕ್ಷನ್ ಇರುವುದಿಲ್ಲ, ಪರ್‌ಮಿಷನ್ ಇರುವುದಿಲ್ಲ. ಇದು ಕಡೆಗೆ ಏನಾಗುತ್ತದೆ, ಕೊಟ್ಟವರು ಕೆಟ್ಟರು ಎಂದು ಆಗುತ್ತದೆ. ಇದರಿಂದ ಮಧ್ಯಸ್ಥಗಾರರು ದುಡ್ಡು ಮಾಡಿಕೊಳ್ಳುತ್ತಾರೆ, ಲಕ್ಷಾಂತರ ರೂಪಾಯಿಗಳ ವಹಿವಾಟು ಇದರಲ್ಲಿ ನಡೆದಿದೆ. ಈ ತರಹ ದುಡ್ಡು ಕೊಟ್ಟು ತೆಗೆದುಕೊಳ್ಳುವವರು ಯಾರು ಎಂದರೆ, ಸಾಮಾನ್ಯವಾಗಿ ಬಡವರು, ಮಧ್ಯಮವರ್ಗದವರು, ಸರ್ಕಾರಿ ನೌಕರರು, ಐದಾರು ಸಾವಿರ ರೂಪಾಯಿಗಳನ್ನು ಕೊಟ್ಟು ಒಂದು ನಿವೇಶನ ಕೊಂಡು ಕೊಂಡಿರುತ್ತಾರೆ. ಏಕೆಂದರೆ, ಬಿ.ಡಿ.ಎ. ವ್ಯವಸ್ಥೆ ಯಾವ ರೀತಿ ಇದೆ ಎಂದರೆ ಅವರು ಸೈಟುಗಳನ್ನು ಮಾಡಿ ಹಂಚುವಂಥ ಪರಿಸ್ಥಿತಿ ಇಲ್ಲ. ಅವರು ಒಂದು ಸಾವಿರ ಸೈಟುಗಳಿಗೆ ಲೇಔಟ್ ಮಾಡಿ ಹಂಚುವ ಹೊತ್ತಿಗೆ ಮೂರುನಾಲ್ಕು ವರ್ಷಗಳಾಗುತ್ತವೆ. ಸೈಟುಗಳು ಬಹಳ ಜನರಿಗೆ ಬೇಕು ಆದರೆ ಕಾರ್ಯಕ್ರಮ ಮಾತ್ರ ಬಹಳ ಕಡಿಮೆ. ಈ ತರಹ ಇರುವುದರಿಂದ. ಜನರು ಅವ್ಯವಹಾರ ನಡೆಸತಕ್ಕವರು ಯಾರು ಇದ್ದಾರೋ ಅವರಿಗೆ ಮಾರು ಹೋಗಿ ಈ ರೆವಿನ್ಯೂ ನಿವೇಶನದಾರರ ಪ್ರಶ್ನೆ ಬಹಳ ಕಷ್ಟವಾಗಿದೆ. ಹಿಂದೆ ಇಂತಹ ಪ್ರಶ್ನೆಯ ಬಗ್ಗೆ ಒಂದು ರೀತಿಯಲ್ಲಿ ಇತ್ಯರ್ಥ ಮಾಡಲಿಕ್ಕೆ ಪ್ರಯತ್ನ ನಡೆಯುತ್ತಿತ್ತು. ಈಗ ಆ ಪ್ರಶ್ನೆ ಇತ್ಯರ್ಥ ಆಗುವ ಹಾಗೆ ಇಲ್ಲ. ಬಿ.ಡಿ.ಎ. ಗೆ ಹೋಗಿ ಕೇಳಿದರೆ ಎಲ್ಲವನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತಾರೆ. ಈ ಪರಿಸ್ಥಿತಿ ಬಂದಿರುವುದರಿಂದ, ಸಹಸ್ರಾರು ಜನರಿಗೆ ತೊಂದರೆಯಾಗಿ ಜನ ಕಣ್ಣೀರು ಇಡುತ್ತಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಅಭಿಪ್ರಾಯವನ್ನು ವ್ಯಕ್ತಪಡಿಸುವವರೂ ಇದ್ದಾರೆ. ಈ ತರಹ ಬಿ.ಡಿ.ಎ. ನಲ್ಲಿ ಆಗಿದೆ. ಇನ್ನು ಸೊಸೈಟಿಗಳ ಬಗ್ಗೆ ಹೇಳಬೇಕೆಂದರೆ, ಸೊಸೈಟಿಗಳನ್ನು ಯಾರೂ ಬೇಡ ಎಂದು ಹೇಳುವುದಿಲ್ಲ. ಆದರೆ ಅವ್ಯವಹಾರಗಳು ಬೇಕಾದಷ್ಟು ನಡೆದಿದೆ. ಹೌಸಿಂಗ್ ಬೋರ್ಡ್ ಸೊಸೈಟಿಗಳಲ್ಲಿ ಕೆಲವು ಒಳ್ಳೆಯ ಸೊಸೈಟಿಗಳು ಇದ್ದರೂ ಕೆಲವು ಕೆಟ್ಟ ಸೊಸೈಟಿಗಳು ಇವೆ. ಈಗ ಗೃಹನಿರ್ಮಾಣ ಸೊಸೈಟಿಗಳಲ್ಲಿ ಬಿ.ಇ.ಎಂ.ಎಲ್ ಸೊಸೈಟಿ ಇದೆ, ಈಶ್ವರಭಟ್ಟರ ಸೊಸೈಟಿ ಇದೆ, ಮಲ್ಲೇಶ್ವರಂ ಟೈಲರಿಂಗ್ ಸೊಸೈಟಿ ಇದೆ, ವಿವೇಕಾನಂದ ಸೊಸೈಟಿ ಇದೆ, ವಯ್ಯಾಲಿ ಕಾವಲ್ ಸೊಸೈಟಿ ಇದೆ, ಬಿ.ಡಿ.ಎ.

ಮತ್ತು ಸರ್ಕಾರದವರು ವಿವೇಚನೆಯಿಂದ ಯಾವ ಸೊಸೈಟಿಗಳು ಸರಿಯಾಗಿ ನಡೆಯುತ್ತವೆ ಎನ್ನುವುದನ್ನು ನೋಡಿ ಅಂತಹವರಿಗೆ ಅವಕಾಶ ಕೊಟ್ಟು, ಯಾವ ಸೊಸೈಟಿಗಳು ಸರಿಯಾಗಿ ನಡೆಯುತ್ತಿಲ್ಲ ಅವುಗಳನ್ನು ಬಲಿ ಹಾಕುವ ಕೆಲಸವನ್ನು ಮಾಡಬೇಕಾಗಿತ್ತು. ಜನತಾ ಪಕ್ಷ ೧೯೮೩ರಲ್ಲಿ ಅಧಿಕಾರಕ್ಕೆ ಬಂದಮೇಲೆ ಮುತುವರ್ಜಿ ವಹಿಸಿ ನಮ್ಮನ್ನು ಕರೆಯಿಸಿದರು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡಾಗ, ಹೆಚ್.ಎ.ಎಲ್. ಎನ್.ಜಿ.ಇ.ಎಫ್, ಕಾರ್ಮಿಕರ ಸೊಸೈಟಿ ವಿಚಾರಗಳಲ್ಲಿ ಕ್ಲಿಯರ್ ಮಾಡಿ ಮಾಡಿದರು ಅಷ್ಟು ಮಾತ್ರ ಅಲ್ಲ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದಲೂ ಒಪ್ಪಿಗೆಯನ್ನು ಕ್ಲೀಯರ್ ಮಾಡಿದರು. ಅದು ಅಲ್ಲದೆ, ಗ್ರೀನ್‌ಬೆಲ್ಟ್ ಎಂದು ಮಾಡಿ ಅಲ್ಲಿಂದ ಮುಂದಕ್ಕೆ ಯಾರೂ ಕಟ್ಟುವ ಹಾಗೆ ಇಲ್ಲ ಎಂದು ತೀರ್ಮಾನ ತೆಗೆದುಕೊಂಡರು. ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸಿದೆ. ಅದು ನಾನು ಆದನಂತರ ಯಾವ ಯಾವ ಪವಾಡಗಳು ನಡೆದವೋ ನನಗೆ ಗೊತ್ತಿಲ್ಲ. ಕೆಲವೊಂದು ಸೊಸೈಟಿಗಳು ತೀರಾ ಕೆಟ್ಟು ಭ್ರಷ್ಟಾಚಾರದಿಂದ ತುಂಬಿ ತುಳುಕಾಡುತ್ತಿವೆ. ಅಂತಹ ಸೊಸೈಟಿಗಳಿಗೆ ನೂರಾರು ಎಕರೆ ಜಮೀನನ್ನು ಇವರು ಸಾಂಕ್ಷನ್ ಮಾಡಿದ್ದಾರೆ. ಈ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡಿದೆ. ಹಿಂದೆ ನಾನು ಬಿ.ಡಿ.ಎ. ನಲ್ಲಿ ಇದ್ದಾಗ ಈ ತರಹ ಆಗುವುದು ನಡೆಯಲಿಲ್ಲ. ಒಂದು ಸಾರಿ ಚರ್ಚೆ ನಡೆದಾಗ ಈ ತರಹ ಕೊಡಕೂಡದು ಎಂದು ನಾನು ಎದುರಿಸಿದೆ. ಯಾರು ನ್ಯಾಯವಾಗಿ ನಡೆದುಕೊಳ್ಳುತ್ತಾರೆ, ಅಂತಹವರಿಗೆ ಲೈಸನ್ಸ್ ಕೊಡಿ, ಯಾರು ಅವ್ಯವಹಾರ ಮಾಡುತ್ತಾರೆ, ಅವರು ಎಷ್ಟೇ ದೊಡ್ಡವರಾಗಲಿ, ಅವರ ಹತ್ತಿರ ಹಣ ಇದೆ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದೆ ಎಂದರೆ ಅದಕ್ಕೆ ಅವಕಾಶ ಕೊಡಕೂಡದು ಎಂದು ಗಟ್ಟಿಯಾಗಿ ಹೇಳಬೇಕಾಗಿ ಬಂತು, ಅವನ್ನು ಹೇಳಿದ ಮೇಲೆ ವ್ಯವಹಾರವೆಲ್ಲಾ ನಿಂತಿತ್ತು, ಈಗ ಎಲ್ಲರಿಗೂ ಮತ್ತೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದರಿಂದ ಕೆಲವರು ಬೇಕಾದಷ್ಟು ಹಣ ಮಾಡಿಕೊಳ್ಳಲಿಕ್ಕೆ ಅವಕಾಶವಾಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಇದು ಹಿಂದಿನಿಂದ ನಡೆದುಕೊಂಡು ಬಂದಿರುವಂಥಾದ್ದು, ಏನಾದರೂ ಮಾಡಿ ನಿಲ್ಲಿಸಬೇಕೆಂದು ತೀರ್ಮಾನ ಕೈಗೊಂಡಿದ್ದೆವು. ಜನರು ಸಹಕಾರ ಸಂಘಗಳ ಮುಖಾಂತರ ಹಣ ಕೊಟ್ಟು ಪ್ರೈವೇಟ್ ಜಮೀನ್ದಾರ್‌ರಿಂದ ಜಮೀನನ್ನು ಕೊಂಡು ಕೊಂಡು ಬಿಡುತ್ತಿದ್ದರು. ನಮ್ಮ ಸರ್ಕಾರ ಬಂದ ಮೇಲೆ ಯಾವುದೇ ಹೊಸ ಸೊಸೈಟಿಗಳಿಗೆ ರಿಜಿಸ್ಟರ್ ಮಾಡದೆ ಒಂದೆರಡು ಆಗಿರಬಹುದು, ಮಿಕ್ಕ ಸೊಸೈಟಿಗಳಿಗೆ ೩೦–೬–೧೯೮೪ರಲ್ಲಿ ಒಂದು ಡೇಟ್ ಮಾಡಿ ಆವೊತ್ತಿಗೆ ಯಾರು ಮೆಂಬರ್ಸ್ ಆಗಿದ್ದರು ಅವರಿಗೆ ಮನೆ ಇಲ್ಲದಿದ್ದರೆ ಅಫಿಡವಿಟ್ ತೆಗೆದುಕೊಂಡು ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಶಿಫಾರಸ್ಸು ಮಾಡಿದ ವರ್ಕರ್ಸ್ ಸೊಸೈಟಿಗೂ ಕೊಟ್ಟಿದ್ದೇವೆ.

ಶ್ರೀ ಆರ್.ಎಲ್ ಜಾಲಪ್ಪ.—ಥ್ರೀ ಮ್ಯಾನ್ ಕಮಿಟಿ ಮಾಡಿ, ಒಳ್ಳೆಯ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಅವರು ಪ್ರತಿಯೊಬ್ಬರ ಲೆಕ್ಕವನ್ನು ಪರಿಶೀಲನೆ ಮಾಡಿ ಮಾಡಬೇಕೆಂದು ಮಾಡಿದ್ದೇವೆ. ಜೆನಿಯುನ್ ಮೆಂಬರ್ಸ್ ಯಾರಿದ್ದಾರೆ ನಾನ್ ಜೆನಿಯುನ್ ಮೆಂಬರ್ಸ್ ಯಾರಿದ್ದಾರೆ ಪ್ರತಿಯೊಬ್ಬ ಸದಸ್ಯರಿಂದಲೂ ಅಫಿಡವಿಟ್ ಬಂದ ಮೇಲೆ ಯಾರು ಯಾರಿಗೆ ಎಷ್ಟು ಎಕರೆ ಬರುತ್ತದೆ ಅಷ್ಟು ಜಮೀನು ಮಾತ್ರ ಕೊಟ್ಟು ಮುಂದೆ ಅದರ ವ್ಯವಹಾರ ನಿಲ್ಲಿಸಬೇಕಾಗುತ್ತದೆ. ಮುಂದೆ ಮಾಡತಕ್ಕ ಸೊಸೈಟಿಗಳಿಗೆ ೨೦ ಎಕರೆ ಮೇಲೆ ಜಮೀನು ಕೊಡುವುದಿಲ್ಲ ೨೦ ಎಕರೆ ಜಮೀನನ್ನು ಕೂಡ ಬಿ.ಡಿ.ಎ. ನಿಂದಲೇ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿದೆ. ಬಹಳ ಜನ ಕಾರ್ಮಿಕರು ಪ್ರೊಫೆಸರುಗಳು ಸೊಸೈಟಿಗಳಲ್ಲಿ ಹಣ ತೊಡಗಿಸಿದ್ದಾರೆ ಖಾಸಗೀಯವರ ಜಮೀನನ್ನು ಹಣಕೊಟ್ಟು ಕೊಂಡುಕೊಂಡಿದ್ದಾರೆ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದರೆ ಹಣ ಕೂಡ ವಾಪಸ್ಸು ಬರುವುದಿಲ್ಲ ಎಂಬುದನ್ನು ತಿಳಿದುಕೊಂಡು ಈ ಸೊಸೈಟಿಗಳನ್ನು ರೆಗ್ಯೂಲರೈಸ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಜಾಲಪ್ಪನವರು ಹೇಳಿದ್ದರಲ್ಲಿ ನಿಜಾಂಶ ಇದೆ. ಕೆಲವೊಂದು ಸೊಸೈಟಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ವರ್ಕರ್ಸ್ ಸೊಸೈಟಿಗಳಿಗೆ ಫರ್ದರ್ ಗ್ರಾಂಟ್ ಕೊಡಬೇಕೆಂತಲೂ ಕೂಡ ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಆರ್.ಎಂ.ಎಸ್ ಕೆಲಸಗಾರರ ಸೊಸೈಟಿ ಇದೆ. ಈ ಸೊಸೈಟಿಯವರಂತೂ ಇಲಾಖೆಯೊಂದಿಗೆ ಓಡಾಡಿ ಬಹಳ ಬೇಸತ್ತು ಹೋಗಿದ್ದಾರೆ. ಶ್ರೀಮನ್ಯಾನ್ ಕಮಿಟಿಯವರು ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಮಲ್ಲೇಶ್ವರಂ ಟೈಲರಿಂಗ್ ಸೊಸೈಟಿಯವರಿಗೆ ಒಪ್ಪಿಗೆ ಕೊಟ್ಟಿದ್ದಾರೆ, ವೈಯ್ಯಾಳಿ ಕಾವಲ್ ಸೊಸೈಟಿಗೆ ಸುಮಾರು ೫೦೦–೬೦೦ ಎಕರೆ ಜಮೀನು ಕೊಟ್ಟಿದ್ದಾರೆ ಇದರಲ್ಲಿ ಯಾರೋ ಯಾರೋ ಇದ್ದಾರೆ. ಆದರೆ, ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಕಷ್ಟಪಟ್ಟು ಜಮೀನು ಕೊಂಡವರಿಗೆ ತೊಂದರೆಯಾಗುತ್ತದೆ. ಇಂಥ ಸೊಸೈಟಿಗಳ ಬಗ್ಗೆ ಏನು ಹತೋಟಿ ಇಟ್ಟುಕೊಳ್ಳುವುದಕ್ಕೆ ಆಗುತ್ತದೆ. ಈಶ್ವರ ಭಟ್ಟರ ಸೊಸೈಟಿ ಇದೆ. ಅವರು ಜನಗಳ ರಕ್ತ ಹೀರಿ ಹಿಪ್ಪೆ ಮಾಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಸ್ವಾಮಿ, ಭಟ್ಟರ ಸೊಸೈಟಿಗೆ ನಮ್ಮ ಕಾಲದಲ್ಲಿ ಒಂದು ಇಂಚು ಭೂಮಿ ಕೊಟ್ಟಿಲ್ಲ. ಅವರ ಹತ್ತಿರ ದುಡ್ಡು ಇದೆ. ಪತ್ರಿಕೆಗಳಲ್ಲಿ ಹಾಗೆ ಹೀಗೆ ಎಂದು ಹಾಕಿಸಿಕೊಳ್ಳುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಸೊಸೈಟಿಗಳಲ್ಲಿ ನಡೆಯುವ ಅವ್ಯವಹಾರವನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಈಗ ತಾವು ಹೇಳಿದಂತೆ ೨೦ ಎಕರೆ ಜಮೀನಿನ ಮೇಲೆ ಕೊಡುವುದಿಲ್ಲ. ಅದನ್ನು ಕೂಡ ಬಿ.ಡಿ.ಎ.ನಿಂದ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ. ಇದು ಶ್ಲಾಘನೀಯವಾದುದು, ಹೊಸದಾಗಿ ಸೊಸೈಟಿಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ, ಬಿ.ಡಿ.ಎ. ನಿಂದ ನೋಅಬ್ಜೆಕ್ಷನ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೀರಿ. ಬಿ.ಡಿ.ಎ. ನವರ ಹತ್ತಿರ ಹೋದರೆ ಅವರು ನೂರೆಂಟು ಕೊಕ್ಕೆಗಳನ್ನು ಹಾಕಿ ಮೊದಲು ರಿಜಿಸ್ಟರ್ ಮಾಡಿಸಿಕೊಂಡು ಬನ್ನಿ ಎಂದು ಹೇಳುತ್ತಾರೆ. ಸೊಸೈಟಿ ರಿಜಿಸ್ಟರ್ ಮಾಡಬೇಕಾದರೆ. ಎನ್.ಒ.ಸಿ ಇಲ್ಲದೆ, ಮಾಡುವುದಿಲ್ಲ ಇದರಿಂದ ಯಾವ ಕೆಲಸವೂ ಕೂಡ ಕಾರ್ಯಗತವಾಗುವಂತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರ ಆಜ್ಞೆಯನ್ನು ಬಿ.ಡಿ.ಎ ನವರು ಒಬೇ ಮಾಡಬೇಕು. ಆ ರೀತಿ ಮಾಡದೇ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಒಮ್ಮೆ ಸರ್ಕ್ಯುಲರ್ ನೋಡಿ.

SRI. R.L. JALAPPA.—It is the duty of the BDA to obey the Circular of the Government. They must give us NOC. They must say yes or no. If They do not say yes or no They are not discharging their duties. we will take proper action if it is so. we have clearly said that if you want to register, you must obtain NOC from BDA. ಸರ್ಕಾರೀ ಆಜ್ಞೆ ಕೊಟ್ಟಿದ್ದೇವೆ. ಸರ್ಕಾರಿ ಆಜ್ಞೆಯನ್ನು ಪ್ರೊಡ್ಯೂಸ್ ಮಾಡಬೇಕು. ಬಿ.ಡಿ.ಎ.ನವರು ಏನಿದ್ದರೂ ಉಂಟು ಅಥವಾ ಇಲ್ಲ ಎಂದು ಹೇಳಬೇಕು. ಹಾಗೆ ಅವರು ನಡೆದುಕೊಳ್ಳದಿದ್ದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಬಿ.ಡಿ.ಎ.ನವರು ಹೇಳುವ ಪ್ರಕಾರ ಸೊಸೈಟಿಯನ್ನು ರಿಜಿಸ್ಟರ್ ಮಾಡಿಸುವುದಕ್ಕಾಗುವುದಿಲ್ಲ Please see the nuances, It is not so simple as you say. If you go to BDA, he will say how can you give you a certificate, when you are not at all a society. My suggestion is, there should not be any objection to register Let him prove that he has got land etc and then you register and then issue NOC and the problem will be solved and BDA will not object. ತಾವು ಸರ್ಕ್ಯುಲರ್ ನೋಡಿದರೆ ತಮಗೆ ಅರ್ಥವಾಗುತ್ತದೆ. ಬಿ.ಡಿ.ಎ. ಬಗ್ಗೆ ಎಷ್ಟು ಬೇಕಾದರೂ ಹೇಳಬಹುದು. ಸೈಟುಗಳ ಹಂಚಿಕೆ ವಿಚಾರದಲ್ಲಿ ಸ್ಟ್ರೇ ಸೈಟುಗಳ ಹಂಚಿಕೆ ವಿಚಾರದಲ್ಲಿ ಯಾವ ರೀತಿ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಒಂದು ಸಾರಿ ಸ್ಟ್ರೇ ಸೈಟುಗಳ

ಹಂಚಿಕೆಯನ್ನು ನಾನು ಮುಖ್ಯಮಂತ್ರಿಗಳೇ ತೀರ್ಮಾನ ಮಾಡುತ್ತಾರೆಂದು ಸುದ್ದಿ ಇತ್ತು. ಪುನಃ ಬಿ.ಡಿ.ಎ.ನವರೇ ಮಾಡುತ್ತಾರೆಂಬ ವರ್ತಮಾನ ಇದೆ. ಸ್ಪೇಸ್ ಸೈಟುಗಳ ವಿಷಯದಲ್ಲಂತೂ ಬಹಳ ಅವ್ಯವಹಾರ ನಡೆದಿದೆ. ಆಟಗಾರರಿಗೆ ಕೊಡುತ್ತೇವೆ, ಸಿನಿಮಾ ನಟರಿಗೆ ಕೊಡುತ್ತೇವೆ. ಆರ್ಟಿಸ್ಟ್‌ಗಳಿಗೆ ಕೊಡುತ್ತೇವೆಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿರುವವರಿಗೆ ಅನೇಕ ಜನರಿಗೆ ಇಂಥ ಸೈಟು ಸಿಕ್ಕಿಲ್ಲ. ಬೇರೆಯವರಿಗೆ ಸಿಕ್ಕಿದೆ ಇದು ಬಿ.ಡಿ.ಎ. ಅಲ್ಲ ಭ್ರಷ್ಟಾಚಾರ ಡೆವಲಪ್‌ಮೆಂಟ್ ಅಥಾರಿಟಿ ಎಂದು ಹೇಳಬೇಕಾಗಿದೆ. ಲಂಚವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರೂ ಅದು ತಮ್ಮಿಂದಲೂ ಸಾಧ್ಯವಾಗಿಲ್ಲ. ಅಲ್ಲಿ ಗಟ್ಟಿ ಹೆಗ್ಗಣಗಳು ಇವೆ. ಅವು ಸುಮ್ಮನೆ ಸಾಯುವುದಿಲ್ಲ. ಬಹುಶಃ ಬಾಂಬ್ ಹಾಕಿದರೆ ಸಾಯಬಹುದು. ಅಲ್ಲಿ ಫೈಲುಗಳೇ ಇರುವುದಿಲ್ಲ. ಕೆಲವು ದಿವಸಗಳ ಹಿಂದೆ ನಾನು ಒಂದೇ ವಿಚಾರಕ್ಕೆ ಹೋದಾಗ ಆ ಫೈಲೇ ಕಾಣುವುದಿಲ್ಲ ಎಂದು ಹೇಳಿದರು. ಅದನ್ನು ಸುಧಾರಿಸುವುದಕ್ಕೆ ಬಹಳ ಕಷ್ಟಪಡಬೇಕು. ಈಗ ಒಳ್ಳೆಯ ಟೀಂ ಬಂದಿದೆ. ಈಗ ರೆಡ್ಡಿಯವರು ಅಧ್ಯಕ್ಷರಾಗಿದ್ದಾರೆ. ವಿಜಯರವರು ಕಮೀಷನರ್ ಆಗಿದ್ದಾರೆ. ಅಶ್ವತ್ಥನಾರಾಯಣನವರು ಚೀಫ್ ಇಂಜಿನಿಯರ್ ಆಗಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಇದು ಒಳ್ಳೆಯದು.

೪-೦೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಆದರೆ ನನಗನ್ನಿಸುತ್ತದೆ, ಈ ಅಮೆಂಡ್‌ಮೆಂಟ್ ತಂದರೆ ಎಷ್ಟು ಒಳ್ಳೆಯವರಾದರೂ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ಬದಲು ಅಧಿಕಾರವನ್ನು ಹೆಚ್ಚು ಹೆಚ್ಚು ಒಬ್ಬರ ಕೈಗೇ ಕೊಡುವ ಪರಿಸ್ಥಿತಿ ಬರುತ್ತದೆ. ಈ ಬಿ.ಡಿ.ಎ. ಸ್ಥಾಪಿಸುವಾಗ ಮೂಲ ಅಭಿಪ್ರಾಯ ಏನಿತ್ತು ಅದರಲ್ಲಿ ಅಧಿಕಾರಿಗಳೂ ಇರಬೇಕು, ಸಾರ್ವಜನಿಕರ ಪ್ರತಿನಿಧಿಗಳು ಇರಬೇಕು ಎಂಬುದಾಗಿತ್ತು. ಇವರಿಬ್ಬರೂ ಸೇರಿ ಯಾವ ರೀತಿ ಸೈಟು ಮಾಡಬೇಕು, ಯಾವ ರೀತಿ ಬೆಂಗಳೂರನ್ನು ಡೆವೆಲಪ್‌ಮೆಂಟ್ ಮಾಡಬೇಕು ಎಂದು ತೀರ್ಮಾನ ಮಾಡಬೇಕು. ಅದನ್ನು ಜಾರಿಗೆ ಕೊಡುವುದು ಸರ್ಕಾರದ ಕರ್ತವ್ಯ ಎಂಬುದು ಮೂಡಿ ಬಂದ ಆಕ್ಟ್‌ನಲ್ಲಿತ್ತು. ಇದು ಎಷ್ಟು ಸಲ ಅಮೆಂಡಾಗಿದೆ ಎಂದರೆ ಪೀಸ್ ಪೀಸಾಗಿ ಇದಕ್ಕೆ ತಿದ್ದುಪಡಿ ತರುತ್ತಿದ್ದಾರೆ. ಸಮಗ್ರವಾಗಿ ತಂದಿಲ್ಲ. ೧೯೭೬, ೭೭, ೮೧, ೧೯೮೨ ಹಾಗೂ ೧೯೮೭ರಲ್ಲಿ ತಂದಿದ್ದಾರೆ. ಸಣ್ಣ ಸಣ್ಣ ವಿಷಯಕ್ಕೂ ತರುತ್ತಿದ್ದಾರೆ. ನನಗನ್ನಿಸುತ್ತದೆ ಎಂಟೈರ್ ಬಿಡಿಎ ಆಕ್ಟ್ requires consideration in many aspects. ಅದನ್ನು ಮಾಡುವ ಅಧಿಕಾರ ಇಟ್ಟುಕೊಂಡು ಅದರ ಆಧಾರದ ಮೇಲೆ ಇವೊತ್ತಿನ ದಿವಸ ಸರ್ಕಾರದವರು ಮತ್ತು ಮುಖ್ಯಮಂತ್ರಿಗಳು ಯೋಚಿಸಿದರೆ ಚೆನ್ನಾಗಿರುತ್ತದೆ. ಅವನ್ನು ಬಿಟ್ಟು ಒಬ್ಬ ಅಧಿಕಾರಿ ಕೈಗೆ ಅಧಿಕಾರ ಕೊಡುವ ಪರಿಸ್ಥಿತಿ ಬಂದಿದೆ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅಮೆಂಡ್‌ಮೆಂಟ್ ಸೆಕ್ಷನ್ ೧೩ನ್ನು ತೆಗೆದುಕೊಳ್ಳಿ :

"Provided that, if in the opinion of the Commissioner any resolution of the Authority contravenes any provision of this Act or any other law or of any rule, notification..." I think that is not correct.

"......or bye-law made or issued under this Act or any other law, or of any order passed by the Government or is prejudicial or detrimental to the interest of the Authority, refer the matter to the Government for orders and inform the Authority at its next meeting, of the action taken by him he shall, with fifteen days of the passing of the resolution refer the matter to the Government for order taken by him and until the orders of the Government on such reference are received, the Commissioner shall not be bound to give effect to the resolution."

Of course, this is a very clumsy worded clause. I do not want to speak about the English portion of it. ಇಲ್ಲಿ ನನ್ನ ಇಂಗ್ಲೀಷ್ ತಪ್ಪೋ ಅವರ ಇಂಗ್ಲೀಷ್ ಚೆನ್ನಾಗಿದೆಯೋ ಗೊತ್ತಿಲ್ಲ. ಆದರೆ ಎಲ್ಲಾ ಅಧಿಕಾರವನ್ನೂ ಒಬ್ಬರ ಕೈಗೇ ಇಲ್ಲಿ ಕೊಡ

ಲಾಗಿದೆ. ಅಥಾರಿಟಿ ಮಾಡಿದ ತೀರ್ಮಾನಗಳನ್ನು ಕಂಪ್ಲೀಟಾಗಿ ಜಾರಿಗೆ ತರಬೇಕಾಗಿಲ್ಲ. ನೇರವಾಗಿ ನೋಟಿಫಿಕೇಷನ್ ಇರಲಿ ಅಥವಾ ಏನೇ ಇರಲಿ ಕಮಿಷನರ್ ಅಭಿಪ್ರಾಯದಲ್ಲಿ ಆಕ್ಟ್‌ಗೆ ವಿರುದ್ಧವಾಗಿದೆ ರೂಲ್ಸಿಗೆ ವಿರುದ್ಧವಾಗಿದೆ ಅಥಾರಿಟಿಯ ಇಂಟರೆಸ್ಟ್‌ಗೆ ಧಕ್ಕೆ ಬರುವ ರೀತಿಯಲ್ಲಿದೆ ಅಥವಾ ಸರ್ಕಾರ ಪಾಸು ಮಾಡಿದ ಬೇರೆ ಆರ್ಡರ್ಸ್‌ಗೆ ವಿರುದ್ಧವಾಗಿದೆ ಎಂದು ಆದರೆ, ಕಮಿಷನರ್ ಅದನ್ನು ಇಂಪ್ಲಿಮೆಂಟ್ ಮಾಡಬೇಕಾಗಿಲ್ಲ. ಸರ್ಕಾರದ ನಿಯಮವನ್ನೂ ಮತ್ತೆ ಜಾರಿಗೆ ತರಬೇಕಾಗಿಲ್ಲ. ಇದು ಸೀರಿಯಸ್ಸಾದದ್ದು. ೧೯೭೬ರಲ್ಲಿ ಆಕ್ಟ್ ಮಾಡಿದಾಗ ಇದರ ಬಗ್ಗೆ ಮಾತನಾಡಿದ ಅನೇಕ ವ್ಯಕ್ತಿಗಳೆಂದರೆ ಟಿ.ಆರ್. ಶಾಮಣ್ಣನವರು, ನಾವೆಲ್ಲಾ ದೀರ್ಘವಾಗಿ ಚರ್ಚೆ ಮಾಡಿದೆವು. ಆಗ ಒಂದು ಪ್ರಶ್ನೆ ಬಂತು, ಬೋರ್ಡಿನಲ್ಲಿ ಎಷ್ಟೆಷ್ಟು ಜನ ಇರಬೇಕು ಎಂದು. ನಾವು ಹೆಚ್ಚು ಜನ ಜನತೆಯ ಪ್ರತಿನಿಧಿಗಳು ಇರಲಿ ಎಂದೆವು, ಬೇರೆಯವರು ಅಧಿಕಾರಿಗಳೂ ಇರಲಿ ಎಂದರು. ಕೊನೆಗೆ ಅಧಿಕಾರಿಗಳೇ ಜಾಸ್ತಿ ಇರುವ ಹಾಗೆ ಆಯಿತು.

"The Authority shall consist of the following members' namely :—

a) the Chairman,

b) One person to be called the Finance Member possessing qualifications in accounts and audit ;

c) an Engineer who shall be an officer of the Karnataka Engineering Service not below the rank of a Chief Engineer;

d) a town planner who shall be a person with experience in town planning,

e) a person with experience in architecture,

f) an officer of the Karnataka Health & Family Planning Service not below the rank of a Joint Director

g) two persons who are members of the Karnataka State Legislature;

h) two others ;

i) a representative of the Bangalore Water Supply and Sewerage Board ;

j) a representative of the Karnataka Electricity Board ;

k) a representative of the Karnataka Road Transport Corporation;

l) two persons elected by the Councillors of the Bangalore City Corporation from among themselves in the prescribed manner".

೬ ಜನ ಹೊರಗಡೆಯವರು ೧೦ ಜನ ಅಧಿಕಾರಿಗಳು ಆಯಿತು. ಅಧಿಕಾರಿಗಳನ್ನೆಲ್ಲಾ ಏಕೆ ಹಾಕಿದರು ಎಂದರೆ ಅವರಲ್ಲಿ ಕೋಆರ್ಡಿನೇಷನ್ ಇರಬೇಕು, ಜನತೆಯ ಪ್ರತಿನಿಧಿಗಳಿಗೆ ಅವರು ಕಾರ್ಪೋರೇಟರ್ ಆಗಲಿ, ಎಂಎಲ್‌ಎ ಆಗಲಿ ಎಲ್ಲಾ ವಿಷಯಗಳು ತಿಳಿಯದೇ ಇರಬಹುದು ಅದನ್ನು ಹೇಳಿಕೊಡುವುದಕ್ಕೆ ತಿಳಿವಳಿಕೆ ಕೊಡುವುದಕ್ಕೆ ಬೇಕಾಗುತ್ತಾರೆ ಎಂಬ ಆಧಾರದ ಮೇಲೆ ಮಾಡಿದರು. ನನ್ನ ಅನುಭವದಲ್ಲಿ ಆಗ ಈ ರೀತಿ ಚರ್ಚೆ ನಡೆಯಿತು. ಚರ್ಚೆಯಾದ ನಂತರ ಕಮಿಟಿಯಲ್ಲಿ ಮತ್ತೆ ಪುನರ್ ಪರಿಶೀಲನೆಯಾಗಿ ಅನಂತರ ತೀರ್ಮಾನವಾಗಿದೆ. ಯಾರೋ ಒಂದು ಇನ್‌ಫ್ಲೂಯೆನ್ಸ್ ಮಾಡಿದರೆ ಇದೆಲ್ಲ ಆಗಿಬಿಡುವುದಿಲ್ಲ. ಅಷ್ಟೊಂದು ಜನ ಸೇರಿ ತೀರ್ಮಾನ ಮಾಡಿದ ಮೇಲೆ one person can strike it out. I do not agree. ಇದು ಹೇಗೆ ? ಅನೇಕ ಸಂದರ್ಭಗಳಲ್ಲಿ ನನಗೆ ತಿಳಿದಮಟ್ಟಿಗೆ ಬಿಡಿಎನಲ್ಲಿ we have differed from the Commissioner also. ಕೆಲವು ದೂರುಗಳೂ

ಬಂದಿವೆ. ಅವುಗಳ ಆಧಾರದ ಮೇಲೆ ಬದಲಾವಣೆ ಮಾಡಿ ಎಂದು ಹೇಳಿದ್ದೇವೆ. ಆದರೆ ಡಿಫರ್ ಆಗುವಾಗ ಕಾನೂನಿಗೆ ವಿರುದ್ಧವಾಗಿ ಆಕ್ಟ್‌ಗೆ ವಿರುದ್ಧವಾಗಿ ಎಲ್ಲಿಯೂ ಗುಂಪುಗಳಾಗಲಿಲ್ಲ. ಆ ರೀತಿ ಚರ್ಚೆ ಮಾಡಿದ್ದು ಜಾರಿಗೆ ಬರಬೇಕೇ ವಿನಹ ಕಾನೂನಿಗೆ ವಿರುದ್ಧ ರೀತಿಯಲ್ಲಿ ತೀರ್ಮಾನ ಮಾಡುವ ಹಕ್ಕನ್ನೆಲ್ಲಾ ಅಧಿಕಾರಿಗಳ ಕೈಗೇ ವಾಪಸ್ಸು ಮಾಡುವ ಪ್ರಸ್ತಾಪ ಬಂದರೆ ಪ್ರಜಾಪ್ರಭುತ್ವಕ್ಕೆ ಎಳ್ಳಷ್ಟೂ ಬೆಲೆ ಇಲ್ಲದಂತಾಯಿತು.

(Mr. Speaker, in the Chair)

ಶ್ರೀ ಬಿ. ಬಸವಲಿಂಗಪ್ಪ.—ಇದು ಪ್ರಮುಖವಾದ ವಿಷಯವಾದ್ದರಿಂದ ಮಾತನಾಡುತ್ತೇನೆ. ಅಥಾರಿಟಿಯ ಕಮಿಷನರ್ ಅವರು ತೀರ್ಮಾನಿಸಿದ ರೆಸಲ್ಯೂಷನನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಇದೆಯಲ್ಲ ಅದರ ಬಗ್ಗೆ ಹೇಳುತ್ತೇನೆ. ಒಬ್ಬ ಅಧಿಕಾರಿಗೆ ಜಾಸ್ತಿ ಪವರ್ ಇದೆ ಎನ್ನುವುದು ಅವರ್‍ವಾದ. ಒಂದೆ ಯಾರು ಛೇರ್ಮನ್ ಆಗಿದ್ದರೂ ಅವರು ಸೈಟುಗಳನ್ನು ಒಬ್ಬೊಬ್ಬರಿಗೆ ಹತ್ತು ಹತ್ತು ಕೊಟ್ಟು ಅದನ್ನು ರೆಸಲ್ಯೂಷನ್ ತರಹ ಇರಬೇಕೆಂದು ಎಲ್ಲರಿಗೂ ಮೊದಲೇ ಹೇಳಿ ಯುನಾನಿಮಸ್ಸಾಗಿ ತೀರ್ಮಾನಿಸುತ್ತಿದ್ದರು. ಇಂಥವರೆಲ್ಲ ಪ್ರಜಾಪ್ರಭುತ್ವದ ಪ್ರತಿನಿಧಿಗಳು. ಇವರು ಲಕ್ಷಾಂತರ ರೂಪಾಯಿಗಳನ್ನು ಒಟ್ಟಿಗೇ ಹೊಡೆದುಕೊಂಡವರು. ಇಂಥವರನ್ನೆಲ್ಲಾ ಹೇಗೆ ನಂಬುವುದು ? ಅದಕ್ಕೆ ಕಮಿಷನರ್‌ಗೆ ಹೆಚ್ಚಿನ ಪವರ್ ಬೇಕಾಗಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಕಮಿಷನರ್ ವಿರೋಧಿಸಬಾರದು ಎಂದು ಹೇಳಲಿಲ್ಲ. ವಿರೋಧ ಮಾಡದೇ ಹೋದರೆ ಕಮಿಷನರ್ ಕೂಡ ಇದರಲ್ಲಿ ಸೇರಿದ ಹಾಗಾಗುತ್ತದೆ. ಅಥಾರಿಟಿಯ ಪ್ರೊಸೀಡಿಂಗ್ಸ್ ತೆಗೆದುನೋಡಿ ಎಷ್ಟು ಸಲ ವಿರೋಧಿಸಿದ್ದಾರೆ ಎಂದು ಗೊತ್ತಾಗುತ್ತದೆ. ಕಮಿಷನರ್ ಮತ್ತು ನಾನ್‌ಅಫಿಶಿಯಲ್ ಛೇರ್ಮನ್ನು ಒಂದೇ ಆಗಿ ಬಿಟ್ಟರೆ ಏನು ತಾನೇ ಮಾಡುವುದು ? ಈಗ ಏನಾಗಿದೆ ಎಂದರೆ ಬಿಡಿಎ ಆಕ್ಟ್ ಪ್ರಕಾರ Chairman is reduced to a non-entity—absolute zero.

ಅಧ್ಯಕ್ಷರು.—ತಾವು ಬೇಗನೆ ಮುಗಿಸಿಬಿಡಿ. ಅರ್ಧ ಗಂಟೆ ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಮುಗಿಸುವುದಕ್ಕೆ ಆಗುವುದಿಲ್ಲ. ಇನ್ನೂ ಸ್ವಲ್ಪ ಸಮಯ ಬೇಕು.

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ ತಾವು ಹಿರಿಯ ಸದಸ್ಯರಿದ್ದೀರಿ, time is money.

SRI M.S. KRISHNAN.—Do you think I am speaking nonsense ?

ಅಧ್ಯಕ್ಷರು.—ತಾವು ಅರ್ಧ ಗಂಟೆ ಮಾತನಾಡಿದ್ದೀರಿ, ಎಲ್ಲರಿಗೂ ಅವಕಾಶ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಸಭೆಯನ್ನು ಮತ್ತೊಂದು ದಿವಸಕ್ಕೆ ಮುಂದುವರಿಸಿ. ಎಲ್ಲರೂ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ತಾವು ಆದಷ್ಟು ಬೇಗ ಮುಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುತ್ತಿದ್ದುದು ಏನೆಂದರೆ, ತಾವು ಮಧ್ಯೆ ಬಂದು ನಮ್ಮ ತಲೆಯಲ್ಲಿರುವುದೆಲ್ಲ ಹೋಯಿತು. ತಾವು ಇಂಟರ್‌ವಿನ್ ಮಾಡಿರುವುದರಿಂದ ನಮಗೆ ತೊಂದರೆಯಾಗುತ್ತದೆ. ೧೯೭೬ರ, ಒರಿಜನಲ್ ಆಕ್ಟ್‌ನಲ್ಲಿ ಡ್ಯೂಟೀಸ್ ಆಫ್ ದಿ ಛೇರ್ಮನ್ ಎಂದು ಇದೆ. ಅದನ್ನು ೧೯೮೧ನೇ ಇಸವಿಯಲ್ಲಿ ಛೇರ್ಮನ್ನರಿಗೆ ಇದ್ದಂತಹ ಪವರ್ಸ್ ಎಲ್ಲವನ್ನು ತೆಗೆದು ಹಾಕಿದ್ದಾರೆ. ಛೇರ್ಮನ್ನರಿಗೆ ಒಳ್ಳೆಯ ಪವರ್ಸ್ ಇತ್ತು. Duties of the Chairman ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. to attend every meeting ಆಕ್ಟ್‌ನಲ್ಲಿದೆ, ಅದೆಲ್ಲವನ್ನು ತೆಗೆದುಹಾಕಿ, You can read in Clause 12. Everything became the Commissioner. Amendment of Section 10, 23, 29, 32, 33, 42, 49 Principal Act for the word "Chairman" wherever it occurs the word "Commissioner" shall be substituted. ಛೇರ್ಮನ್ ಎಂದು ಎಲ್ಲೆಲ್ಲಿ ಇತ್ತು ಅದನ್ನು ತೆಗೆದು ಕಮಿಷನರ್ ಎಂದು ಹಾಕಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಮಾಡಿದ್ದುದು ನಾನೇ.

ಶ್ರೀ ಎಂ. ಎಸ್. ಕೃಷ್ಣನ್.—ಇವರೇ ಮಾಡಿದ್ದು, ಹಾಗಾದರೆ ಇವರನ್ನು ತರಾಟೆಗೆ ತೆಗೆದುಕೊಳ್ಳಬೇಕು. ಎಲ್ಲಾ ಪವರ್ಸನ್ನು ಕಮಿಷನರ್‌ಗೆ ಕೊಟ್ಟರೆ, ಛೇರ್ಮನ್ ಏತಕ್ಕೆ ಇರಬೇಕು ?

ಭೂಷಣಕ್ಕೆ ಇರಬೇಕೆ ? What is the power of the Chairman? Now he is given the status of a Minister of State. State Ministers have gone away excepting one or two. ಸ್ಟೇಟ್ ಮಿನಿಸ್ಟರ್‌ಗೆ ಏನೇನು ಅನುಕೂಲತೆಗಳು ಇವೆ ಇವರಿಗೆ ಸ್ಟೇಟ್ ಮಿನಿಸ್ಟರ್ ಸ್ಟೇಟಸ್ ಎಂದು ಒರಿಜಿನಲ್ ಆಕ್ಟ್‌ನಲ್ಲಿದೆ What is the use in having the Chairman who has no powers. Everything is confined in one person *i.e.*,. the Commissioner. I am not saying that the Commissioner should not be given any powers at all, but in a democracy where non-officials are also there, there is no point in giving any such powers to the Commissioner. That is my contention. Therefore, it is totally a wrong provision. I don't say there should not be a Commissioner. ಕಮಿಷನರ್ ಇರಬೇಕು. ಅಧ್ಯಕ್ಷರು ಇರಬೇಕು, ಇದರಲ್ಲಿ ಒಳ್ಳೆಯವರು ಇದ್ದಾರೆ ಅದು ನನ್ನ ಅನುಭವದಲ್ಲಿದೆ. ಕೆಲವರು ಕೆಟ್ಟವರು ಇರುತ್ತಾರೆ. ಎಲ್ಲರಿಗೂ ಇದು ಸರಿ ಅನಿಸುತ್ತದೆಂದು ಹೇಳುವುದಿಲ್ಲ. ಇಲ್ಲಿ ಪ್ರಶ್ನೆ ಇರುವುದು The Commissioner shall not be bound to give effect to the resolution ಎಂದು ಹೇಳಿದ್ದಾರೆ. ಎಂದರೆ ಏನಾಗುತ್ತದೆ, ಸರ್ಕಾರಕ್ಕೆ ಕಳುಹಿಸಬೇಕು ಸರ್ಕಾರ ತೀರ್ಮಾನ ಮಾಡುವ ತನಕ It need not be given effect; no resolution shall be implemented. ಈ ಸರ್ಕಾರದಲ್ಲಿ ಯಾವಾಗ ತೀರ್ಮಾನ ಮಾಡುತ್ತಾರೆ ? ಅರ್ಜೆಂಟ್ ಎಂದರೆ ಆರು ತಿಂಗಳು, ಆಮೇಲೆ ಆರು ವರ್ಷ ಆಗುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿಯೇ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದರೆ ನಾಲ್ಕೈದು ವರ್ಷಗಳಾಗುತ್ತವೆ. ಅಲ್ಲಿ ಒಂದು ಸಣ್ಣ ವಿಷಯ ಕೂಡ ಜಾಗ್ರತೆ ತೀರ್ಮಾನವಾಗುವುದಿಲ್ಲ. ಇನ್ನು ಸರ್ಕಾರದಲ್ಲಿ ಎಷ್ಟು ವರ್ಷವಾಗುತ್ತದೆ ? It is not at all a well conceived clause. It is most undemocratic power to the bureaucracy much more than what is necessary. ಇನ್ನೊಂದು ಇದೆ. ೬೫ (ಬಿ) ಇದರಲ್ಲಿ ಕಮಿಷನರ್ ಎಲ್ಲಾ ರೆಸಲ್ಯೂಷನ್ ಅನ್ನು ಸರ್ಕಾರಕ್ಕೆ ಕಳುಹಿಸಬೇಕು. ಸರ್ಕಾರದವರು ಬೇಕಾದರೆ ತಡೆಗಟ್ಟಬಹುದು, ಪಾಸ್ ಮಾಡಬಹುದು ಇದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಸರ್ಕಾರ ಅಧಿಕಾರ ಇಟ್ಟುಕೊಳ್ಳಲಿ. ಕೆಲವು ಸಲ ತಪ್ಪು ಮಾಡಿದರೆ ಅದನ್ನು ನೋಡಿಕೊಳ್ಳಬೇಕು, ಮಧ್ಯದಲ್ಲಿರುವವರಿಗೆ ಅಧಿಕಾರವನ್ನು ಕೊಡುವುದು ಸರಿಯಲ್ಲ. ಒಂದು ಲಕ್ಷ ಇದ್ದದನ್ನು ೫ ಲಕ್ಷ, ೫ ಲಕ್ಷ ಇದ್ದುದನ್ನು ೨೦ ಲಕ್ಷ. ೫ ಲಕ್ಷ ಇದ್ದದ್ದು ೫೦ ಲಕ್ಷ ಆಗಿದೆ. per capita income of Bangalore is highest in the State or country. ಆ ಆಧಾರದ ಮೇಲೆ ಅದನ್ನು ಜಾಸ್ತಿ ಮಾಡಿದ್ದಾರೆಯೋ ಏನೋ ಗೊತ್ತಿಲ್ಲ. ಇದು ಯಾರಿಗೆ ಅನುಕೂಲ ಮಾಡಿಕೊಡಲಿಕ್ಕೆ ? ೧೯೭೬ರಲ್ಲಿ ೧ ಲಕ್ಷ ಇದ್ದದ್ದು ಈಗ ಜಾಸ್ತಿಯಾಗುತ್ತದೆ. ಟೆಂಡರ್ ಜಾಸ್ತಿಯಾಗಿದೆ, for what purpose it is meant for ಟೆಂಡರ್ ಜಾಸ್ತಿಯಾಗಿರಬಹುದು. ಆದರೂ ಕೂಡ This is too much. I don't say it has gone up ೨೦ ಲಕ್ಷ, ೫೦ಲಕ್ಷ ಬಹಳ ಜಾಸ್ತಿಯಾಯಿತು. ೫ ಲಕ್ಷ ೧೦ ಲಕ್ಷ ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಇದನ್ನು ತಾವು ಇನ್ನೊಮ್ಮೆ ಯೋಚನೆ ಮಾಡಬೇಕಾಗುತ್ತದೆ. ಈ ಅಧಿಕಾರವನ್ನು ಕಮಿಷನರ್‌ಗೆ ಕೊಡುವುದು ಸರಿಯಲ್ಲ. It is very heavy. Section-10 of the Principal Act consists of all powers of the Commissiner I think that is also too much. ಇಷ್ಟನ್ನು ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಕ್ಟ್‌ಗೆ ತಿದ್ದುಪಡಿಯನ್ನು ತರುತ್ತಾರೆಂದರೆ ನಾವು ಯೋಚನೆ ಮಾಡುತ್ತಿದ್ದುದು ಏನೆಂದರೆ, ಬೆಂಗಳೂರು ಹೆಚ್ಚು ಹೆಚ್ಚು ಬೆಳೆಯುತ್ತಿರುವುದರಿಂದ ಸೆಟಲೈಟ್ ಟೌನ್ ಮಾಡಬಹುದು ಎಂದು. ಬೆಂಗಳೂರು ನಗರ ಅಭಿವೃದ್ಧಿಯ ಕಡೆಗೆ ಇವರು ಹೆಚ್ಚಿಗೆ ಗಮನ ಕೊಡಬಹುದು ಇದರ ಬೆಳವಣಿಗೆಯನ್ನು ರೆಗ್ಯುಲೇಟ್ ಮಾಡುತ್ತಾರೆ ಆದ್ದರಿಂದ ತಿದ್ದುಪಡಿಯನ್ನು ತರುತ್ತಿದ್ದಾರೆಂದರೆ ಆದರೆ ಇವರು ಅದನ್ನು ಬಿಟ್ಟು ಅದು ಯಾವುದೂ ಇಲ್ಲದ ಸಮಸ್ಯೆಗಳನ್ನು ನನ್ನ ಮುಂದಿಟ್ಟಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಆಗಬೇಕಾದರೆ ಮೊದಲು ಮನೆ ನಿವೇಶನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಳನ್ನು ಕೊಡಬೇಕು. ಇವತ್ತು ರೆವಿನ್ಯೂ ಸೈಟುಗಳು ೧೦ ಸಾವಿರ ಇದ್ದದ್ದು ೨೦ ಸಾವಿರ ರೂಪಾಯಿಗಳಾಗಿದೆ. ರವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಬೇಡಿಯೆಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬಾಯಿ ಬಡಿದುಕೊಂಡರೂ ಅವರು ಮನೆಗಳನ್ನು ಕಟ್ಟುವುದನ್ನು ಬಿಡುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಯಾವುದೇ ಕೆಲಸ ಬೇಗ ಆಗುವುದಿಲ್ಲ. ಅದಕ್ಕೆ ಯಾವುದೇ ರೀತಿಯ ಕಂಟ್ರೋಲ್ ಇಲ್ಲವೇ ಇಲ್ಲ. ರೋಡ್ ಕಟ್ಟಿಂಗ್‌ಗೋಸ್ಕರವೂ ಕೂಡ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡಿಸುತ್ತಾರೆ. ಅದು ನಮಗೂ ಅನುಭವವಾಗಿದೆ. ಬೆಂಗಳೂರು ನಗರವನ್ನು ಹೀಗೆಯೇ ಇಟ್ಟುಕೊಂಡು ಏನಾದರೂ ಸಾಧಿಸುತ್ತೇವೆ ಎಂದರೆ ಏನೂ ಆಗುವುದಿಲ್ಲ. ಹೆಚ್ಚಿಗೆ ಸೆಟಲೈಟ್ ಟೌನ್ ಮಾಡಬೇಕು. ಕಮಿಷನರ್‌ಗೆ ಹೆಚ್ಚಿಗೆ ಪವರ್ಸ್ ಕೊಟ್ಟು ಏನಾದರೂ ಮಾಡುತ್ತೇವೆ ಎಂದರೆ ಏನೂ ಆಗುವುದಿಲ್ಲ. ಬೆಂಗಳೂರು ನಗರ ವಿಪರೀತ ಬೆಳೆಯುತ್ತಿದೆ, ಸೆಟಲೈಟ್ ಟೌನ್‌ಗಳನ್ನು ಮಾಡಬೇಕು. ಮಾನ್ಯ ಸಿಂಧ್ಯಾರವರು ಸಾರಿಗೆ ಮಂತ್ರಿಗಳಾಗಿದ್ದಾಗ ಎಲ್ಲಾ ಕಡೆಗೂ ಹೆಚ್ಚಿಗೆ ಬಸ್ಸುಗಳನ್ನು ಕೊಟ್ಟಿದ್ದರು. ಈಗ ಅವು ಕೂಡ ನಿಂತುಹೋಗುತ್ತಿವೆ. ಬೆಂಗಳೂರಿನ ರಿಂಗ್ ರೋಡ್‌ನ ಬಗ್ಗೆ ಹೇಳುತ್ತಿದ್ದರು. ನಾನು ಅದರ ಬಗ್ಗೆ ಒಬ್ಬ ಅಧಿಕಾರಿಯನ್ನು ಕೇಳಿದೆ, ಅವರು ಹೇಳಿದರು ದಕ್ಷಿಣದ ಕಡೆಗೆ ಪ್ರಾರಂಭವಾಗಿದೆ ಉತ್ತರ ಕಡೆಗೆ ರಿಂಗ್ ರೋಡ್ ಇಲ್ಲವೆಂದರು. ಗ್ರೀನ್ ಬೆಲ್ಟ್ ಏರಿಯಾ ಅದು ಇಲ್ಲವೇ ಇಲ್ಲವೆಂದು ಹೇಳುತ್ತಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೆಲಸ ಕಾರ್ಯಗಳು ಶೋಚನೀಯ ಪರಿಸ್ಥಿತಿಯಲ್ಲಿವೆ. ಅದು ಯಾವ ದಾರಿಯಲ್ಲಿ ಹೋಗಬೇಕೋ ಆ ದಾರಿಯಲ್ಲಿ ಹೋಗುತ್ತಿಲ್ಲ. ಆ ದಿಕ್ಕಿನಲ್ಲೂ ಕೂಡ ಹೋಗುತ್ತಿಲ್ಲ. ಇನ್ನೊಂದು ವಿಚಾರ, ನಮ್ಮಲ್ಲಿರುವ ಸ್ಲಮ್ಸ್‌ಗಳು ಏನು ಇವೆ, ಇವುಗಳಿಗೆ ನಾನು ಅಂದುಕೊಂಡಿರುವ ಹಾಗೆ, ಬಿ.ಡಿ.ಎ.ನವರು ಪ್ರತಿಯೊಂದು ಗುಡಿಸಲಿಗೂ ಒಂದೊಂದು ಸಾವಿರ ರೂಪಾಯಿಗಳ ಹಾಸ್‌ಬೆಸ್ಟಾಸ್ ಷೀಟ್ಸ್‌ಗಳನ್ನು ಕೊಟ್ಟುಬಿಟ್ಟರೆ. ಸ್ಲಮ್ಸ್‌ಗಳು ಕ್ಲಿಯರಾಗುತ್ತವೆ. ಅದನ್ನು ಬಿಟ್ಟು ಈಗ ಏನು ಮಾಡುತ್ತಿದ್ದಾರೆಂದರೆ, ಬೆಳಿಗ್ಗೆ ಒಂದು ಗುಂಪು ಹೋಗಿ ಅಲ್ಲಿರುವಂತಹ ಗುಡಿಸಲುಗಳನ್ನು ತಳ್ಳಿಬಿಡುವುದು. ಅವರಿಗೆ ಬದಲಿ ನಿವೇಶನಗಳನ್ನು ಕೊಡುತ್ತೇವೆಂದು ಹೇಳುವುದು. ಆದರೆ ಅವರಿಗೆ ಬದಲಿ ನಿವೇಶನಗಳನ್ನು ಕೊಡುವುದೇ ಇಲ್ಲ. ಅವರೆಲ್ಲರೂ ಸಾಮಾನ್ಯವಾಗಿ ಬಡವರೇ ಇರುತ್ತಾರೆ. ಕೋಲಾರದ ಕಡೆಯಿಂದ ಬಂದಿರತಕ್ಕಂತಹವರು ಹಾಗೂ ಕರ್ನಾಟಕದವರೇ ಜಾಸ್ತಿ ಇದ್ದಾರೆ. ಜೊತೆಗೆ ಬೇರೆ ಕಡೆಯಿಂದ ಬಂದಿರತಕ್ಕಂತಹವರೂ ಇದ್ದಾರೆ. ಅವರೇನು ಇಂಗ್ಲೇಂಡಿನಿಂದ ಬಂದಿಲ್ಲ, ಇಲ್ಲ ಫ್ರಾನ್ಸ್‌ನಿಂದ ಬಂದಿಲ್ಲ. ಹೊಸೂರಿನಿಂದ ಬಂದಿರಬಹುದು, ಕೋಲಾರದಿಂದ ಬಂದಿರಬಹುದು ಕೆಲವರು ಮಂಡ್ಯ ಹಾಗೂ ಮಾಗಡಿ ಕಡೆಯಿಂದಲೂ ಬಂದಿದ್ದಾರೆ.

ಶ್ರೀ ಎಂ. ಶ್ರೀನಿವಾಸ್.—ಮದ್ರಾಸ್‌ನಿಂದ ಜಾಸ್ತಿ ಜನ ಬಂದಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಮದ್ರಾಸ್‌ನಿಂದ ಜಾಸ್ತಿ ಬಂದಿರಬಹುದು. ಏಕೆಂದರೆ, ಉತ್ತರಹಳ್ಳಿ ಶಾಸಕರು ಅದನ್ನು ಹೇಳುತ್ತಿದ್ದಾರೆ. ನಿಜ ಇರಬಹುದು. ಬಿ.ಡಿ.ಎ.ನವರು ಕೊನೆಯ ಪಕ್ಷ ೨ ಸಾವಿರ ರೂಪಾಯಿಗಳ ಮೆಟೀರಿಯಲ್ಸ್‌ನ್ನು ಕೊಟ್ಟಿದ್ದೇ ಆದರೆ, ಇರುವಂತಹ ಸ್ಲಮ್ಸ್‌ಗಳೆಲ್ಲ ಹೋಗುತ್ತವೆ. ಅದನ್ನು ಬಿಟ್ಟು ಇರುವಂತಹ ಗುಡಿಸಲುಗಳನ್ನು ತಳ್ಳಿಬಿಡುವುದು ಸರಿಯಲ್ಲ. ನಿಮಗೆ ಪ್ಲಾಟ್‌ಗಳನ್ನು ಮಾಡಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಪ್ಲಾಟ್‌ಗಳನ್ನೂ ಕೂಡ ಕೊಡುತ್ತಿಲ್ಲ. ಇದರಿಂದಾಗಿ ಈ ಸ್ಲಮ್ಸ್‌ಗಳು ಕೂಡ ಹೋಗುವುದಿಲ್ಲ. ಆದ್ದರಿಂದ ನಾನು ಇವತ್ತು ಕೇಳಿಕೊಳ್ಳುವುದೇನೆಂದರೆ ಸ್ಲಮ್ಸ್‌ಗಳ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಜನತಾ ಮನೆಗಳನ್ನು ಯಾವ ರೀತಿ ಕೊಡುತ್ತೀರಿ, ಅದೇ ರೀತಿ ಇದರ ಬಗ್ಗೆಯೂ ಸ್ವಲ್ಪ ಕಾಳಜಿ ವಹಿಸಿ ೫೦ ಪರ್ಸೆಂಟ್ ಲೋನ್ ಎಂದು ಟ್ರೀಟ್ ಮಾಡಿ ಒಂದೊಂದು ಮನೆಗಳಿಗೂ ೫,೦೦೦ ರೂಪಾಯಿಗಳಂತೆ ಕೊಟ್ಟರೆ, ಸ್ಲಮ್ಸ್‌ಗಳೇ ಇರುವುದಿಲ್ಲ. ಈ ಒಂದು ಕೆಲಸವನ್ನು ಮಾಡಿದ್ದೇ ಆದರೆ ಬೆಂಗಳೂರು ನಗರವೂ ಸುಂದರವಾಗಿರುತ್ತದೆ. ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಮುಂದೆ ಸ್ಲಮ್ಸ್‌ಗಳೂ ಕೂಡ ಅಭಿವೃದ್ಧಿಯಾಗುವುದಿಲ್ಲ. ಅದನ್ನು ಬಿಟ್ಟು ಇರತಕ್ಕಂತಹ ಸ್ಲಮ್ಸ್‌ಗಳಿಗೆ ಹೋಗಿ ಸುಮ್ಮನೆ ತಳ್ಳಿಬಿಟ್ಟರೆ, ಅವರು ಎಲ್ಲಿಗೆ ಹೋಗಬೇಕು? ಅವರು ಮತ್ತೆ ಇನ್ನೊಂದು ಕಡೆ ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ. ಬಿ.ಡಿ.ಎ.ನವರು ಮಾನವೀಯತೆಯ ದೃಷ್ಟಿಯಿಂದ ನಿಜವಾಗಿಯೂ ವರ್ತನೆ ಮಾಡುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನೊಂದು ವಿಚಾರವನ್ನು ಆಗಾಗ್ಗೆ ಎಲ್ಲರೂ ಹೇಳುತ್ತಿದ್ದಾರೆ. ಈ ಸದನದಲ್ಲೂ ಅನೇಕ ಸಲ ಹೇಳಿದ್ದೇವೆ. Burocracy is stretching its hands in every walks of life. ಇದನ್ನೇ ನಾವು ಡೆಮಾಕ್ರಸಿ ಎಂದು ಹೇಳುತ್ತೇವೆ. ಅದು ಅರ್ಥವಾಗುವುದಿಲ್ಲ. ಅದರ ಬಗ್ಗೆ ಬಹಳ ಸ್ಪಷ್ಟವಾಗಿ ಎಲ್ಲರೂ ಹೇಳುತ್ತಾರೆ. ಬಿ.ಡಿ.ಎ. ಛೇರ್ಮನ್ನರಾಗಿರತಕ್ಕಂತಹವರದ್ದು ಒಬ್ಬೊಬ್ಬರದೂ ಒಂದೊಂದು ಚರಿತ್ರೆ ಉಂಟು. ಅದೇ

ರೀತಿ ಬಿ.ಡಿ.ಎ.ಯಲ್ಲಿ ಕಮೀಷನರ್ ಆಗಿರತಕ್ಕಂತಹವರದ್ದೂ ಒಬ್ಬೊಬ್ಬರದು ಒಂದೊಂದು ಚರಿತ್ರೆ ಉಂಟು. ಈಗ ಹಾಲಿ ಕಮೀಷನರ್ ಆಗಿರತಕ್ಕಂತಹ ಶ್ರೀ ಎಸ್.ಆರ್. ವಿಜಯ್‌ರವರು ಬಿ.ಡಿ.ಎ.ದ ಆಡಳಿತವನ್ನು ಸ್ವಲ್ಪ ಸ್ಟ್ರೀಮ್‌ಲೈನ್ ಮಾಡಬೇಕೆಂದು ನಿಜವಾಗಿಯೂ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅವರು ಅದನ್ನು ಸ್ಟ್ರೀಮ್‌ಲೈನ್ ಮಾಡಿ ಸುಧಾರಿಸುತ್ತಾರೆಂಬ ನಂಬಿಕೆ ನನಗೆ ಇಲ್ಲ. ಅಂತಂತಹ ಮಹಾನುಭಾವರು ಅಲ್ಲಿದ್ದಾರೆ. ಯಾವುದೇ ಒಂದು ಫೈಲು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ವರ್ಷಗಟ್ಟಲೆ ಸಮಯಬೇಕು. ಹಣ ಕೊಡದಿದ್ದರೆ ಫೈಲೇ ಮೂವ್ ಆಗುವುದಿಲ್ಲ. ಕೆಲವೊಮ್ಮೆ ವರ್ಷಗಟ್ಟಲೆಯಾದರೂ ಫೈಲುಗಳು ಮೂವೇ ಆಗುವುದಿಲ್ಲ. ಅನೇಕ ಸಲ ಫೈಲೇ ಸಿಕ್ಕುವುದಿಲ್ಲ. ಅನೇಕ ರೀತಿಯ ಅವ್ಯವಹಾರ ಆ ಕಛೇರಿಯಲ್ಲಿದೆ. ಐ.ಎ.ಎಸ್ ಅಧಿಕಾರಿಗಳ ಬಗ್ಗೆ ಹೇಳುವುದಾದರೆ ಕೆಲವು ಐ.ಎ.ಎಸ್. ಅಧಿಕಾರಿಗಳು ಬಹಳ ಎಫಿಷಿಯಂಟ್ ಅಧಿಕಾರಿಗಳು ಇದ್ದಾರೆ. ಕೆಲವು ಐ.ಎ.ಎಸ್. ಅಧಿಕಾರಿಗಳು ನಾನು ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳುವುದಾದರೆ ಎರಡೂ ಕೈಯಲ್ಲೂ ತಿನ್ನುವಂತಹ ಮಹಾನುಭಾವರು ಇದ್ದಾರೆ. ಅಂತಹವರಿಗೆ ೧ ಲಕ್ಷ ಇದ್ದಂತಹ ಡಿಸ್ಕ್ರಿಷನರಿ ಅಧಿಕಾರವನ್ನು ೨೦ ಲಕ್ಷಕ್ಕೆ ಹೆಚ್ಚು ಮಾಡಿದ್ದೇ ಆದರೆ ನಾಳೆ ಬಿ.ಡಿ.ಎ.ನ್ನು ಅವರು ಮಾರಿಬಿಡುತ್ತಾರೆ. ಮತ್ತೆ ೫ ಲಕ್ಷ ಇದ್ದುದನ್ನು ೫೦ ಲಕ್ಷಕ್ಕೆ ಹೆಚ್ಚು ಮಾಡಿದರೆ ಬಿ.ಡಿ.ಎ. ಗತಿ ಏನಾಗಬೇಕು? ಕರಪ್ಟ್ ಅಧಿಕಾರಿಗಳು ಏನು ಇದ್ದಾರೆ ಅವರ ಕೈಯಲ್ಲಿ ೧ ಲಕ್ಷ ಇದ್ದದ್ದನ್ನು ೨೦ ಲಕ್ಷಕ್ಕೆ ಹೆಚ್ಚು ಮಾಡಿ ನೀವು ನಿನ್ನ ಡಿಸ್ಕ್ರಿಷನರಿ ಅಧಿಕಾರವನ್ನು ಉಪಯೋಗ ಮಾಡು ಎಂದು ಹೇಳಿದರೆ ಇದರಿಂದ ಬೆಂಗಳೂರು ನಗರ ಅಭಿವೃದ್ಧಿಯಾಗುವುದಿಲ್ಲ. ಅವರ ಮನೆಗಳು ಅಭಿವೃದ್ಧಿಯಾಗುತ್ತವೆ. ಇಲ್ಲದಿದ್ದರೆ ಅವರ ಸಂಸಾರ ಅಭಿವೃದ್ಧಿಯಾಗುತ್ತದೆ. ಅಲ್ಲಿಯ ಛೇರ್ಮನ್ ಬಗ್ಗೆ ಹೇಳುವುದಾದರೆ ಯಾವಾಗಲೂ ಪ್ರಜಾಪ್ರಭುತ್ವ ನೀತಿಯಲ್ಲಿ, ನಾನ್ ಅಫಿಷಿಯಲ್ ಛೇರ್ಮನ್ನರು ಯಾರಿರುತ್ತಾರೆ. ಅವರ ಕಂಟ್ರೋಲ್‌ನಲ್ಲಿ ಅಧಿಕಾರಿಗಳು ಇರಬೇಕು. ಆದ್ದರಿಂದ ಬಿರೊಕ್ರಸಿಗೆ ಇಷ್ಟೊಂದು ಅಧಿಕಾರವನ್ನು ಕೊಡುವುದು ಸೂಕ್ತ ಅಲ್ಲ. ಯಾವಾಗಲೂ ಪೀಪಲ್ ರೆಪ್ರೆಸೆಂಟಿಟೀವ್ ಯಾರು ಇರುತ್ತಾರೆ ಅವರಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು. ಅವರು ಏನಾದರೂ ಮರ್ಯಾದೆಯಿಂದ ನಡೆದುಕೊಳ್ಳದಿದ್ದರೆ, ಜನ ಬಯ್ಯುತ್ತಾರೆಂಬ ಭಯ ಇರುತ್ತದೆ. ೫ ವರ್ಷ ಆದ ಮೇಲೆ ಅವರು ಸರಿಯಾಗಿ ನಡೆದುಕೊಳ್ಳದಿದ್ದರೆ ಮನೆಗೆ ಹೋಗುತ್ತಾರೆ, ಆದರೆ ಬಿರ್ಯೂಕ್ರಸಿಗೆ ಬಗ್ಗೆ ಹೇಳುವುದಾದರೆ ಈ ಜಾಗ ಇಲ್ಲದಿದ್ದರೆ, ಇನ್ನೊಂದು ಜಾಗಕ್ಕೆ ಹೋಗುತ್ತೇನೆ, ರಾಜ್ಯ ಸರ್ಕಾರ ನಮ್ಮ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾವು ಕೇಂದ್ರ ಸರ್ಕಾರದ ಅಧಿಕಾರಿಗಳು ಎಂದು ಕೂಡ ಕೆಲವರು ಹೇಳುತ್ತಾರೆ. ಆದ್ದರಿಂದ ಡಿಸ್ಕ್ರಿಷನರಿ ಅಧಿಕಾರವನ್ನು ಇಷ್ಟೊಂದು ಹೆಚ್ಚು ಮಾಡಿರುವಂಥಹದ್ದು ಬಹಳ ಅತಿಯಾಯಿತು. It is too much. ದಯಮಾಡಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎರಡನೆಯದಾಗಿ ತಿದ್ದುಪಡಿಯ ಸೆಕ್ಷನ್ ೧೩ ಅನ್ನು ಯಾರು ಫ್ರೇಮ್ ಮಾಡಿದರು? ಏಕೆ ಫ್ರೇಮ್ ಮಾಡಿದರು? ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇದನ್ನು ನೋಡಿದ ಮೇಲೆ ನನ್ನ ಮನಸ್ಸಿಗೆ ಬಂದಿರುವಂತಹ ಅಂಶ ಏನೆಂದರೆ, ಬೆಳಗಾಂ ನಗರ ಸಭೆಯಲ್ಲಿ ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಹಿಂದೆ ಏನೊಂದು ನಿರ್ಣಯವನ್ನು ಅಂಗೀಕರಿಸಿದರು, ಅದನ್ನು ತಲೆಯಲ್ಲಿಟ್ಟು ಮಾಡಿರಬಹುದು ಎಂದು ನನಗನ್ನಿಸುತ್ತದೆ. ಇದೊಂದು ಆರ್‌ಬಿಟ್ರರಿ. ಇದರಿಂದ ಯಾವುದೇ ನಗರಸಭೆ ಹಾಗೂ ಪುರಸಭೆ ಯಾವುದೇ ಒಂದು ನಿರ್ಣಯವನ್ನು ಅಲ್ಲಿ ಪಾಸು ಮಾಡಿದರೂ ಅದು ಊರ್ಜಿತವಾಗುತ್ತದೆಂಬ ಗ್ಯಾರಂಟಿ ಇಲ್ಲ. ತಲೆಕೆಟ್ಟಿರುವ ಒಬ್ಬ ಐ.ಎ.ಎಸ್. ಅಧಿಕಾರಿ "This is not legal; I don't feel this is legal. I refer it to the Government. It is *ad-initio* void, there may be a reference" ಎಂದು ಹೇಳಿಬಿಟ್ಟರೆ ನಿರ್ಣಯವನ್ನು ಪಾಸ್ ಮಾಡಿದರೂ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಂತಹ ಒಂದು ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇದಕ್ಕೆ ನಾನೊಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆಯೂ ಕೂಡ ತಮಗೆ ಗೊತ್ತಿದೆ. ತಾವೂ ಕೂಡ ಲಾಯರ್ ಆಗಿದ್ದಂತಹವರು. ಪ್ರತಿಯೊಂದರಲ್ಲೂ ಯಾವುದೇ ನಿರ್ಣಯವನ್ನು ಪಾಸು ಮಾಡಿದರೂ ಕೂಡ ಅದಕ್ಕೆ ಬೆಲೆ ಇರುತ್ತವೆ ಎಂಬ ಗ್ಯಾರಂಟಿ ಇಲ್ಲ. ಮತ್ತೆ ಸ್ಲಮ್ಸ್ ಬಗ್ಗೆ ಕೂಡ ಬಿ.ಡಿ.ಎ. ಬ್ಲಾಕ್ ಮಾಡುತ್ತಿದೆ ವಿನಹ ಅಭಿವೃದ್ಧಿ ಮಾಡುವುದಕ್ಕೆ ಕೈಹಾಕಿಲ್ಲ. ಬಡವರಿಗೆ ಹೆಚ್ಚು ಸಹಾಯವಾಗಿ, ಇರತಕ್ಕಂತಹ ಸ್ಲಮ್ಸ್‌ಗಳನ್ನು ನಿರ್ಮೂಲನ ಮಾಡಿ, ಅವರಿಗೆ ಮನೆಗಳನ್ನು ಕೊಟ್ಟು ಸಹಾಯ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಹೇಳಿ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ಮಸೂದೆಯನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಸರಳವಾದ ಮತ್ತು ನೇರವಾದ ತಿದ್ದುಪಡಿಗಳನ್ನು ಸಭೆಯ ಮುಂದಿಟ್ಟು ಸಭೆಯ ಅನುಮತಿಯನ್ನು ಕೋರಿ ಪ್ರಾಸ್ತಾವಿಕವಾಗಿ ಈ ತಿದ್ದುಪಡಿಯ ಮುಖ್ಯ ಉದ್ದೇಶವನ್ನು ನಾನು ಪ್ರಾರಂಭದಲ್ಲೇ ತಿಳಿಸಿದ್ದೇನೆ. ಈ ತಿದ್ದುಪಡಿ ಮಸೂದೆಯ ಮೇಲೆ ೪ ಜನ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸನ್ಮಾನ್ಯ ಬಸವಲಿಂಗಪ್ಪನವರು, ಸನ್ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಸನ್ಮಾನ್ಯ ಎಂ. ಎಸ್. ಕೃಷ್ಣನ್‌ರವರು ಹಾಗೂ ಸನ್ಮಾನ್ಯ ಆರ್. ವೆಂಕಟರಾಮಯ್ಯನವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭದಿಂದ ನಡೆದುಕೊಂಡುಬಂದ ದಾರಿ ಮತ್ತು ಅದರ ಚರಿತ್ರೆಯ ಬಗ್ಗೆ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಂತರ ನಮ್ಮ ಸರ್ಕಾರ ಹೊರಡಿಸಿದಂತಹ ಶ್ವೇತಪತ್ರದ ಉಲ್ಲೇಖವನ್ನೂ ಕೂಡ ಅವರು ಮಾಡಿದ್ದಾರೆ. ಆದ್ದರಿಂದ ಈ ಸಂಸ್ಥೆ ಭ್ರಷ್ಟಾಚಾರ ಸಂಸ್ಥೆಯಾಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ ಎನ್ನುವುದರ ಉಲ್ಲೇಖ ಹಾಗೂ ಟೀಕೆಗಳು ಇಲ್ಲಿ ನಡೆದಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ ಈ ಸಂಸ್ಥೆಯ ಕೆಲಸ ಕಾರ್ಯಗಳು ಜನಹಿತ ದೃಷ್ಟಿಯಿಂದ ನಡೆಯುವಂತಾಗಬೇಕು ಎನ್ನುವ ಅಭಿಪ್ರಾಯದಿಂದ ಹಲವಾರು ನಿಯಂತ್ರಣ ಕಾರ್ಯಗಳನ್ನು ಜಾರಿಗೊಳಿಸಲು ಜನತೆಗೆ ಅನುಕೂಲ ಮಾಡಿಕೊಡಬೇಕು ಎನ್ನ ತಕ್ಕಂತಹ ದಿಸೆಯಲ್ಲಿ ಪ್ರಯತ್ನ ಮಾಡಿದ್ದೇವೆ. ಇದರಲ್ಲಿ ಪೂರ್ಣ ಯಶಸ್ವಿಯಾಗಿದ್ದೇವೆ ಎಂದು ನನಗನ್ನಿಸುವುದಿಲ್ಲ. ಆದ್ದರಿಂದ ಸನ್ಮಾನ್ಯ ಸದಸ್ಯರುಗಳು ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಡೆದುಕೊಂಡು ಬಂದ ಹಿನ್ನೆಲೆಯಲ್ಲಿ ಕೊಟ್ಟಂತಹ ಸಲಹೆ ಸೂಚನೆಗಳನ್ನು ಹಾಗೂ ಟೀಕೆಗಳನ್ನು ಗಮನದಲ್ಲಿಟ್ಟುಕೊಂಡಿರುತ್ತೇನೆ. ಎನ್ನುವ ಮಾತನ್ನು ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮುಖ್ಯವಾದ ಅಂಶ ಈ ತಿದ್ದುಪಡಿಯ ಬಗ್ಗೆ ಪ್ರಸ್ತಾಪವಾಗಿದ್ದು ಅಂದರೆ ಸೊಸೈಟಿಗಳ ಬಗ್ಗೆ. ನನ್ನ ಮಾನ್ಯ ಸಹೋದ್ಯೋಗಿಯಾಗಿರುವಂತಹ ಶ್ರೀಮಾನ್ ಜಾಲಪ್ಪನವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅದನ್ನೇ ನಾನು ಪುನಃ ಲಂಬಿಸುವುದಕ್ಕೆ ಹೋಗುವುದಿಲ್ಲ. ಇನ್ನು ಈ ತಿದ್ದುಪಡಿಯ ವಿಚಾರವಾಗಿ ಒಂದು ವಿಷಯವನ್ನು ಪ್ರಸ್ತಾಪಿಸುವುದಾದರೆ, ಸನ್ಮಾನ್ಯ ಬಸವಲಿಂಗಪ್ಪನವರು ಈ ಸಂಸ್ಥೆಯಲ್ಲಿ ಪ್ರಾರಂಭದಿಂದ ಇಲ್ಲಿಯವರೆವಿಗೂ ಅಕೌಂಟ್ಸ್ ಆಡಿಟ್ಟೇ ಆಗಿಲ್ಲ. ನಾನು ಪಿ.ಎ.ಸಿ.ಯ ಅಧ್ಯಕ್ಷನಾಗಿದ್ದಾಗಲೂ ಆ ಬಗ್ಗೆ ಪ್ರಯತ್ನ ಮಾಡಿದೆ. ಆದರೂ ಏನೂ ಆಗಲಿಲ್ಲ ಎಂದು ಹೇಳಿದರು. ಆ ಬಗ್ಗೆ ನಾವು ಸ್ವಲ್ಪ ಪ್ರಯತ್ನ ಮಾಡಿದ್ದೇವೆ. ಅದರ ವಿವರಗಳು ಹೀಗಿವೆ:—

> Audit of acconuts upto 1981-82 has been completed. Audit beyond 1981-82 is to be taken up by AG. Now arrears has been tackled and accounts of receipts and payments for the year 1982:83, 1983-84, 1984-85 and 1985-86 has been completed.

೪–೩೦ ಪಿ. ಎಂ.

ಈ ದಿಸೆಯಲ್ಲಿ ಕೆಲಸ ನಡೆದಿದೆ. ಇನ್ನೂ ಮಾಡಬೇಕಾದುದು ಇದೆ. ಮಾಡತಕ್ಕ ಗತಿಯಲ್ಲಿ ಮುಂದು ವರಿಯುತ್ತೇವೆ.

ಶ್ರೀ ಬಸವಲಿಂಗಪ್ಪ.—ಅವರು ಆಕ್ಟ್ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು.—ಅವರು ಹೇಳಿ ಮುಗಿಸಲಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಏನು ಅವಸರ ? ಅವರು ಆಡಿಟ್ ಬಗ್ಗೆ ಹೇಳಿದ್ದಾರೆ I would read from this White Paper.

> "The Accountant General has observed that the B.D.A. has prepared only a monthly receipts and payments account. In the absence of income and expenditure account and balance sheet, the true state of affairs of the Authority cannot be ascertained. The accountant General has emphasized that the B. D. A. must prepare the income and expenditure account and balance sheet

> as also the initial records such as a detailed inventory of assets and liabilities, bank reconciliation statements, demand, collection and balance statement of revenue, deposit register, advances register, etc., The B. D. A. has not prepared the basic accounts for the year after 1977-78 also."

ಇದು ವೈಟ್ ಪೇಪರ್ ನಿಮ್ಮದು. ಅಕೌಂಟೆಂಟ್ ಜನರಲ್ ಹೇಳಿದ್ದಾರೆ. ಇದರ ಬಗ್ಗೆ ಏನು ಕ್ರಮ ವಹಿಸಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಆ ದಿಸೆಯಲ್ಲಿ ಅಕೌಂಟೆಂಟ್ ಜನರಲ್ ಏನು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಅದನ್ನು ಸರಿಪಡಿಸತಕ್ಕ ದಿಕ್ಕಿನಲ್ಲಿ ಕೆಲಸ ನಡೆದಿದೆ ಎಂದು ಹೇಳುವುದಕ್ಕೋಸ್ಕರ ವಿವರಣೆ ಕೊಟ್ಟಿದ್ದೇನೆ. ಇದು ಪೂರ್ಣವಾಗಿದೆ ಎಂದು ಹೇಳಲಿಲ್ಲ, ಕೆಲಸ ಪ್ರಾರಂಭವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಪ್ಪಿತಸ್ಥರಿಗೆ ಏನು ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಬಸವಲಿಂಗಪ್ಪನವರ ಇನ್ನೊಂದು ಮುಖ್ಯವಾದ ಅಂಶವೇನೆಂದರೆ, ಇಲ್ಲಿ ನಡೆಯುತ್ತಿರತಕ್ಕ ಕಾರ್ಯಕ್ರಮಗಳ ಬಗ್ಗೆ, ವ್ಯವಹಾರಗಳ ಬಗ್ಗೆ ಹತೋಟಿ ಇಲ್ಲವೆಂದು ಹೇಳಿದ್ದಾರೆ. ಆ ಹತೋಟಿಯನ್ನು ತರುವ ಉದ್ದೇಶದಿಂದ ಈ ಬಿಲ್‌ನಲ್ಲಿ ಎರಡು ತಿದ್ದುಪಡಿಗಳನ್ನು ತಂದಿರತಕ್ಕ ಮುಖ್ಯ ಉದ್ದೇಶವಾಗಿದೆ. ಹತೋಟಿ ಇರಬೇಕೆಂದು ಏನು ಎರಡು ಮುಖ್ಯವಾದ ತಿದ್ದುಪಡಿಗಳನ್ನು ತಂದಿದ್ದೇವೆ ಅದರ ವಿವರಗಳನ್ನು ಆಮೇಲೆ ಹೇಳುತ್ತೇನೆ. In the original Act, Section 13, reads thus:

> "The Commissioner shall be the Chief Executive and Administrative Officer of the Authority. The Commissoner, shall, in addition to performing such functions are conferred on him by or under this Act or any other law for the time being in force carry into effect the resolution of the Authority."

ಇದರ ಬಗ್ಗೆ ಕೃಷ್ಣನ್‌ರವರು ಸ್ವಲ್ಪ ವಿಚಾರ ಮಾಡಿದ್ದಾರೆ. "Shall carry into effect the resolutions of the Authority". He has no option. Some of the recent incidents of which I am aware, tells me that the Commissioner has no option except implementing the resolutions of the Authority. Even though such resolutions prima facie are opposed to the very act or the purpose or the objectives of this Act, he has no option. It says "He shall implement".

SRI M. S. KRISHNAN.—Depending upon the Chairman. Tell me one such instance and name the personality ? At least let us know who is that person ?

SRI A. LAKSHMISAGAR.—There has been a judgement of the Hon'ble High Court interpreting certain sections of this Act. Now subsequently even after the judgement, the BDA has gone on passing resolutions in contravention of the order of the High Court with regard to denotification and re-conveyance.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ತಾವು ಏನು ಮಾಡಿದಿರಿ ?

ಶ್ರೀ ಎ. ಲಕ್ಷ್ಮೀಸಾಗರ್.—ತಿದ್ದುಪಡಿ ಏನೆಂದರೆ, ಅಂಥದ್ದರಲ್ಲಿ ಏನಾದರೂ ಸಂಶಯ ಬಂದರೆ ಕಮೀಷನರ್‌ರವರು ಸದರಿ ನಿರ್ಣಯವನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದು. ಈ ರೀತಿ ಸರ್ಕಾರಕ್ಕೆ ಕಳುಹಿಸಿ ಸರ್ಕಾರದಿಂದ ಪರವಾನಗಿ ಬಂದ ಮೇಲೆ ಆ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ. ಇಷ್ಟೆ ಅದರಲ್ಲಿ ಹೇಳಿರುವುದು. ನಾರ್ಮಲ್ ಆಗಿ ಅಲ್ಲಿ ಪಾಸ್ ಆಗತಕ್ಕ ನಿರ್ಣಯಗಳು ಆಕ್ಟಿಗೆ ಬದ್ಧವಾಗಿದ್ದು ಆಕ್ಟಿನ ವ್ಯಾಪ್ತಿಯಲ್ಲಿ ಬರುವುದಾದರೆ ಅಡ್ಡಿಪಡಿಸುವುದಿಲ್ಲ. ಅವರಿಗೆ ಯಾವ ಅಡೆ ತಡೆಗಳೂ ಇರುವುದಿಲ್ಲ. ಬಿಡಿಎ. ಆಕ್ಟಿಗೆ ೧೯೮೧ರಲ್ಲಿ ತಿದ್ದುಪಡಿಗಳು ಆಗಿವೆ. ಇದು ಹೇಗಿದೆ ಎಂದರೆ ಒಂದು ದ್ವೀಪವಾಗಿದೆ. ಇಲ್ಲಿ ನಡೆಯುತಕ್ಕ ಕೆಲಸಗಳ ಮೇಲೆ ಯಾವ ವಿಧವಾದ ನಿಯಂತ್ರಣವೂ ಸರ್ಕಾರಕ್ಕೆ ಇಲ್ಲ. ವಿಶೇಷ ಸಮಯದಲ್ಲಿ ಸರ್ಕಾರ ತನ್ನ ಅಧಿಕಾರವನ್ನು ಉಪಯೋಗಿಸಬೇಕಾಗುತ್ತದೆ. ಇಲ್ಲಿ ಕೆಲವು ಜನ ಸದಸ್ಯರು ಚುನಾಯಿತರಾಗಿದ್ದಾರೆ. ಕಾರ್ಪೊರೇಷನ್‌ನಿಂದ ಬಂದಿರುವವರು ಇದ್ದಾರೆ. ಮಿಕ್ಕವರು ಸರ್ಕಾರದಿಂದ ನಾಮಕರಣ ಮಾಡಿರತಕ್ಕ ಸದಸ್ಯರು, ಉಳಿದವರು ಅಧಿಕಾರಿಗಳು ಇವರು ಮಾಡತಕ್ಕ ಕಾರ್ಯಕ್ರಮಗಳು ಮತ್ತೊಂದನ್ನು ನೋಡಿದರೆ ಸರ್ಕಾರಕ್ಕೆ ಸಾಮಾನ್ಯವಾಗಿ ತಡೆಯುವುದಕ್ಕೆ ಈ ಕಾನೂನಿನಲ್ಲಿ ಅಧಿಕಾರ ಇಲ್ಲ. ರಿವಿಜನಲ್ ಪವರ್ಸ್ ಇದೆ. ಎಲ್ಲಾ ಸಮಯದಲ್ಲೂ ಎಲ್ಲಾ ರೆಸಲ್ಯೂಷನ್ ಅನ್ನು ರಿವೈಸ್ ಮಾಡುತ್ತಾ ಕೋರುವುದಕ್ಕಾಗುವುದಿಲ್ಲ. ಸಿಪಿಸಿ. ಸಿಆರ್‌ಪಿಸಿ. ಯಲ್ಲಿ ರಿವಿಜನ್ ಪವರ್ಸ್ ಇದೆ. ನೂರಾರು ನಿರ್ಣಯಗಳು ಆಗುವಾಗ ಪ್ರತಿಯೊಂದನ್ನೂ ತರಿಸಿಕೊಂಡು ಸರ್ಕಾರ ನಿರ್ದೇಶನ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಚುನಾಯಿತ ಅಥಾರಿಟಿ ಅಲ್ಲ. ೨-೩-೪ ಜನ ಚುನಾಯಿತರು ಇರುತ್ತಾರೆ. ಸರ್ಕಾರ ನಾಮಕರಣ ಮಾಡಿದರೂ ಅಧಿಕಾರಿಗಳು ಇರುತ್ತಾರೆ. ಇವರು ಮಾಡಿದಂತಹ ನಿರ್ಣಯಕ್ಕೆ ಪರಿಣಾಮಕಾರಿಯಾದ ನಿಯಂತ್ರಣ ಸರ್ಕಾರಕ್ಕೆ ಇಲ್ಲ. ಅದನ್ನು ಸರಿಪಡಿಸಿ ಈ ಪ್ರಾಧಿಕಾರವು ಒಂದು ಹತೋಟಿಯಲ್ಲಿ ನಡೆಯಬೇಕೆಂಬ ದೃಷ್ಟಿಯಿಂದ ಈ ಕಾನೂನನ್ನು ತಂದಿದ್ದೇವೆ. ಇದು ಒಂದು ಭಾಗ ೧೩ನೇ ಸೆಕ್ಷನ್ನಿಗೆ ಮಾನ್ಯ ಕೃಷ್ಣನ್‌ರವರು ಇನ್ನೊಂದು ಹೇಳಿದರು, ಕಮಿಷನರ್, ಛೇರ್ಮನ್, ಮೆಂಬರ್ ಒಂದಾದರೆ ಎಲ್ಲರೂ ಸೇರಿ ಕಾನೂನಿಗೆ ವಿರುದ್ಧವಾಗಿ ನಿರ್ಣಯ ಮಾಡಿದರೆ ಏನು ಮಾಡುತ್ತೀರಿ, ಅದಕ್ಕೆ ಉತ್ತರ ನಿಮ್ಮಲ್ಲಿ ಇಲ್ಲ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಯಾವಾಗ.......

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಂಡು ಕೇಳಿ. ನೀವು ಹೇಳುವಾಗ ಅವರು ಕೇಳಿದ್ದಾರೆ. ನಂತರ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ ?

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಹೇಳಿದ ಹಾಗೆ ಎಲ್ಲಾ ಸಮಯದಲ್ಲೂ ಅಧಿಕಾರಿಗಳು ನಿರ್ಣಯವನ್ನು ವಿರುದ್ಧವಾಗಿ ಮಾಡುವುದಕ್ಕೆ ಹೋಗುವುದಿಲ್ಲ. ಒಂದೊಂದು ಸಮಯದಲ್ಲಿ ಪ್ರಾಧಿಕಾರ ಮಾಡತಕ್ಕ ನಿರ್ಣಯಗಳು ಕಾನೂನಿಗೆ ವಿರುದ್ಧವಾಗಿರುತ್ತವೆ, ಪಬ್ಲಿಕ್ ಪಾಲಿಸಿಗೆ ವಿರುದ್ಧವಾಗಿರುತ್ತವೆ ಎಂದರೆ ಅದನ್ನು ತಡೆಯುವುದಕ್ಕೆ ಈಗಿನ ಕಾನೂನಿನಲ್ಲಿ ಅವಕಾಶ ಇಲ್ಲ. shall carry into effect the resolutions of the Authority". ಎಂದು ಇದೆ. ಕಾನೂನಿಗೆ ವಿರುದ್ಧವಾಗಿದ್ದರೂ, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದ್ದರೂ ಮಾಡಬಹುದೆಂದು ಇದೆ. ಅಂಥ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಿ ಪರವಾನಗಿ ಪಡೆದು ನಿರ್ಣಯಗಳನ್ನು ಜಾರಿಗೆ ಕೊಡಬಹುದು, ಸರ್ಕಾರ ಒಪ್ಪದಿದ್ದರೆ ನಿರ್ಣಯಗಳನ್ನು ಅಲ್ಲಿಗೆ ಕೈಬಿಡತಕ್ಕದು ಎಂದು ಈ ಒಂದು ನಿಯಂತ್ರಣದ ಸೂತ್ರದ ಆಧಾರದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದೇವೆ. ಇನ್ನೊಂದು ಸನ್ನಿವೇಶದಲ್ಲಿ, ಛೇರ್ಮನ್ನರು, ಕಮಿಷನರ್ ಮತ್ತು ಪ್ರಾಧಿಕಾರದ ಇತರ ಸದಸ್ಯರು ಒಂದಾಗಿ ಕಾನೂನಿಗೆ ವಿರುದ್ಧವಾಗಿ ನಿರ್ಣಯ ಮಾಡಿದರೆ ಅದರ ಮೇಲೆ ಹೇಗೆ ನಿಯಂತ್ರಣ ಮಾಡುವುದು ಎಂಬ ಪ್ರಶ್ನೆ ಬಂದಾಗ ಅದಕ್ಕೆ ಏನು ಹೇಳಿದ್ದೇವೆಂದರೆ ಪ್ರಾಧಿಕಾರ ಮಾಡತಕ್ಕ ಎಲ್ಲಾ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಎಂದು ತಿದ್ದುಪಡಿ ತಂದಿದ್ದೇವೆ. ಇವೆರಡು ಬಹಳ ಮುಖ್ಯವಾದ ತಿದ್ದುಪಡಿಗಳು. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದ್ದು, ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ಇದೆ ಎಂದು ಹೇಳಿದಿರಿ. ಈ ಎರಡು ತಿದ್ದುಪಡಿಗಳನ್ನು ನೋಡಿದಾಗ ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ಎಲ್ಲಿದೆ ? ನಿರಂಕುಶ ರೀತಿಯಲ್ಲಿ ಅಧಿಕಾರಿಗಳು ನಡೆಯುವುದಕ್ಕೆ ಅವಕಾಶ ಇಲ್ಲ. ಅವರು ಕಾನೂನಿಗೆ ವಿರುದ್ಧವಾಗಿ ನಡೆದರೂ ಅವರ ಮೇಲೆ ಅಂಕುಶವನ್ನು ಉಪಯೋಗಿಸಿ ಅವರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೆ ಸರ್ಕಾರ ಅಧಿಕಾರವನ್ನು ತೆಗೆದುಕೊಂಡಿದೆ. ಪವರ್ ಆಫ್ ಸೂಪರ್‌ವಿಷನ್ ಇಟ್ಟುಕೊಂಡಿದೆ.

ಇನ್ನು ಸರ್ಕಾರವನ್ನು ನಾವು ನಂಬುವುದಿಲ್ಲ ಎಂದರೆ ಈ ಸಭೆಯ ಮುಂದೆ ಬರುತ್ತೇವೆ, ನೀವು ಟೀಕೆ ಮಾಡುತ್ತೀರಿ. ನಾವು ಮಾಡಿರತಕ್ಕಂಥ ಲೋಪದೋಷಗಳನ್ನು ತಿದ್ದುವುದಕ್ಕೆ ಅವಕಾಶ ಇದೆ. ಇಲ್ಲಿ ನಿಯಂತ್ರಣ ಇದೆ. ನಾವು ಉತ್ತರಬದ್ಧ ಜನ ಈ ಸರ್ಕಾರ ಪ್ರಜಾಪ್ರಭುತ್ವದ ಸರ್ಕಾರ ಅವರಿಗೆ ಈ ಒಂದು ನಿಯಂತ್ರಣದ ವಿಚಾರ, ಈ ಬಿ.ಡಿ.ಎ. ಆಕ್ಟ್‌ನಲ್ಲಿ ಈಗ ಇಲ್ಲ. ಇದು ಒಂದು ಕಡೆ ಆದರೆ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್ ತೆಗೆದುಕೊಳ್ಳೋಣ. ೧೯೪೯ ರಿಂದ ಬೆಂಗಳೂರಿನಲ್ಲಿ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್ ಜಾರಿಯಲ್ಲಿ ಇದೆ. ಆ ಆಕ್ಟ್ ಪ್ರಕಾರ ಕಾರ್ಪೋರೇಷನ್‌ನವರು ಪಾಸ್ ಮಾಡತಕ್ಕಂಥ್ನ ಎಲ್ಲಾ ರೆಸಲ್ಯೂಷನ್‌ಗಳನ್ನು ಸರ್ಕಾರಕ್ಕೆ ಕಳಿಸಬೇಕು ಎಂತಲೂ ಸರ್ಕಾರವು ಅಂಥ ನಿರ್ಣಯಗಳನು ಬದಲಾಯಿಸಬೇಕಾದರೆ ಅಥವಾ ಕ್ಯಾನ್ಸಲ್ ಮಾಡಬೇಕಾದರೆ ಷೋ-ಕಾಸ್ ನೋಟೀಸ್ ಕೊಡಬೇಕೆಂತಲೂ ಕಾರ್ಪೋರೇಷನ್‌ಗೆ ೧೫ ದಿನಗಳೊಳಗಾಗಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಇದೆ. ಈಗ ಅದೇ ಕಾನೂನನ್ನು ಚಾಚೂ ತಪ್ಪದೇ In toto bodily lifted and had been incorporated as an amendment to this only to see that there is proper exercise of supervision by the Government on all resolutions that are passed by the Development Authority from time to time. ಮಾನ್ಯ ಬಸವಲಿಂಗಪ್ಪನವರು ಹೇಳಿದರು ಇವರು ಏನೋ ಮಾಡಿಕೊಂಡು ಹೋಗುತ್ತಾರೆ. ಅವರನ್ನು ಯಾರು ಮಾತನಾಡಿಸುವ ಹಾಗೆ ಇಲ್ಲ. ಎಂದು ಹೇಳಿದರು. ಇಂತಹ ಪರಿಸ್ಥಿತಿ ಬರಬಾರದೆಂದು ಅವರನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಇದರಲ್ಲಿ ಪ್ರಯತ್ನ ಮಾಡಿದ್ದೇವೆ. ಆದ್ದರಿಂದ ಇದನ್ನು ಹೆಚ್ಚು ಲಂಬಿಸಿ ಇದಕ್ಕೆ ಉತ್ತರ ಕೊಡಬೇಕಾಗಿಲ್ಲ ಎಂದು ನಾನು ಭಾವಿಸಿದ್ದೇನೆ. ಕೊನೆಯದಾಗಿ ನಾನು ಹೇಳತಕ್ಕಂಥದ್ದು ಹೆಚ್ಚಿಗೆ ಹಣಕಾಸಿನ ಅಧಿಕಾರವನ್ನು ಇವರಿಗೆ ಕೊಟ್ಟು ಬಿಟ್ಟಿದ್ದಾರೆ ಎಂದು ಇನ್ನೊಂದು ಆಕ್ಷೇಪಣೆಯನ್ನು ತಾವು ಎತ್ತಿದ್ದೀರಿ. ಈಗ ಬೆಂಗಳೂರಿನಲ್ಲಿ ಭೂಮಿಗೆ ಎಷ್ಟು ಬೆಲೆ ಇದೆಯೋ ಬಂಗಾರಕ್ಕೂ ಅಷ್ಟೇ ಬೆಲೆ ಇದೆ. ಒಂದು ವೇಳೆ ಬಂಗಾರಕ್ಕೆ ಕಡಿಮೆ ಬೆಲೆ ಇರಬಹುದು ಒಂದು ಸ್ಕೀಂನ್ನು ತೆಗೆದುಕೊಂಡರೆ ೩ ಕೋಟಿ ರೂಪಾಯಿಗಳಿಂದ ಹಿಡಿದು ೧೫ ಕೋಟಿ ರೂಪಾಯಿಯ ವರೆಗೂ ಆಗುತ್ತದೆ. ಆ ಸ್ಕೀಂ ಗಾತ್ರದ ಪ್ರಕಾರ ಆಗುತ್ತದೆ. ಜಮೀನಿನ ಬೆಲೆ ಶೇಕಡ ೫೦ ರಷ್ಟು ನೀರಿನ ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಶೇಕಡ ೩೦ ರಷ್ಟು ಒಟ್ಟು ೮೦ ಪರ್ಸೆಂಟ್ ಉಳಿದದ್ದು ಎಲೆಕ್ಟ್ರಿಸಿಟಿ ಮತ್ತು ಸಿವಿಲ್ ಕೆಲಸಗಳಿಗೆ ಹೋಗುತ್ತದೆ. ಇದು ಈಗಿರತಕ್ಕಂಥ ಪರಿಸ್ಥಿತಿ. ಇದೂ ನಿಯಂತ್ರಣದಲ್ಲಿರುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಅಧಿಕಾರ ಹೆಚ್ಚಿನ ಹಣಕಾಸಿನ ಅಧಿಕಾರ ಈಗಿನ ಸಂದರ್ಭಗಳಿಗೆ ಅನುಗುಣವಾಗಿದೆ. ಇನ್ನು ಏನೂ ಇಲ್ಲ. ನಿರಂಕುಶ ರೀತಿಯಲ್ಲಿ ಅವರು ನಡೆದುಕೊಳ್ಳುವುದಕ್ಕೆ ಅವಕಾಶ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಒಪ್ಪುತೇನೆ. ಡಿ-ನೋಟೀಫಿಕೇಷನ್ ರಿ-ಕನ್ವೆಯೆನ್ಸ್ ಬಗ್ಗೆ ಪ್ರತ್ಯೇಕವಾಗಿ ಕೇಳಿದ್ದಾರೆ. ಇದು ಅವ್ಯಾಹತವಾಗಿ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಸರ್ಕಾರದವರು ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಪ್ರಕಾರ ಜಮೀನನ್ನು ಸ್ವಾಧೀನ ತೆಗೆದುಕೊಳ್ಳುವುದು. ತೆಗೆದುಕೊಂಡಿದ್ದನ್ನು ರೀ-ಕನ್ವೆ ಮಾಡುತ್ತಿರುವುದು. ಹೀಗಾಗಿ ಬಿ.ಡಿ.ಎ. ನಲ್ಲಿ ಬಡ ಜನರಿಗಾಗಲೀ, ಮಧ್ಯಮ ವರ್ಗದವರಿಗಾಗಲೀ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ನಿವೇಶನಗಳನ್ನು ಕೊಡತಕ್ಕಂಥ ಪರಿಸ್ಥಿತಿ ಸಾಧ್ಯವಾಗಿಲ್ಲ.

ಶ್ರೀ ಬಸವಲಿಂಗಪ್ಪ.—What is the Consideration ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಎಕ್ಸಿಕ್ಯೂಟಿವ್ ಆರ್ಡರ್ ಮುಖಾಂತರ ಇದನ್ನು ಸ್ಟೇ ಮಾಡಿದ್ದೇವೆ. ಸ್ಟೇ ಮಾಡುವುದಕ್ಕೆ ಕಾರಣ ಹೈಕೋರ್ಟಿನವರು ರೀ-ಕನ್ವೆಯನ್ಸ್ ಅಥವಾ ಡಿ-ನೋಟಿಫೈ ಮಾಡುವುದಕ್ಕೆ ಬಿ.ಡಿ.ಎ.ಗೆ ಅಧಿಕಾರ ಇಲ್ಲವೆಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಆ ತೀರ್ಮಾನದ ಆಧಾರದ ಮೇಲೆ ಯಾವುದನ್ನು ರೀ-ಕನ್ವೆ ಮಾಡಬೇಡಿ ಮತ್ತು ಡಿ-ನೋಟಿಫೈ ಮಾಡಬೇಡಿ ಎಂದು ಎಲ್ಲವನ್ನೂ ಸ್ಟೇ ಮಾಡಿ ಎಂದು ಮಾಡಿದ್ದೇವೆ. ಅದು ಅಲ್ಲಿಗೆ ನಿಂತಿದೆ. ಮುಂದಿನ ನಿಯಂತ್ರಣದ ಕೆಲಸ ನಡೆಯುತ್ತಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಸಾರ್ವಜನಿಕ ಉಪಯೋಗಕ್ಕೆ ತೆಗೆದುಕೊಂಡಂಥ ಜಮೀನನ್ನು ಭೂ ಸ್ವಾಧೀನ ಕಾಯಿದೆ ಪ್ರಕಾರ ಸ್ವಾಧೀನ ಪಡಿಸಿಕೊಂಡಂಥ ಜಮೀನನ್ನು ಸಾರ್ವ ಜನಿಕರು ಉಪಯೋಗ ಆಗತಕ್ಕ ರೀತಿಯಲ್ಲಿ ಅದನ್ನು ನಿಯೋಜಿಸಿ ಕೊಳ್ಳಬೇಕು ಎನ್ನುವ ಒಂದು ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ನಡೆಯುವುದಕ್ಕೆ ಇದು ಸಹಾಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಕೊನೆಯ ಮಾತನ್ನು ಸನ್ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಈ ನಿಮ್ನವರ್ಗದವರಿಗೆ ನೀವು ಸೈಟುಗಳನ್ನು ಕೊಡಬೇಕು ಎಂದು ಹೇಳಿದರು. ೧೯೮೪ನೇ ಇಸವಿಯಲ್ಲಿ ನಾವು ತಯಾರು ಮಾಡಿದಂಥ ನಿಯಮಾವಳಿಗಳ ಪ್ರಕಾರ ತಲಾ ಪ್ರತಿಶತ ೧೫ರಷ್ಟು ಎಸ್.ಸಿ ಮತ್ತು ಎಸ್.ಟಿ.ಗಳಿಗೆ ಕೊಡಬೇಕು ಎಂದು ಮಾಡಿದ್ದೇವೆ. ವೀಕರ್ ಸೆಕ್ಷನ್‌ಗಳಿಗೆ ಬೇರೆ ಕೋಟಾ ಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಶೇಕಡಾ ೧೫ರಷ್ಟು ಎಸ್.ಸಿ. ಮತ್ತು ಎಸ್.ಟಿ.ಗಳಿಗೆ ಕೊಡಬೇಕೆಂದು ಮಾಡಿದ್ದೇವೆ. ಆದ್ದರಿಂದ ಇದರಲ್ಲಿ ಒಟ್ಟು ಮೊತ್ತದಲ್ಲಿ ಈ ತಿದ್ದುಪಡಿಗಳ ಮುಖ್ಯ ಉದ್ದೇಶ ಹೆಚ್ಚು ಪರಿಣಾಮಕಾರಿಯಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೆಲಸ ಮಾಡುವ ದೃಷ್ಟಿಯಿಂದ ಹಣಕಾಸಿನವರನ್ನು ಬೆಲೆ ಹೆಚ್ಚಳದ ಕಾರಣದಿಂದ ಅವರಿಗೆ ಜಾಸ್ತಿ ಮಾಡಿದ್ದೇವೆ. ಎರಡನೆಯದು ಬಿ.ಡಿ.ಎ ಅಥಾರಿಟಿಯವರು ನಿಯಂತ್ರಣದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎನ್ನುವ ದೃಷ್ಟಿಯಿಂದ ಆ ನಿಯಂತ್ರಣವನ್ನು ಹಾಕತಕ್ಕಂಥ ಅಧಿಕಾರವನ್ನು ಸರ್ಕಾರ ತೆಗೆದುಕೊಂಡಿದೆ. ಕಾನೂನು ವಿರುದ್ಧವಾಗಿ ನಡೆಯುವುದನ್ನು ತಪ್ಪಿಸುವುದಕ್ಕೆ ಈ ನಿಯಂತ್ರಣದಲ್ಲಿ ಸೂಚಿಸಲಾಗಿದೆ. ಆದ್ದರಿಂದ ಇದು ಯಾವ ತತ್ವಕ್ಕೂ ವಿರುದ್ಧ ಇಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಅನುಭವದ ಹಿನ್ನೆಲೆಯಲ್ಲಿ ಈ ತಿದ್ದುಪಡಿಗಳನ್ನು ಮಾಡಿದ್ದೇವೆ. ಸನ್ಮಾನ್ಯ ಶ್ರೀನಿವಾಸ್‌ರವರು ನೀವು ಒಂದೇ ಸಲ ಏತಕ್ಕೆ ಒಂದೇ ಸಾರಿ ಒಳ್ಳೆಯ ಕಾನೂನು ಮಾಡಬಾರದು ಎಂದು ನಿನ್ನೆಯೂ ಹೇಳಿದರು, ಇವತ್ತು ಸಹಾ ಅದನ್ನೇ ಹೇಳಿದ್ದಾರೆ. ನಿನ್ನೆ ಉತ್ತರವನ್ನು ಇವತ್ತು ಹೇಳುವುದಕ್ಕೆ ಹೋಗುವುದಿಲ್ಲ. ನಿನ್ನೆ ಭಾಷಣ ಮಾಡಿದ ಮೇಲೆ ಹೊರಟು ಹೋದರು. ನನ್ನ ಉತ್ತರವನ್ನು ಅವರು ಕೇಳಲಿಲ್ಲ. ಎಲ್ಲಾ ಚಿಂತನೆ ಹಾಗೆ ಆಗುವುದಿಲ್ಲ. ಬೆಳೆಯುತ್ತಿರತಕ್ಕಂಥ ಸಮಾಜದಲ್ಲಿ ಕಾನೂನುಗಳ ವ್ಯತ್ಯಾಸವನ್ನು ನಾವು ಮಾಡಬೇಕಾಗುತ್ತದೆ. ಆ ರೀತಿ ಕಾನೂನುಗಳಲ್ಲಿ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಇನ್ನೊಂದು ವಿಚಾರವನ್ನು ಅವರು ಹೇಳಿದರು ನೀವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಸಮಗ್ರವಾದಂತಹ ತಿದ್ದುಪಡಿ ಮಸೂದೆಯನ್ನು ತರಬೇಕೆಂದು ಹೇಳಿದರು. ಅದನ್ನು ಯೋಚನೆ ಮಾಡೋಣ. ಇನ್ನು ಹಲವಾರು ನ್ಯೂನತೆಗಳು ಇವೆ. ಅದನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ತನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಉತ್ತಮವಾದಂಥ ಕಾನೂನು ತರುವುದರ ಬಗ್ಗೆ ಹೇಗೆ ಮಾಡಬೇಕು ಎನ್ನುವುದನ್ನು ವಿಚಾರ ಮಾಡೋಣ. ತಮ್ಮ ಮುಂದೆ ಅದನ್ನು ತರಬೇಕಾಗುತ್ತದೆ. ವಿಚಾರ ಮಾಡಿದ ಮೇಲೆ ಇದರ ಬಗ್ಗೆ ಚಿಂತನೆ ಮಾಡುತ್ತೇವೆ ಎಂಬ ಮಾತನ್ನು ಸನ್ಮಾನ್ಯ ಸದಸ್ಯರಿಗೆ ಹೇಳಿ ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕು ಎಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸೈಟುಗಳನ್ನು ಕೊಡುವ ಬಗ್ಗೆ ಹೇಳಿದರು. ನಾನು ಹೇಳಿದೆ, ೨೦ ಪರ್‌ಸೆಂಟ್ ಅವರಿಗೋಸ್ಕರ ಮೀಸಲಿಟ್ಟಿದ್ದೆವು ಅದರ ಬೆಲೆಯನ್ನು ಆರು ವರ್ಷಗಳ ಕಾಲ ಕಂತಿನ ರೂಪದಲ್ಲಿ ಅವರಿಂದ ವಸೂಲು ಮಾಡಬೇಕೆಂದು ಹಿಂದೆ ನಿಯಮವನ್ನು ಮಾಡಿದ್ದೆವು: ನೀವು ಇದರ ಬಗ್ಗೆ ಉತ್ತರ ಕೊಡಲಿಲ್ಲ.ಅದನ್ನು ಹೇಳಬೇಕು. ಆಮೇಲೆ ಬೆಂಗಳೂರು ಸಿಟಿಯಲ್ಲಿ ಅನೇಕ ಬಡಾವಣೆಗಳಲ್ಲಿ ಎಕರೆಗಟ್ಟಲೆ ಸಿ.ಎ. ಸೈಟುಗಳನ್ನು ಬಿಟ್ಟಿದ್ದರು. ಮಕ್ಕಳ ಆಟ ಪಾಠಕ್ಕೆ ಮತ್ತು ಇತರ ನಿವಾಸಿಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇಟ್ಟಿದ್ದರು. ಅದೆಲ್ಲವನ್ನು ಸೈಟುಗಳನ್ನು ಮಾಡಿ ಮಾರಿಕೊಂಡು ಬಿಟ್ಟಿದ್ದಾರೆ. ಇದರ ಬಗ್ಗೆ ನೀವು ಉತ್ತರ ಕೊಡಲಿಲ್ಲ ದಯಮಾಡಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಸಾರ್ವಜನಿಕ ಉಪಯೋಗಕ್ಕೆ ಇಟ್ಟಿರತಕ್ಕಂಥ ಖಾಲಿ ನಿವೇಶನಗಳನ್ನು ಪರಭಾರೆ ಮಾಡಬಾರದು ಎಂದು ಕ್ರಮ ತೆಗೆದುಕೊಂಡಿದ್ದೇವೆ. ಒಂದೆರಡು ಸಂದರ್ಭದಲ್ಲಿ ವಿದ್ಯಾಸಂಸ್ಥೆಗಳು ಅಥವಾ ಬಡಜನರಿಗೆ ಸಹಾಯ ಮಾಡುವುದಕ್ಕೋಸ್ಕರ ಆಸ್ಪತ್ರೆ ಇತ್ಯಾದಿಯನ್ನು ನಾವು ಕಟ್ಟುತ್ತೇವೆ ಎಂದು ಸಂಸ್ಥೆಗಳವರು ಮುಂದೆ ಬಂದ ಸಮಯದಲ್ಲಿ ಒಂದೆರಡು ಉದಾಹರಣೆಗಳನ್ನು ಕೊಟ್ಟಿರುವಂಥದ್ದನ್ನು ನೆನಪಿನಲ್ಲಿಟ್ಟುಕೊಂಡು ಅಂಥ ಸಮಯದಲ್ಲಿ ಅಂಥ ಸೈಟುಗಳನ್ನು ಕೊಟ್ಟಿದ್ದೇವೆ. ಆದರೆ ಬಹುಮಟ್ಟಿಗೆ ತಮ್ಮ ತತ್ವವನ್ನು ಇಟ್ಟುಕೊಂಡಿದ್ದೇವೆ. ೧೫ ಪರ್‌ಸೆಂಟ್ ಎಂದು ಹೇಳಿದೆ. ಆದರೆ ರೂಲ್ಸ್ ಪ್ರಕಾರ ಅದು ೧೮ ಪರ್‌ಸೆಂಟ್.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ :

"೧೯೮೬ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

೨ ಮತ್ತು ೩ನೇ ಖಂಡಗಳು :—

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ :

"೨ ಮತ್ತು ೩ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು"

(ಪ್ರಸ್ತಾವ ಅಂಗೀಕೃತವಾಯಿತು. ಖಂಡ ೨ ಮತ್ತು ೩ (ಎರಡೂ ಸೇರಿದಂತೆ) ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ — ೪

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಮತ್ತು ಶ್ರೀ ಎಂ. ಎಸ್. ಕೃಷ್ಣನ್ ಅವರು ಈ ಬಗ್ಗೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ವೆಂಕಟರಾಮಯ್ಯ.—ನನ್ನ ತಿದ್ದುಪಡಿ ಹೀಗಿದೆ :

"That in item (a) of sub-clause (2), for the words "Twenty lakhs", the words "Ten lakhs" shall be substituted; In item (b) of sub-clause (2), for the words "Fifty lakhs" the words "Twenty five lakhs" shall be substituted".

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ವೆಂಕಟರಾಮಯ್ಯ.—ಈಗ ರೂಪಾಯಿಗೆ ೧೬ ಪೈಸೆ ಬೆಲೆ. ಅದನ್ನು ಕ್ಯಾಲುಕುಲೇಟ್ ಮಾಡಿದರೂ ೧ ಲಕ್ಷ ಇರುವುದನ್ನು ೫ ಲಕ್ಷ ರೂಪಾಯಿ ಮಾಡಬಹುದು. ಆದರೆ ಇಲ್ಲಿ ೨೦ ಲಕ್ಷ ಮಾಡಿದ್ದಾರೆ. ತಾವು ಅವರಿಗೆ ವಿಪರೀತ ಅಧಿಕಾರ ಕೊಡುವುದು ಬೇಡ. ಇದ ವಿಪರೀತವಾಗಿ ಅರ್ಬಿಟ್ರೇಟ್‌ರಿ ಆಯಿತು. ೨೦ ಲಕ್ಷ, ೫೦ ಲಕ್ಷದವರೆಗೆ ಒಬ್ಬ ಅಧಿಕಾರಿಗೆ ಅಧಿಕಾರ ಕೊಡುವುದು ಎಂದರೆ ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ಕೆಟ್ಟ ಅಧಿಕಾರಿ ಬಂದರೆ ಕಷ್ಟವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಬೆಂಗಳೂರಿನಲ್ಲಿರತಕ್ಕ ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಭೂಮಿ ಬೆಲೆ ಮತ್ತು ಬೇರೆ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿಗದಿ ಮಾಡಿದಮೇಲೆ ಬೇಕಾಗಿರತಕ್ಕ ಇತರ ಸಲಕರಣೆಗಳನ್ನು ಕೊಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬ ಬಗ್ಗೆ ಶೇಕಡಾವಾರು ವಿವರಣೆ ಕೊಟ್ಟಿದ್ದೇವೆ. ಇದು ಹೆಚ್ಚು ಎಂದು ಕಾಣಿಸುವುದಿಲ್ಲ. ಇಲ್ಲದೇ ಹೋದರೆ ಅಭಿವೃದ್ಧಿ ಪ್ರಾಧಿಕಾರದ ಕೆಲಸ ಕುಂಠಿತವಾಗುತ್ತದೆ.

SRI M. S. KRISHNAN.—I beg to move the following amendment;

"In item (a) of sub-clause (2) for the words "Twenty Lakhs" the words "Five Lakhs" shall be substituted ; In item (b) of sub-clause (2), for the words "Fifty Lakhs", the words "Twenty-five lakhs" shall be substituted."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಹೆಚ್ಚು ಮಾತನಾಡಬೇಕಾದ ಪ್ರಮೇಯ ಇಲ್ಲ. ಈಗಾಗಲೇ ಜಾಸ್ತಿ ಮಾತನಾಡಿದ್ದಾರೆ. ತತ್ವಶಃ ನಾವು ಒಂದು ಒಪ್ಪಿದ್ದೇವೆ. ೧೯೭೭ರಲ್ಲಿ ಮಾಡಿದ್ದು ೧ ಲಕ್ಷ ರೂಪಾಯಿ ಕಡಿಮೆ ಆಯಿತೆಂದು ೫ ಪಟ್ಟು ಜಾಸ್ತಿ ಮಾಡುವುದಕ್ಕೆ ತಿದ್ದುಪಡಿ ತಂದಿದೆ. ಇದು ನ್ಯಾಯವಾಗಿದೆ. ಒಪ್ಪಿಕೊಂಡರೆ ಒಳ್ಳೆಯದು. ಎರಡನೆಯದು ನಿಯಂತ್ರಣ ಇಟ್ಟುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದು ಎಷ್ಟು ದೂರ ಇರುತ್ತದೆಯೋ ನಮಗಂತೂ ಗೊತ್ತಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಇರುವವರೆಗೂ ಇರಬಹುದೋ ಏನೋ ನಮಗೆ ಗೊತ್ತಿಲ್ಲ. ಯಾವಾಗ ಏನಾಗುತ್ತದೆಯೋ ಎಂಬುದು ಅನುಮಾನದ ವಿಷಯ. ಆದ್ದರಿಂದ ನನ್ನ ತಿದ್ದುಪಡಿಯನ್ನು ಪ್ರೆಸ್ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಕೊಟ್ಟಿದ್ದೇನೆ. ಇದು ಅಂಗೀಕಾರಾರ್ಹವಾದ ತಿದ್ದುಪಡಿಯಲ್ಲ. ಮಾನ್ಯ ಸದಸ್ಯರು ವಾಪಸ್ ಪಡೆಯಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಏನು ಮಾಡುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಓಟಿಗೆ ಹಾಕಿ. ನಮಗೆ ಗೊತ್ತಿದೆ ಫೇಟ್.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಮತ್ತು ಕೃಷ್ಣನ್ ಅವರು ತಂದಿರುವ ತಿದ್ದುಪಡಿಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"That in item (a) of Sub-Clause (2) for the words "Twenty lakhs", the words "Ten lakhs" shall be substituted ;

In Item (b) of Sub-Clause (2), for the words "Fifty lakhs", the words "Twenty five lakhs" shall be substituted.

AND

In Item (a) of Sub-Clanse (2) for the words "Twenty lakhs", the words "Five lakhs" shall be substituted.

In item (b) of Sub-Clause (2) for the words "Fifty lakhs." the words "Twenty five lakhs" shall be substit ted."

ತಿದ್ದುಪಡಿಗಳು ತಿರಸ್ಕೃತವಾದವು

ಅಧ್ಯಕ್ಷರು.—ಈಗ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಹೀಗಿದೆ :
"೪ನೇ ಖಂಡವು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾಪಕ್ಕೆ ಒಪ್ಪಿಗೆ ದೊರಕಿತು. ೪ನೇ ಖಂಡವು ವಿಧೇಯಕದ ಅಂಗವಾಯಿತು.

ಖಂಡ — ೫

ಅಧ್ಯಕ್ಷರು.—ಇದಕ್ಕೆ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಮತ್ತು ಎಂ. ಎಸ್. ಕೃಷ್ಣನ್ ಅವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸಬೇಕು. ಏನು ಮಾಡುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ.—ನಾನು ಮಂಡಿಸುತ್ತೇನೆ ಸ್ವಾಮಿ.

ಅಧ್ಯಕ್ಷರು.—ಮಂಡಿಸಿ.

ಶ್ರೀ ವೆಂಕಟರಾಮಯ್ಯ.—ನನ್ನ ತಿದ್ದುಪಡಿ ಹೀಗಿದೆ :

After the proviso to Clause 5, the follfwing new proviso shall be inserted :

"Provided the Commissioner shall have the right to interfere and write to the Government in case the resolution is *ab-initio void* in law, and not otherwise."

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕೃಷ್ಣನ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕು.

Sri **M. S. Krishnan**.—Sir, For the Clause 5, the following three provisos shall be subs ituted.

"Provided that if in the opinion of the both the Commissioner and Chairman any resolution of the Authority contravenes any provision of the Act of any other law or of any rule, notification or bye-law made of issued under this Act. refer within a week of passing the resolution, the matter to the Government for orders.

Provided further that if no order is received from the Government oy the Authority within a month of receipt of the reference, it shall be deemed that the resolution is valid and has to be implemented.

Provided further that such resolution which are referred to the Government for orders shall not be given effect for the period mentioned above."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಸ್ವಲ್ಪ ಮಾತನಾಡಬೇಕು. ಇದರಲ್ಲಿ ಎರಡು ಮೂರು ವಿಷಯಗಳನ್ನು ಹೇಳಬೇಕಾಗಿದೆ. ಇದಕ್ಕೂ ಮಾನ್ಯ ಮಂತ್ರಿಗಳು ಮಂಡಿಸಿರುವ ತಿದ್ದುಪಡಿಗೂ ವ್ಯತ್ಯಾಸ ಕಂಡುಬರುತ್ತದೆ. ಅವರ ತಿದ್ದುಪಡಿ ಏನಿದೆ ಎಂದರೆ ಕಮಿಷನರ್ ಅವರು ಅದನ್ನು ಸರ್ಕಾರಕ್ಕೆ ಕಳುಹಿಸಬೇಕು. ಸರ್ಕಾರಕ್ಕೆ ಕಳುಹಿಸಿದ ಮೇಲೆ ಕಮಿಷನರ್ ಜಾರಿಗೆ ತರಬೇಕಾಗಿಲ್ಲ ಎಂದು ಇದೆ. ನಾನು ಹೇಳಿರುವುದೇನೆಂದರೆ ಇಬ್ಬರಿಗೂ ಜವಾಬ್ದಾರಿ ಕೊಡಬೇಕು. ಛೇರ್ಮನ್ ಮತ್ತು ಕಮಿಷನರ್ ಇಬ್ಬರಿಗೂ ಜವಾಬ್ದಾರಿ ಕೊಡಬೇಕು. ಅವರು ಡಿಸ್‌ಕಸ್ ಮಾಡಿದ ಮೇಲೆ ಕಾನೂನು ವಿರುದ್ಧವಾಗಿದೆ ಅನ್ನಿಸಿದರೆ ಇಬ್ಬರೂ ಸರ್ಕಾರಕ್ಕೆ ರೆಫರ್ ಮಾಡಲಿ. ಒಂದು ವಾರದಲ್ಲಿ ಸರ್ಕಾರಕ್ಕೆ ರೆಫರ್ ಮಾಡಲಿ. ಸರ್ಕಾರಕ್ಕೆ ಒಂದು ತಿಂಗಳವರೆಗೆ ಟೈಂ ಕೊಡೋಣ. ಒಂದು ತಿಂಗಳಲ್ಲಿ ಒಪ್ಪಿಕೊಂಡಿದ್ದಾರೋ ಇಲ್ಲವೋ ಎಂದು ಹೇಳಲಿ. ಟೈಂ ಏನೂ ಇಲ್ಲದೇ ಹೋದರೆ ಸರ್ಕಾರದಲ್ಲಿ ನಿಧಾನವಾದರೆ ಅದು ಜಾರಿಗೆ ಬಂದಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇದರಿಂದ ನಿಮ್ಮ ತತ್ವ ಉಳಿಯುತ್ತದೆ. ಕೆಲವು ಸಮಯ ತಪ್ಪು ಮಾಡಿದರೆ ಮೇಲಕ್ಕೆ ಕಳುಹಿಸಬೇಕು ಎಂದು ಹೇಳಿದಂತಾಗುತ್ತದೆ. ಸರ್ಕಾರವೂ ಶೀಘ್ರವಾಗಿ ಕೆಲಸ ಮಾಡಬೇಕಾಗುತ್ತದೆ. ಮೂರನೆಯದಾಗಿ ಇಲ್ಲಿ ಅದು ಬ್ಲಾಕ್ ಆಗುವುದಿಲ್ಲ. ಇದರಿಂದ ಒಬ್ಬರೇ ತೀರ್ಮಾನ ಮಾಡದೆ ಕಮೀಷನರ್ ಮತ್ತು ಛೇರ್ಮನ್ನರು ಇಬ್ಬರಿಗೂ ಒಂದು ಅಥಾರಿಟಿ ಕೊಟ್ಟಂತಾಗುತ್ತದೆ. ಛೇರ್ಮನ್ನರು ಪ್ರತಿಯೊಂದು ಮೀಟಿಂಗ್‌ನಲ್ಲೂ ಹಾಜರಿರುತ್ತಾರೆ. ಆದ್ದರಿಂದ ಅವರಿಗೆ ಏನೇನು ನಡೆಯುತ್ತದೆ ಎಂಬುದು ಎಲ್ಲವೂ ಗೊತ್ತಿರುತ್ತದೆ. ಆಗ ಆಳವಾಗಿ ಅಭ್ಯಾಸಮಾಡಿ ಒಂದು ಅಭಿಪ್ರಾಯಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ. ಒಬ್ಬರಿಗೇ ಜವಾಬ್ದಾರಿ ಕೊಡುವುದು ಸರಿಯಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡುವಾಗ ಬಹಳ

ಒಳ್ಳೆಯದು, ತಪ್ಪೇನೂ ಇಲ್ಲ ಎಂದು ಹೇಳಿದರು. ಕ್ಲಾಸ್ ೧೩ (ಜಿ) ಪ್ರಕಾರ ಕಮಿಷನರ್ ಕಳುಹಿಸುವುದಕ್ಕಾಗುವುದಿಲ್ಲ ಎಂಬ ಪ್ರಶ್ನೆ ಇಲ್ಲ. ಸರ್ಕಾರಕ್ಕೆ ಅಧಿಕಾರ ಈಗಾಗಲೇ ಇದೆ. ಕ್ಲಾಸ್ ೧೩ (ಜಿ) ನಲ್ಲಿ ಏನಿದೆ ಎಂದರೆ :

Powers and Duties of the Commissioner :—

(2) The Commissioner shall in addition to performing such functions as are conferred on him by or under this Act or under any law for the time being in force.

(g) "Funish to the Government a copy of the minutes, proceedings to the Government from time to time etc."

ಇದರಲ್ಲಿ ಸರ್ಕಾರದವರು ಆಗಿಂದಾಗ್ಗೆ ಕೇಳುವಂಥ ಮಿನಟ್ಸ್ ರೆಕಾರ್ಡ್ಸ್ ಕಳುಹಿಸಬೇಕೆಂದು ಹೇಳಲಾಗಿದೆ. ಅದರ ಜವಾಬ್ದಾರಿ ಕಮಿಷನರ್ ಅವರದು. ಸರ್ಕಾರದವರೇ ರೂಲ್ ಮಾಡಬಹುದು. ಟೈಂ ಟು ಟೈಂ ಕಳುಹಿಸಿ ಎನ್ನುವ ಬದಲು ಇಷ್ಟಬಂದಾಗ ಕಳುಹಿಸಿ ಎಂದು ಹೇಳಬಹುದು. ನಿರ್ಣಯವನ್ನು ಮಾಡಿದ ತಕ್ಷಣ ಕಳುಹಿಸುವ ಅವಕಾಶ ಈಗಲೂ ಇದೆ. ಅವರು ಕಳುಹಿಸಿದರೆ ರಿಕ್ವೈರ್‌ಮೆಂಟ್ ಮೀಟ್ ಆಗುತ್ತದೆ. ಸರ್ಕಾರ ಅದರ ವಿರುದ್ಧ ಅಥವಾ ಪರವಾಗಿ ತೀರ್ಮಾನ ಮಾಡಬಹುದು. ಇದರಿಂದ ಸರ್ಕಾರಕ್ಕೂ ಅಧಿಕಾರ ಕೊಟ್ಟಂತಾಗುತ್ತದೆ, ಕಮಿಷನರ್ ಮತ್ತು ಛೇರ್ಮನ್ನರಿಗೂ ಅಧಿಕಾರ ಕೊಟ್ಟಂತಾಗುತ್ತದೆ. ಕಾಲಮಿತಿ ಇರುವುದರಿಂದ ಜನರಿಗೂ ಅನುಕೂಲವಾಗುತ್ತದೆ. ಸರ್ವದೃಷ್ಟಿಯಿಂದ ಈ ತಿದ್ದುಪಡಿ ತಂದಿದ್ದೇನೆ. ಆದ್ದರಿಂದ ಮಾನ್ಯ ಲಕ್ಷ್ಮೀಸಾಗರ್ ಅವರು ಇದನ್ನು ಒಪ್ಪಿಕೊಳ್ಳಬೇಕು. ನಾನು ಹೇಳಿದ್ದೇ ವೇದವಾಕ್ಯ ಎಂದು ಅವರು ಹೇಳುವುದು ಬೇಡ. ತಪ್ಪಿದ್ದರೆ ಹೇಳಿ.

೫–00 ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಮೊದಲ ಕಾರಣವೇನೆಂದರೆ, ಕಮಿಷನರು ಮತ್ತು ಚೇರ್ಮನ್‌ರು ಒಪ್ಪಿಕೊಂಡು ಅವರು ಏನಾದರೂ ತೀರ್ಮಾನಕ್ಕೆ ಬಂದರೆ ಏನೂ ತೊಂದರೆ ಇಲ್ಲ ಎಂದು ಇಬ್ಬರೂ ಒಪ್ಪದೇ ಹೋದರೆ ? ಆದುದರಿಂದ ಅಮೂಲಾಗ್ರವಾಗಿ ನಿರ್ಣಯಗಳನ್ನು ಮಾಡಿದಾಗ ಸರ್ಕಾರಕ್ಕೆ ಕಳುಹಿಸಬಹುದು. ಸರ್ಕಾರ ಅದನ್ನು ಕ್ಯಾನ್ಸಲ್ ಮಾಡಬೇಕಾದರೆ, ಮಾಡಿಫೈ ಮಾಡಬೇಕಾದರೆ ೧೫ ದಿವಸಗಳ ಒಳಗೆ ಸರಿಯಾದ ಉತ್ತರ ಪ್ರಾಧಿಕಾರಕ್ಕೆ ಹೋಗಲು ಅದರಂತೆ ಸರ್ಕಾರ ನೋಡಿಕೊಳ್ಳಬಹುದು ಅಥವಾ ಅದನ್ನು ಕ್ಯಾನ್ಸಲ್ ಮಾಡಬಹುದು. ಅದನ್ನೇ ಈಗ ತೆಗೆದುಕೊಳ್ಳಲು ಹೊರಟಿರುವುದು. ಈಗ ೧೩(ಜಿ)ನಲ್ಲಿ usual furnishing of information ೪ ವರ್ಷ ಆದ ನಂತರ, ೨ ವರ್ಷ ಆದ ನಂತರ ಬರಬಹುದು. after the mischief has been done ಬರಬಹುದು. ಆಯಾ ಸಮಯದಲ್ಲಿ ಆದ ನಿರ್ಣಯದ ಮೇಲೆ ಸರ್ಕಾರ ಪವರ್ ಆಫ್ ಸೂಪರಿಂಟೆಂಡೆನ್ಸ್ ಇಟ್ಟುಕೊಳ್ಳಬೇಕೆನ್ನುವ ಕಾರಣಕ್ಕೆ ಮಾಡಿದ್ದೇವೆ. ಒಂದೊಂದು ನಿರ್ಣಯದಲ್ಲೂ ಕೋಟಿಗಟ್ಟಲೆ ಹಣ ಇರಬಹುದು. ಇದನ್ನು ಮೇಲಿಂದ ನೋಡಿದಾಗ ಗೊತ್ತಾಗುವುದಿಲ್ಲ. ಇದು ಒಂದೇ ತೆಗೆದುಕೊಳ್ಳಿ. ೧೯೭೨ರಲ್ಲಿ, ೧೯೭೦ರಲ್ಲಿ ೧೯೭೪ರಲ್ಲಿ ಅಕ್ವೈರ್ ಆಗಿರುವುದನ್ನು ೧೯೮೬ರಲ್ಲಿ ಡೀನೋಟಿಫೈ ಮಾಡಿ ಅವರಿಗೇ ವಾಪಸ್ಸು ಕೊಡಿ ಎನ್ನುವ ಒಂದು ಸಣ ಉದಾಹರಣೆ ಕೊಟ್ಟಿದ್ದೇನೆ. ನಮಗೆ ಎಲ್ಲಾ ಗಮನಕ್ಕೆ ಬರುವುದಿಲ್ಲ. ಗಮನಕ್ಕೆ ಬರದೇ ಎಷ್ಟೋ ಇರಬಹುದು. ಅದಕ್ಕೇ ನಾನು ಆಗಲೇ ಈ ಬಿ.ಡಿ.ಎ. ಒಂದು ಅಂಡಮಾನ್ ದ್ವೀಪ ಇದ್ದಂತೆ ಎಂದು ಹೇಳಿದೆ. ಎಂದರೆ ಈಗಿನ ಅಂಡಮಾನ್ ಅಲ್ಲ, ಹಿಂದೆ ಲೋಕಮಾನ್ ತಿಲಕ್ ಇದ್ದಾಗ ಇದ್ದಂತಹ ದ್ವೀಪ. ಆರೀತಿ ಆಗಬಾರದು, ಸರ್ಕಾರಕ್ಕೆ ಎಂದು ನಾವು ಇದನ್ನು ತರುತ್ತಿರುವುದು ?

ಶ್ರೀ ಎಂ. ಎಸ್. ಕೃಷ್ಣನ್.—ನೀವು ತಂದಿರುವ ತಿದ್ದುಪಡಿ ಪ್ರಕಾರ ಅದು ಆಗುವುದಿಲ್ಲವಲ್ಲಾ?

ಶ್ರೀ ಎ. ಲಕ್ಷ್ಮೀಸಾಗರ್.—ಆದುದರಿಂದ ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಸ್ವಾಮಿ.

ಶ್ರೀ ಎಂ, ಎಸ್. ಕೃಷ್ಣನ್.—ಅಧ್ಯಕ್ಷರೇ, ಈಗ......

ಅಧ್ಯಕ್ಷರು.—ಒಪ್ಪುವುದಕ್ಕಾಗುವುದಿಲ್ಲವೆಂದಿದ್ದಾರೆ. ತಾವು ದಯವಿಟ್ಟು ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೇನು ಮಾಡುವುದು, ಗೋರ್ಕಲ್ ಮೇಲೆ ಮಳೆಗರೆದಂತೆ.

ಅಧ್ಯಕ್ಷರು.—ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

Mr. Speaker.—I will now put the amendment moved by hon'ble member Sri Venkataramaiah to the vote of the House. The question is:

> "After the proviso to Clause 5, the following new proviso shall be inserted Provided the Commissioner shall have the right to interfere and write to the Government in case the resolution is *ab-initio void* in law, and not otherwise."

The amendment was negatived

Mr. Speaker.—I will now put the amendment moved by hon'ble Member Sri M. S. Krishnan to the vote of the House.

The question is:

> "For the Clause 5, the following three proviso shall be substituted.
>
> Provided that if in the oainion of both the Commissioner and Chairman any reslution of the Authority contravenes any provision of the Act of any other law or of any rule, notification or bye-law made or issued under this Act, refer within a week of passing the resolution, the matter to the Government for orders.
>
> Provided further that if no order is received from the Government by the Authority within a month of receipt of the reference, it shall be deemed that the resolution is valid and has to be implemented.
>
> Provided further that such resolution which are referred to the Government for orders shall not be given effect for the perioo mentioned above.

The amendment was negatived.

ಅಧ್ಯಕ್ಷರು.—ಪ್ರಸಾವ ಏನೆಂದರೆ "೫ನೇ ಖಂಡವು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೫ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೬ ರಿಂದ ೧೧

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ "ಖಂಡ ೬ ರಿಂದ ೧೧ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೬ ರಿಂದ ೧೧ ಎರಡೂ ಸೇರಿದಂತೆ ವಿಧೇಯಕದ ಅಂಗವಾದವು)

ಪ್ರಥಮ ಖಂಡ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸು ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್—"೧೯೮೬ನೇ ಇಸವಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕು"

SRI B. BASAVALINGAPPA.—Sir, Before you put to vote I would like to ask one question. Hon'ble Chief Minister Sri Ramakrisha Hegde is here, When he become the Chief Minister he said that he wold enquire into the affairs of the Bangalore Development Authority and he would bring a white paper and white paper was also brought. I would like to ask him a question. Whether he is going to take action against those officials and offiicers who have been found guilty by that report and then is he going to cancel all the illegal tenders ?

SRI RAMAKRISHNA HEGDE.—MR. Lakshmisagar will reply.

SRI B. BASAVALINGAPPA.—I want to tell you, not the Minister. Why are you feeling shy to face this Assembly ?

SRI RAMAKRISHNA HEGDE.—There is no reason for me to feel shy at all. ಶ್ವೇತಪತ್ರವನ್ನು ಪ್ರಕಟಿಸಿ ಈ ಸದನ ಮತ್ತು ಮೇಲ್ಮನೆಯ ಮುಂದೆ ಇಟ್ಟಿದ್ದೇವೆ. ಎನ್‌ಕ್ವಯರಿ ಮುಗಿದ ನಂತರ ಯಾವುದೇ ಅಧಿಕಾರಿ ಇದರಲ್ಲಿ ತಪ್ಪಿತಸ್ಥನೆಂದಾದ ಮೇಲೆ ಅವರ ಮೇಲೆ ಕಾಯ್ದೆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತಾರೆ. ಪ್ರಸ್ತಾವ ಏನೆಂದರೆ, "೧೯೮೬ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಸಾರ್ವಜನಿಕ ಮಹತ್ವತೆಯಿರುವ ವಿಷಯದ ಬಗ್ಗೆ ಅಲ್ಪಕಾಲಾವಧಿಯ ಚರ್ಚೆ.

ರಾಜ್ಯದ ನಾನಾಭಾಗಗಳಲ್ಲಿ ಕೋಮುವಾರು ಘರ್ಷಣೆ ನಡೆದ ಬಗ್ಗೆ

ಅಧ್ಯಕ್ಷರು.—ಈಗ ಮುಂದೆ ನಿಯಮ ೬೨ರ ಪ್ರಕಾರ ಚರ್ಚೆ. ಇದನ್ನು ನಾಳೆ ಇಟ್ಟು ಕೊಳ್ಳೋಣವೋ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಮೊನ್ನೆ ದಿನ ೩ ಗಂಟೆಗೆ ಚರ್ಚೆ ಪ್ರಾರಂಭವಾದುದು ೭ ಗಂಟೆಯವರೆಗೂ ನಡೆದಿದೆ. ಈಗ ನನ್ನ ಸಲಹೆ, ನಿಮ್ಮ ಪರಿಶೀಲನೆ ಗಾಗಿ ಇಷ್ಟೇ ಇದೆ. ಈಗ ಮಾನ್ಯ ಗೃಹಮಂತ್ರಿಗಳು ಇದರ ಬಗ್ಗೆ ತಮ್ಮ ಹೇಳಿಕೆ ನೀಡಲಿ. ನಂತರ ಅದರ ಮೇಲೆ ಮಾನ್ಯ ಸದಸ್ಯರು ವಿವರಣೆ ಕೇಳುವುದಿದ್ದರೆ ಕೇಳಲಿ. ಅದೂ ಕೂಡಾ ಪರಿಣಾಮ ಕಾರಿಯಾಗುತ್ತದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ವಿಷಯದ ಬಗ್ಗೆ ಬಹಳ ಜನರು ಮಾತನಾಡುವವರಿದ್ದಾರೆ. ಇದು ಬಹಳ ಗಂಭೀರದ ವಿಷಯ ಇದೆ.

ಅಧ್ಯಕ್ಷರು.—ಒಂದು ತೀರ್ಮಾನ ಕೊಡಬೇಕಾದರೆ ಸಭಾನಾಯಕರ ಮತ್ತು ಈ ಕಡೆಯವರ ಅಭಿಪ್ರಾಯವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ವಿಷಯವನ್ನು ನಾವು ಇಲ್ಲಿ ಚರ್ಚೆಗೆ ತೆಗೆದುಕೊಂಡ ಉದ್ದೇಶವಾದರೂ ಏನೂ ? ಆ ಉದ್ದೇಶ ಸಫಲವಾಗಬೇಕಾದರೆ ಎಲ್ಲರೂ ಮಾತನಾಡಬೇಕಾಗುತ್ತದೆ ಎರಡೂವರೆ ತಾಸು ಮಾತನಾಡಬೇಕಾಗುತ್ತದೆ. ಈಗಾಗಲೇ ಐದುವರೆ ಗಂಟೆ ಆಗಿದೆ. ಇನ್ನು ಯಾವಾಗ ಪ್ರಾರಂಭ ಮಾಡುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ೨ ತಾಸು ಆಗುತ್ತದೆಂದು ಹೇಳಿದರು. ಹೀಗೇ ಎಷ್ಟು ದಿವಸ ೨ ತಾಸು ಕಳೆಯಬೇಕು ? ಈ ಬಗ್ಗೆ ಮೊನ್ನೆಯ ದಿವಸ ಚರ್ಚೆಯಾಗಿದೆ. ಬಿ. ಎ. ಸಿ. ನಲ್ಲಿ ಮಾನ್ಯ ಕೆ. ಹೆಚ್. ಪಾಟೀಲರು, ಶ್ರೀಮತಿ ನಾಗರತ್ನಮ್ಮನವರು ಸಹಾ ಇದ್ದರು. ಮಾನ್ಯ ಮೊಯ್ಲಿಯವರೂ ಕೂಡಾ ಇದ್ದರು. ಅವರೆಲ್ಲಾ ಆಗ್ರಹಪಡಿಸಿದಮೇಲೆ ಇದನ್ನು ೪ ಗಂಟೆಗೆ ತೆಗೆದುಕೊಂಡು ಮುಗಿಸೋಣವೆಂದಾಯಿತು. ಇದರ ಬಗ್ಗೆ ಆಗಲೇ ೪ ಗಂಟೆ ಚರ್ಚೆಯಾಗಿದೆ. ಈ ಬಗ್ಗೆ ಚರ್ಚೆಯಾಗುತ್ತಾ ಹೋಗಬೇಕೆಂದರೆ, ಆ ಮಾತು ಬೇರೆ. ಈ ಒಂದು ಘಟನೆ ಯಾವಾಗ ನಡೆದಿದೆ ? ಚರ್ಚೆಯ ಬಗ್ಗೆ ನಾನು ವಿರುದ್ಧ ಅಲ್ಲ,

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ೪ ಗಂಟೆಗೆ ಪ್ರಾರಂಭ ಮಾಡಲು ಎಲ್ಲರೂ ಒಪ್ಪಿದ್ದೆವು. ೪ ಗಂಟೆಗೆ ಚಾಲೂ ಆಗಲಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಇದು ಬಂದದ್ದು ಹೇಗೆ ? ಆಳಂದ, ರಾಮನಗರ, ಬೆಳಗಾಂನಲ್ಲಿ ಗೋಲೀಬಾರ್ ಆಯಿತು. ಅದೇನೂ ನಿನ್ನೆ ಮೊನ್ನೆ ಆದ ಘಟನೆಯೇ ? ಇದೇನೂ ಅಹಮದಾಬಾದ್ ಅಥವಾ ಬರೋಡಾದಲ್ಲಿ ಆದಂತಹ ಘಟನೆಯೇ ?

ಶ್ರೀ ಎ. ಎಂ. ಇಂಡಸ್‌ಗೇರಿ.—ಮಾನ್ಯ ಮುಖ್ಯಮಂತ್ರಿಯವರು......

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದೇನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆ ಮುಗಿಯಲಿ.

ಶ್ರೀ ರಾಮಕೃಷ್ಣಹೆಗ್ಡೆ.—ಅದನ್ನು ಸಮರ್ಥನೆ ಮಾಡುವುದಕ್ಕೆ ಹೋಗುವುದಿಲ್ಲ.